
"JANAPADA" Monthly - January 2017
"ಜನಪದ" ಮಾಸಿಕ – ಜನವರಿ 2017

Page No. -52
RNI No. KAR/KAN/2010/20676


Regd No. KA/BG/GPO-2526/2015-2017 License to post without prepayment WPP 34, Published on 27th
Dt. 29th & 30th Posted at (Every month), Bangalore PSO, Mysore Road, Bangalore - 26





ವಾರ್ಷಿಕ ಚಂದಾ ರೂ.25/–

# ಜನಪದ

ಜನವರಿ 2017







ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಬಸವನಬಾಗೇವಾಡಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು




ಅಖಿಲ ಭಾರತ ಸಾರ್ವಜನಿಕ ಸೇವಾ ಸಂವಹನಾ ಅಧಿಕಾರಿಗಳ ಕಾರ್ಯಾಗಾರದಲ್ಲಿ ಲಾಂಛನ ಬಿಡುಗಡೆ ಮಾಡಲಾಯಿತು



# ಜನಪದ

ಸಂಪುಟ–59
ಸಂಚಿಕೆ–10
ಜನವರಿ 2017

05 ಹೆಮ್ಮೆಯ ಗಣರಾಜ್ಯೋತ್ಸವ
• ಡಾ॥ ಆರ್. ಶಂಕರಪ್ಪ

10 ರಾಷ್ಟ್ರೀಯ ಮತದಾರರ ದಿನ
• ಪ್ರೊ. ಎಸ್. ರಾಮಕೃಷ್ಣಪ್ಪ

14 ಅಖಿಲ ಭಾರತ ಸಾರ್ವಜನಿಕ ಸೇವಾ ಸಂವಹನಾ ಅಧಿಕಾರಿಗಳ ಕಾರ್ಯಾಗಾರ

17 ಕನ್ನಡ ನುಡಿಹಬ್ಬದ ಸಂಭ್ರಮ
• ಗವಿಸಿದ್ದಪ್ಪ ಹೊಸಮನಿ

23 ಹೊಸ ವರ್ಷ... ನೂರು ಬಣ್ಣ...
• ಎನ್. ಜಗನ್ನಾಥ ಪ್ರಕಾಶ್

28 ವಿಶ್ವಮಾನವ ಸ್ವಾಮಿ ವಿವೇಕಾನಂದ
• ಹೆಚ್. ಗಾಯಿತ್ರಿ

31 ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆ
• ವಿಷ್ಣು ನಾಯ್ಕ

34 ಊರ ಕೆರೆಗೆ ನೀರು ತುಂಬಿದ ಸಾಧನೆ
• ಪ. ರಾಮಕೃಷ್ಣಶಾಸ್ತ್ರಿ

38 ಬರದಲ್ಲೂ ಲಾಭದ ಘಮಲು; ಕೈ ಹಿಡಿದ ಸುಗಂಧರಾಜ
• ತುಕಾರಾಂ ರಾವ್ ಬಿ. ವಿ.

40 ಸೂರ್ಯ ಪಥಚಲನೆಯ ಪರ್ವದಿನ : ಸಂಕ್ರಾಂತಿ
• ಗುರುರಾಜ ಪೋಶೆಟ್ಟಿಹಳ್ಳಿ

42 ಜನಪದರ ಆಚರಣೆಗಳಲ್ಲಿ ರಥ
• ಅರ್ಚನಾ ಹೆಗಡೆ

44 ಕರಾವಳಿ ಉತ್ಸವ 2016
• ನಾಗರಾಜ ಹರಪನಹಳ್ಳಿ

46 ಡಚ್ ಚಿತ್ರಗಾರ ರಾಬರ್ಟ್ ಗೀಸಿಂಕ್ ಇನ್ನು ಬರೀ ನೆನಪು
• ರಾಮಲಿಂಗಪ್ಪ ಬಿ. ಕೆ.

49 ಮುರಳೀ ಗಾನಲೋಲ – ಬಾಲ ಮುರಳಿ ಕೃಷ್ಣ
• ಕೆ. ಎಸ್. ಸೋಮೇಶ್ವರ

1,4 ರಕ್ಷಾಪುಟ ಚಿತ್ರ : ಮಂಜುನಾಥ್ ಸುಳ್ಳೊಳ್ಳಿ, ಸಹಾಯಕ ನಿರ್ದೇಶಕರು, ಬಾಗಲಕೋಟೆ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು

ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ


# ಓದುಗರಿಂದ...

**ವಾರ್ತಾ ಇಲಾಖೆ 'ಸಂಪರ್ಕ ಸೇತುವೆ'**

ಡಿಸೆಂಬರ್ ಮಾಹೆಯ ಜನಪದ ಸಂಚಿಕೆಯು ಕೆಲವೊಂದು ಉಪಯುಕ್ತ ಮಾಹಿತಿಯನ್ನು ಒಳಗೊಂಡಂತೆ ಹೊರಬಂದಿರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳು ರೂಪಿಸುವ ಯೋಜನೆಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಪ್ರಚುರ ಪಡಿಸಿದಾಗಲೇ ಅದಕ್ಕೆ ನಿಜವಾದ ಅರ್ಥ ಬರುವುದು. ಯೋಜನೆಯ ಜಯವೇ ಜನತೆಯ ಅಭ್ಯುದಯ ಎಂಬ ಸರ್ಕಾರದ ಧ್ಯೇಯದಲ್ಲಿ ವಾಕ್ಯ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಜನತೆಯ ನಡುವೆ ಸಂಪರ್ಕ ಸೇತುವೆಯಾಗಿ ಹಾಗೂ ಸದಾ ಭಾವಸ್ಪಂದನೆ ಹೊಂದಿ ಕಾರ್ಯನಿರ್ವಹಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ತಮ್ಮ ಇಲಾಖೆಯ ವತಿಯಿಂದ ರಾಜ್ಯಾದ್ಯಂತ ಪ್ರತಿ ತಿಂಗಳು ನಡೆಸುತ್ತಿರುವ ಗ್ರಾಮವಾಹಿನಿ ಮತ್ತು ಗ್ರಾಮಸಂಪರ್ಕ ಕಾರ್ಯಕ್ರಮಗಳ ಮೂಲಕ ಸರ್ಕಾರಿ ಯೋಜನೆಗಳು ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾದ ರೀತಿಯಲ್ಲಿ ಹಾಗೂ ಪರಿಣಾಮಕಾರಿಯಾಗಿ ಪ್ರಚಾರವಾಗಬೇಕು. ಆಗ ಮಾತ್ರ ಸರ್ಕಾರಗಳು ರೂಪಿಸುವ ಯೋಜನೆಗಳು ಜನಸಾಮಾನ್ಯರಿಗೆ ತಲುಪಲು ಸಾಧ್ಯ.

ಈ ಸಂಚಿಕೆಯಲ್ಲಿ ಮೂಡಿಬಂದ ಭಾರತದ ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಕರ್ತವ್ಯಗಳು ಕುರಿತ ಲೇಖನವೂ ಉಪಯುಕ್ತವಾಗಿದೆ. ಹಾಗೂ 'ಸಚ್ಚಾರಿತ್ರ್ಯ ನಿರ್ಮಾಣವೇ ಶಿಕ್ಷಣ ಗುರಿಯಾಗಲಿ' ಲೇಖನವು ಅರ್ಥಪೂರ್ಣವಾಗಿರುತ್ತದೆ.

**ಸಣ್ಣೇಗೌಡ**
ಹಾಸನ




ಐತಿಹಾಸಿಕ ಕಟ್ಟಡಗಳಲ್ಲಿ ಒಂದಾದ ಸಂತ ಫಿಲೋಮಿನಾ ಚರ್ಚ್‌ನ ವಿಶಿಷ್ಟವಾದ ಕಟ್ಟಡವನ್ನು ಚಿತ್ರ ಸಮೇತ ಪ್ರಕಟಿಸಿ ಅದರ ಹಿನ್ನೆಲೆಗಳನ್ನು ಎಳೆ ಎಳೆಯಾಗಿ ವಿವರಿಸಿ ತಿಳಿಸಿರುವಿರಿ. ಇದರಿಂದ ಅರಮನೆ ನಗರಿಯ ವೈಭವವು ಎಷ್ಟು ಉತ್ತುಂಗಕ್ಕೇರಿದೆ ಎಂಬುದು ಇತಿಹಾಸಗಳಿಂದ ತಿಳಿದುಬಂದಿದೆ. ಚರ್ಚ್ ಹೊರಾಂಗಣ ಹಾಗೂ ಒಳಾಂಗಣ ಎರಡೂ ಚಿತ್ರಗಳು ಅತೀ ಮನೋಹರವಾಗಿ ಮೂಡಿ ಬಂದಿದೆ. ಕಣ್ಮನ ಸೆಳೆಯುವ ಈ ಕಟ್ಟಡ ಕ್ರೈಸ್ತ ಧರ್ಮದ ಸಂಕ್ಷಿಪ್ತ ಪರಿಚಯ ಮಾಡಿಕೊಡುತ್ತದೆ. ನಿಜಕ್ಕೂ ಸಂತ ಫಿಲೋಮಿನಾ ಚರ್ಚ್ ದೇಶದಲ್ಲಿಯೇ ವಿಶಿಷ್ಟವಾದ ಕಟ್ಟಡ. ಪ್ರತಿ ಹಂತದಲ್ಲೂ ಶಿಲ್ಪಿಗಳ ಕುಸುರಿ ಕೆಲಸ, ಕೈ ಚಮತ್ಕಾರವನ್ನು ಚರ್ಚ್ ಪ್ರತಿಬಿಂಬಿಸುತ್ತದೆ. ಇದೇ ರೀತಿಯಾಗಿ 'ಜನಪದ'ದಲ್ಲಿ ಇನ್ನೂ ಅನೇಕ ಐತಿಹಾಸಿಕ ಕಟ್ಟಡಗಳ ಪರಿಚಯ ಮೂಡಿಬರಲಿ ಎಂದು ಆಶಿಸುತ್ತೇನೆ.

**–ವಿಲ್ಸನ್ ಅಲೆಕ್ಸಾಂಡರ್**
ಮುಂಡಗೋಡ

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಕನ್ನಡ ನಾಡಿನ ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಹಂಪಿಯ ಉತ್ಸವ ಮೂಲಕ ಹೊತ್ತು ತಂದಂತಹ ನೆಚ್ಚಿನ ಜನಪದ ಮಾಸಿಕ. ನಾಡಿನ ಕಲೆ, ಸಂಸ್ಕೃತಿಗಳ ಹಿರಿಮೆ, ಲೇಖಕರು ಕನ್ನಡ ನಾಡಿನ ಕಲಾ ಶ್ರೀಮಂತಿಕೆ, ಹಂಪಿಯ ಉತ್ಸವದ ಸೊಬಗನ್ನು ಖುದ್ದಾಗಿ ಕಣ್ಣು ತುಂಬ ನೀಡಿದ ಹಾಗೆ ಗರಿ ಗರಿಯಾಗಿ ಬಿಡಿಸಿ ತಿಳಿಸಿದ್ದಾರೆ. ಲೇಖನ ಭಾವಚಿತ್ರಗಳ ಜೊತೆಗೆ ಬಹಳ ಸುಂದರವಾಗಿ ಮೂಡಿಬಂದಿದೆ. ಇಂತಹ ಲೇಖನದೊಂದಿಗೆ ಸುವ್ಯವಸ್ಥೆ ಮತ್ತು ಕಾನೂನು ಪಾಲನೆಗೆ ಹೆಸರಾದ ಕರ್ನಾಟಕದಲ್ಲಿನ ಪೊಲೀಸ್ ವ್ಯವಸ್ಥೆ ಹಾಗೂ ಇಲಾಖೆಯಲ್ಲಿನ ಸುಧಾರಣೆಗಳ ಬಗ್ಗೆ ತಿಳಿಸಿಕೊಟ್ಟಿದ್ದಕ್ಕೆ 'ಜನಪದ' ಬಳಗಕ್ಕೆ ನನ್ನ ಧನ್ಯವಾದಗಳು

**–ಬಸವರಾಜ ಯಾದವ್**, ಬಳ್ಳಾರಿ

**ರೈತರಿಗೆ ವರದಾನ**

ಗದಗ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಗೆ ನೀರಾವರಿ ಭಾಗ್ಯ ದೊರೆತಿರುವುದು ಬಹಳ ಸಂತಸದಾಯಕ ವಿಷಯ. ತುಂಗಭದ್ರೆ ಈಗ ಈ ಜಿಲ್ಲೆಗಳ ರೈತರಿಗೆ ವರದಾನವಾಗಿರುವುದು ಬಹಳ ಸಮಾಧಾನಕರ ಅಂಶ. ಈ ಭಾಗದ ಜನರ ಬಹುದಿನಗಳ ಬೇಡಿಕೆ ಈಗ ಈಡೇರಿರುವುದು ಈ ಜನರ ಸೌಭಾಗ್ಯವೇ ಸರಿ.

**– ಸತೀಶ್ ಕುಮಾರ್.ಜಿ.**
ದಾವಣಗೆರೆ

ಡಿಸೆಂಬರ್ 2016 'ಜನಪದ'ದಲ್ಲಿ ಎಲ್ಲ ಲೇಖನಗಳು ಬಹಳ ಆಸಕ್ತಿಯಿಂದ ಓದಿಸಿಕೊಂಡು ಹೋದವು. ಭರವಸೆ ನೀಡಿದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಜನರು ಸಂಕಷ್ಟದ ಸಮಯದಲ್ಲಿ ಗುಳೆ ಹೋಗುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಬಹು ಉಪಕಾರಿ ಯೋಜನೆಯಿದು. ಯೋಜನೆಯ ಇತಿಹಾಸ, ಕಾರ್ಯ ವೈಖರಿ ಲೇಖಕರು ಚೆನ್ನಾಗಿ ವಿವರಿಸಿದ್ದಾರೆ.

**– ಬಿ.ಎನ್. ಸೊಲ್ಲಾಪುರೆ**
ಬೀದರ್





# ಹೆಮ್ಮೆಯ ಗಣರಾಜ್ಯೋತ್ಸವ

**ಡಾ॥ ಆರ್.ಶಂಕರಪ್ಪ**

**ನಮ್ಮ ಸಂವಿಧಾನ ಕಾರ್ಯಸಾಧುವಾದದ್ದು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಹೊಂದಾಣಿಕೆ ಗುಣವುಳ್ಳದ್ದು. ಶಾಂತಿ, ನೆಮ್ಮದಿ ಸಮಯದಲ್ಲೂ, ಯುದ್ಧ ಸಮಯದಲ್ಲೂ ದೇಶವನ್ನು ಏಕತ್ರವಾಗಿ ಹಿಡಿದಿರಿಸಬಲ್ಲ ಸಾಮರ್ಥ್ಯ ಅದಕ್ಕಿದೆ. ಒಂದೊಮ್ಮೆ ಸಂವಿಧಾನದ ಅಡಿಯಲ್ಲಿ ವ್ಯವಸ್ಥೆ ತಪ್ಪುದಾರಿಯಲ್ಲಿ ಹೋಯಿತು ಎಂದರೆ ಅದಕ್ಕೆ ವ್ಯಕ್ತಿಗಳು ಕಾರಣರೇ ವಿನಾ ನಾವು ಕೆಟ್ಟ ಸಂವಿಧಾನವನ್ನು ಹೊಂದಿದ್ದೇವೆ ಎಂದಲ್ಲ.**

**–ಡಾ॥ ಬಿ.ಆರ್.ಅಂಬೇಡ್ಕರ್**


ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ (ರಾವಿನದಿಯ ತೀರದಲ್ಲಿ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರದ ಪ್ರತಿಜ್ಞೆಯನ್ನು ಸ್ವೀಕರಿಸಿತು. ಗಾಂಧೀಜಿಯವರು "ಸ್ವರಾಜ್ಯವೆಂದರೆ ಸಂಪೂರ್ಣ ಸ್ವಾತಂತ್ರ್ಯ" ಎಂದರ್ಥ ಎಂದು ಘೋಷಿಸಿದರು. ಗಾಂಧೀಜಿಯವರು ಸ್ವಾತಂತ್ರ್ಯದ ತಿರುಳು ಎಂಬ ನಾಮಾಂಕಿತದಲ್ಲಿ 11 ಬೇಡಿಕೆಗಳನ್ನು ಜನರ ಮುಂದಿಟ್ಟರು. ಆ ಎಲ್ಲಾ ಬೇಡಿಕೆಗಳನ್ನು ಪೂರೈಸಿದರೆ ಕಾನೂನು ಭಂಗ ಚಳುವಳಿಯ ಅವಶ್ಯಕತೆ ಇರುವುದಿಲ್ಲವೆಂದು ಹೇಳಿದರು. 1930 ಜನವರಿ 26 ರಂದು ಸ್ವಾತಂತ್ರ್ಯದ ದಿನಾಚರಣೆಯನ್ನು ಭಾರತಾದ್ಯಂತ ಆಚರಿಸಲಾಯಿತು. ಇದರ ನೆನಪಿಗಾಗಿ ಭಾರತ ಸಂವಿಧಾನವನ್ನು ಜನವರಿ 26. 1950 ರಂದು ಜಾರಿಗೆ ತರಲಾಯಿತು. ಈ ದಿನವನ್ನೇ ಗಣರಾಜ್ಯೋತ್ಸವ ದಿನ ಎಂದು ಕರೆಯುತ್ತೇವೆ.

ಭಾರತ ಉತ್ತಮ ಆದರ್ಶಗಳು ಮೌಲ್ಯಗಳನ್ನು ಹೊಂದಿರುವ ಒಂದು ಬೃಹತ್ ಸಂವಿಧಾನವನ್ನು ಅಂಗೀಕರಿಸಿ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಿ ರೂಪುಗೊಂಡಿದೆ. ಸುಮಾರು 200 ವರ್ಷಗಳು ಭಾರತವನ್ನಾಳಿದ ಬ್ರಿಟೀಷರು ತಮ್ಮ ಆಳ್ವಿಕೆಗೆ ತೆರೆ ಎಳೆಯುವ ಸಂದರ್ಭದಲ್ಲಿ ದ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಆಪ್ 1947ನ್ನು ರೂಪಿಸಿದರು. ದ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಆಪ್ 1947ನ್ನು ರಚಿಸಿ. ಭಾರತ ಮತ್ತು ಪಾಕಿಸ್ತಾನ ಸಂವಿಧಾನ ಸಮಿತಿಗಳನ್ನು ರಚಿಸಿಕೊಳ್ಳಬಹುದು. ತಮಗೆ ಅನುಮೋದನಾ ಯೋಗ್ಯವಾದ ಸಂವಿಧಾನಗಳನ್ನು ರೂಪಿಸಿಕೊಂಡು, ಜಾರಿಗೆ ತರಬಹುದು ಎಂದು ಸ್ಪಷ್ಟೀಕರಿಸಿತ್ತು. ವಾಸ್ತವಿಕವಾಗಿ ಭಾರತ ಸ್ವಾತಂತ್ರ ಕಾನೂನು 1947 ಅಸ್ತಿತ್ವಕ್ಕೆ ಬರುವುದಕ್ಕಿಂತ 1 ವರ್ಷ ಮೊದಲೇ ಸಂವಿಧಾನ ರಚನಾಸಮಿತಿ ರಚನೆಯಾಗಿತ್ತು. ಬ್ರಿಟಿಷ್ ಕ್ಯಾಬಿನೆಟ್ ಮಿಷನ್ ಪ್ಲಾನ್ 1946ರ ಆಧಾರದಿಂದ ಅವಿಭಕ್ತ ಭಾರತ ದೇಶಕ್ಕೆ ಪ್ರತ್ಯೇಕ ಸಂವಿಧಾನವನ್ನು ರೂಪಿಸುವ ಉದ್ದೇಶದಿಂದ ಆ ಸಮಿತಿಯನ್ನು ಏರ್ಪಡಿಸಲಾಗಿತ್ತು. ಆ ಸಮಿತಿಯ ಮೊದಲ ಸಮಾವೇಶ 1.12.1946ರಂದು ನಡೆಯಿತು.

ಈ ಸಮಿತಿ ಸಭೆ ಸ್ವಾತಂತ್ರ್ಯ ಘೋಷಣೆ ಸಮೀಪಿಸಿದ ಹಂತದಲ್ಲಿ 1947ರ ಆಗಸ್ಟ್ 14 ರಂದು ಪುನಃ ಸಮಾವೇಶಗೊಂಡಿತು ಬ್ರಿಟಿಷ್ ಸರ್ಕಾರದಿಂದ ಅಧಿಕಾರ ಹಸ್ತಾಂತರ ಮಾಡಿಕೊಂಡು ಸ್ವತಂತ್ರ ದೇಶದ ಅವಿರ್ಭಾವಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳುವುದರ ಬಗ್ಗೆ ಚರ್ಚಿಸುವುದೇ ಆ ಸಮಾವೇಶದ ಉದ್ದೇಶವಾಗಿತ್ತು.

ಸಂವಿಧಾನ ರಚನಾ ಸಮಿತಿ 1949ರ ಮೇನಲ್ಲಿ ಭಾರತ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಬೇಕೆಂದು ಐತಿಹಾಸಿಕ ನಿರ್ಣಯವೊಂದನ್ನು ಅಂಗೀಕರಿಸಿತು. ಒಟ್ಟು 385 ಸದಸ್ಯರನ್ನು ಒಳಗೊಂಡ ಸಂವಿಧಾನ ರಚನಾ ಸಮಿತಿ 1946 ಡಿಸೆಂಬರ್ 9ರಲ್ಲಿ ಡಾ॥ ಸಚ್ಚಿದಾನಂದ ಸಿನ್ಹಾರವರ ತಾತ್ಕಾಲಿಕ ಅಧ್ಯಕ್ಷತೆಯಲ್ಲಿ ರಚನೆಯಾಯಿತು. 1946 ಡಿಸೆಂಬರ್ –11 ರಂದು ಡಾ॥ ರಾಜೇಂದ್ರಪ್ರಸಾದ್ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾದರು. 1947ರ ಆಗಸ್ಟ್ 15ರ ನಂತರ ಸಂಪೂರ್ಣ ಕಾರ್ಯೋನ್ಮುಖವಾದ ಸಮಿತಿ 2 ವರ್ಷ 11 ತಿಂಗಳು 17 ದಿನಗಳ ನಿರಂತರ ಶ್ರಮದ ನಂತರ ಪ್ರಾಥಮಿಕ ಕರಡನ್ನು ಸಿದ್ಧಪಡಿಸಿತು. ಸುಮಾರು 114 ದಿನಗಳ ಕಾಲ ಕರಡು ಸಂವಿಧಾನದ ಬಗ್ಗೆ ಚರ್ಚೆ ನಡೆದು ಅಂತಿಮವಾಗಿ ಸಂವಿಧಾನನ್ನು 26.11.1949ರಂದು ಅಂಗೀಕರಿಸಲಾಯಿತು. ಕೊನೆಗೆ 395 ವಿಧಿಗಳು 8 ಅನುಸೂಚಿಗಳು 22 ಅಧ್ಯಾಯಗಳನ್ನು ಒಳಗೊಂಡ ಸಂವಿಧಾನ ಜನವರಿ 26 1950 ರಂದು ಜಾರಿಗೆ ಬಂದಿತು. ಇದೇ ದಿನವನ್ನು ಪ್ರತಿವರ್ಷ ಗಣರಾಜ್ಯ ದಿನವನ್ನಾಗಿ ಅಚರಿಸಲಾಗುತ್ತಿದೆ.

ನಮ್ಮ ಸಂವಿಧಾನವನ್ನು ರಚಿಸುವಲ್ಲಿ ಅತ್ಯಂತ ಶ್ರಮವನ್ನು ವಹಿಸಿರುವ ಸಂವಿಧಾನ ರಚನಾಕಾರರಲ್ಲಿ ಒಬ್ಬರಾದ ಕರ್ನಾಟಕದ ಹೆಮ್ಮೆಯ ಪುತ್ರ ಬಿ.ಎನ್.ರಾವ್ ಅನೇಕ ಸಂವಿಧಾನಗಳನ್ನು ಅಧ್ಯಯನ ಮಾಡಿ ಹಲವಾರು ಉತ್ತಮ ಅಂಶಗಳನ್ನು ನಮ್ಮ ಸಂವಿಧಾನಕ್ಕೆ ಸೇರಿಸಿದ್ದಾರೆ. ಅವುಗಳನ್ನು ತಿದ್ದಿ ಉತ್ತಮ ರೂಪ ಕೊಟ್ಟು ಕರಡು ಸಮಿತಿ ಅಧ್ಯಕ್ಷರಾದ ಡಾ॥



ಭಾರತದ ಸಂವಿಧಾನ ರಚನಾಸಮಿತಿ

ಬಿ.ಆರ್. ಅಂಬೇಡ್ಕರ್ ಅತ್ಯುತ್ತಮ ಸಂವಿಧಾನವನ್ನು ದೇಶಕ್ಕೆ ನೀಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಹಲವು ರಾಷ್ಟ್ರಗಳ ಸಂವಿಧಾನಗಳಿಂದ ಕೆಲವು ಮುಖ್ಯ ಅಂಶಗಳನ್ನು ಆರಿಸಿಕೊಂಡು ನಮ್ಮ ಸಂವಿಧಾನಕ್ಕೆ ಅಳವಡಿಸಿಕೊಳ್ಳಲಾಗಿದೆ. ಭಾರತದ ಪ್ರಜೆಗಳಾದ ನಾವು ನಮ್ಮ ಸಂವಿಧಾನವನ್ನು ಸಾರ್ವಭೌಮ ಸಮಾಜವಾದಿ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ ಎನ್ನುವ ಪ್ರಸ್ತಾವನೆಯ ಮೂಲಕ ಪ್ರಾರಂಭವಾಗುವ ನಮ್ಮ ಸಂವಿಧಾನ, ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇವು ಭಾರತ ರಾಜಕೀಯ ಪದ್ಧತಿಯ 4 ಆಧಾರ ಸ್ತಂಭಗಳಿದ್ದಂತೆ. ರಾಷ್ಟ್ರದ ಎಲ್ಲಾ ಪ್ರಜೆಗಳಿಗೂ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವುದೇ ನಮ್ಮ ಸಂವಿಧಾನದ ಮುಖ್ಯ ಗುರಿಯಾಗಿದೆ.

ಗ್ರಾನವಿಲ್ಲೇ ಆಸ್ಟಿನ್ "ಭಾರತ ಸಂವಿಧಾನ ಒಂದು ಸಾಮಾಜಿಕ ದಾಖಲೆ" ಎಂದು ವರ್ಣಿಸಿದ್ದಾರೆ. ನಮ್ಮ ಸಂವಿಧಾನಕ್ಕೆ– ಪೂರ್ವ ಪೀಠಿಕೆಯನ್ನು ರಷ್ಯಾ ಸಂವಿಧಾನದಿಂದ, ಮೂಲಭೂತ ಹಕ್ಕುಗಳನ್ನು ಅಮೇರಿಕಾ ಸಂವಿಧಾನದಿಂದ, ಮೂಲಭೂತ ಕರ್ತವ್ಯಗಳನ್ನು ರಷ್ಯಾ ಸಂವಿಧಾನದಿಂದ, ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವ–ಫ್ರಾನ್ಸ್ ಕ್ರಾಂತಿಯಿಂದ, ರಾಜ್ಯನಿರ್ದೇಶಕ ತತ್ವಗಳನ್ನು–ಐರ್ಲೆಂಡ್ ಸಂವಿಧಾನದಿಂದ, ಸಂಯುಕ್ತ ಪದ್ಧತಿ, ರಾಜ್ಯಪಾಲರ ನೇಮಕ ಒಕ್ಕೂಟದಲ್ಲಿ ಕೆನಡ ಸಂವಿಧಾನದಿಂದ ನ್ಯಾಯಿಕ ವಿಮರ್ಶೆ, ಅಧಿಕಾರ ವಿಭಜನೆ, ನ್ಯಾಯಾಧೀಶರ ಪದಚ್ಯುತಿಗಳನ್ನು ಅಮೇರಿಕಾ ಸಂವಿಧಾನದಿಂದ, ಏಕಪೌರತ್ವ, ಕಾಯಿದೆ ನಿಯಮ ಸಂಸದೀಯ ಸರ್ಕಾರ ಪದ್ಧತಿ, ಶಾಸಕಾಂಗ, ಕ್ಯಾಬಿನೆಟ್ ಪದ್ಧತಿ ಸರ್ಕಾರ, ನ್ಯಾಯಿಕ ಆಜ್ಞೆಗಳನ್ನು ಬ್ರಿಟನ್ ಸಂವಿಧಾನದಿಂದ, ತುರ್ತು ಪರಿಸ್ಥಿತಿಯನ್ನು ಜರ್ಮನಿ ಸಂವಿಧಾನದಿಂದ, ಮುಕ್ತ ವ್ಯಾಪಾರ–ಆಸ್ಟ್ರೇಲಿಯ ಸಂವಿಧಾನದಿಂದ, ರಾಜ್ಯಸಭಾ ಸದಸ್ಯರ ಚುನಾವಣೆ–ದಕ್ಷಿಣ ಅಫ್ರಿಕಾ ಸಂವಿಧಾನದಿಂದ ತೆಗೆದುಕೊಳ್ಳಲಾಗಿದೆ.

ಭಾರತ ಸಂವಿಧಾನದಿಂದ 12 ರಿಂದ 35ನೇ ವಿಧಿಗಳಲ್ಲಿ ಮೂಲಭೂತ ಹಕ್ಕುಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದು 32ನೇ ವಿಧಿಯಲ್ಲಿ ಸಂವಿಧಾನಾತ್ಮಕ ಪರಿಹಾರದ ಹಕ್ಕಿಗೆ ಅವಕಾಶ ಕಲ್ಪಿಸಲಾಗಿದೆ. 32ನೇ ವಿಧಿಪ್ರಕಾರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಬಹುದು. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು 'ಮೂಲಭೂತ ಹಕ್ಕುಗಳ ರಕ್ಷಕ ಮತ್ತು ಗ್ಯಾರಂಟರ್' ಎಂದು ಕರೆಯಲಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿರುವ ಸಂವಿಧಾನದ 15ನೇ ಭಾಗದಲ್ಲಿ 324ರಿಂದ 329ನೇ ವಿಧಿಗಳಲ್ಲಿ ಚುನಾವಣೆಗಳ ಮೂಲಕ ಜನರೇ ಪ್ರತಿನಿಧಿಗಳನ್ನು ಆಯ್ಕೆ ಮಾಡುವ, ಉತ್ತಮ ಆಡಳಿತಾತ್ಮಕ ವ್ಯವಸ್ಥೆಯನ್ನು ನೀಡಿದ್ದರೆ ಮತ್ತೆ ಚುನಾವಣೆಗಳ ಮೂಲಕ ಸರ್ಕಾರಗಳನ್ನು ಬದಲಾಯಿಸುವ ಹಕ್ಕನ್ನು ಜನರಿಗೆ ನೀಡಲಾಗಿದೆ.

ದೇಶದ ಏಕತೆ ಸಮಗ್ರತೆಗಳನ್ನು ಉಳಿಸಿಕೊಳ್ಳಲು ಒಕ್ಕೂಟ ವ್ಯವಸ್ಥೆ ಕಾಪಾಡಿಕೊಳ್ಳಲು ಭಾರತದ ಸಾರ್ವಭೌಮತೆ ಎತ್ತಿ ಹಿಡಿಯುವ ಗಣರಾಜ್ಯೋತ್ಸವ (ಸಂವಿಧಾನ ರಚನೆ) ನಾಡಿನ

**ಭಾರತ ಸಂವಿಧಾನದಿಂದ 12 ರಿಂದ 35ನೇ ವಿಧಿಗಳಲ್ಲಿ ಮೂಲಭೂತ ಹಕ್ಕುಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದು 32ನೇ ವಿಧಿಯಲ್ಲಿ ಸಂವಿಧಾನಾತ್ಮಕ ಪರಿಹಾರದ ಹಕ್ಕಿಗೆ ಅವಕಾಶ ಕಲ್ಪಿಸಲಾಗಿದೆ. 32ನೇ ವಿಧಿಪ್ರಕಾರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಬಹುದು.**

ಜನರ ಅಭಿವೃದ್ಧಿಯ ಕನಸುಗಳನ್ನು ಸಾಕಾರಗೊಳಿಸುವಂತೆ ರೂಪಿತವಾಗಿದೆ. ಸಮಾನತೆ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಸಹಕಾರಿಯಾಗಿದೆ.

ನೆಹರೂ ಪ್ರಕಾರ ಸ್ವತಂತ್ರ ಮತ್ತು ಪ್ರಜಾಸತಾತ್ಮಕ ರಾಷ್ಟ್ರದ ಸ್ಥಾಪನೆಗೆ ಹೋರಾಡಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಭಿಲಾಷೆಯೆಂದರೆ ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಆಯ್ಕೆಯಾದ ಸಂವಿಧಾನ ರಚನಾ ಸಭೆ ಸ್ವತಂತ್ರ ಭಾರತದ ಸಂವಿಧಾನವನ್ನು ರಚಿಸುವುದೇ ಆಗಿದೆ.

ಸರಕಾರದ ಅಧಿಕಾರವನ್ನು ಜನತೆಯ ಹಕ್ಕುಗಳನ್ನು ಸಮನ್ವಯಗೊಳಿಸುವ ನಿಯಮಗಳ ಸಂಕಲನವನ್ನು ಸಂವಿಧಾನ ಎನ್ನುತ್ತೇವೆ. ನ್ಯಾಯಶಾಸ್ತ್ರದ ಪ್ರಕಾರ ಸಂವಿಧಾನವು ರಾಷ್ಟ್ರದ ಮೂಲಭೂತ ಕಾನೂನು. ಭಾರತ ಸಂವಿಧಾನ 26–11–1949 ರಂದು ಅಂಗೀಕೃತವಾಗಿ 26–01–1950 ರಿಂದ ಜಾರಿಗೆ ಬಂದಿದೆ. ಜನವರಿ 26ರಂದೇ ಸಂವಿಧಾನವನ್ನು ಅಂಗೀಕರಿಸಿದ್ದಕ್ಕೆ ಒಂದು ಅರ್ಥಪೂರ್ಣ ಹಿನ್ನೆಲೆ ಇದೆ. 1929ರ ಡಿಸೆಂಬರ್ 31ರ ರಾತ್ರಿ ಲಾಹೋರ್‌ಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತಕ್ಕೆ ಪೂರ್ಣ ಸ್ವರಾಜ್ಯ ಪಡೆಯಬೇಕೆಂಬ ಗೊತ್ತುವಳಿಯನ್ನು ಅನುಷ್ಠಾನಕ್ಕೆ ತರವ ಜವಾಬ್ದಾರಿಯನ್ನು ಮಹಾತ್ಮಾಗಾಂಧೀಜಿಯವರಿಗೆ ನೀಡಲಾಗಿತ್ತು. ಆ ಗೊತ್ತುವಳಿಯನ್ನು ಕಾರ್ಯಗತಗೊಳಿಸಲು ಪ್ರಜೆಗಳು ಎಷ್ಟರ ಮಟ್ಟಿಗೆ ಸಿದ್ಧರಾಗಿದ್ದಾರೆ ಎಂಬುದನ್ನು ಪರೀಕ್ಷಿಸಲು ಗಾಂಧೀಜಿ ಒಂದು ಉಪಾಯ ಮಾಡಿದರು. ಡಿಸೆಂಬರ್ 31 ರ ರಾತ್ರಿ ಅಂಗೀಕರಿಸಿದ ಗೊತ್ತುವಳಿಯ ಒಂದೆರಡು ವಾಕ್ಯಗಳನ್ನು ಅಂದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಏಕಮಾತ್ರ ಗುರಿ ಪೂರ್ಣ ಸ್ವರಾಜ್ಯ. ತನ್ಮೂಲಕ ಈ ದೇಶದಲ್ಲಿ ಸರ್ವರೂ ಸಮಾನರಾಗಿ ಬದುಕುವ ಆಜನ್ಮ ಸಿದ್ಧ ಹಕ್ಕು ಪ್ರಜೆಗಳಿಗಿದೆ. ಈ ಉದ್ದೇಶಕ್ಕೆ ಭಂಗ ತರುವ ಆಡಳಿತವನ್ನು ಬದಲಾಯಿಸಲು, ಅಗತ್ಯ ಬಿದ್ದರೆ ಬುಡ ಮೇಲು ಮಾಡಲು ನಮಗೆ ಅಧಿಕಾರ, ಹಕ್ಕು ಇದೆ ಎಂಬ ಮಾತುಗಳನ್ನು 1930ರ ಜನವರಿ 26 ರಂದು ದೇಶದ ಜನ ಕಾಂಗ್ರೆಸ್ ಧ್ವಜ ಹಾರಿಸಿ ಸಾಮೂಹಿಕವಾಗಿ ಘೋಷಿಸಬೇಕೆಂದು ಕರೆ ಕೊಟ್ಟರು.

ಅಂದು ದೇಶದ ಪ್ರಜೆಗಳು ಧೈರ್ಯದಿಂದ ಈ ಪೂರ್ಣ ಸ್ವರಾಜ್ಯದ ಗೊತ್ತುವಳಿಯನ್ನು ಪ್ರಚಂಡವಾಗಿ ಬೆಂಬಲಿಸಿದರು ಆಗ ಗಾಂಧೀಜಿಗೆ ದೇಶದ ಜನ ಪೂರ್ಣ ಸ್ವರಾಜ್ಯ ಪ್ರಾಪ್ತಿಗೆ ಹೋರಾಡಲು ಸಿದ್ದರಿದ್ದಾರೆ ಎಂಬುದು ಮನದಟ್ಟಾಯಿತು. ಈ ಉದ್ದೇಶ ಫಲಿಸಿದ್ದು 1947 ರಲ್ಲಿ ಸ್ವಾತಂತ್ರ್ಯ ಬಂದ ದಿನದಂದು,

**ನಮ್ಮ ಸಂವಿಧಾನವನ್ನು ರಚಿಸುವಲ್ಲಿ ಅತ್ಯಂತ ಶ್ರಮವನ್ನು ವಹಿಸಿರುವ ಸಂವಿಧಾನ ರಚನಾಕಾರರಲ್ಲಿ ಒಬ್ಬರಾದ ಕರ್ನಾಟಕದ ಹೆಮ್ಮೆಯ ಪುತ್ರ ಬಿ.ಎನ್.ರಾವ್ ಅನೇಕ ಸಂವಿಧಾನಗಳನ್ನು ಅಧ್ಯಯನ ಮಾಡಿ ಹಲವಾರು ಉತ್ತಮ ಅಂಶಗಳನ್ನು ನಮ್ಮ ಸಂವಿಧಾನಕ್ಕೆ ಸೇರಿಸಿದ್ದಾರೆ.**

ಸ್ವಾತಂತ್ರ್ಯ ಪ್ರಾಪ್ತಿಯೊಂದೇ ಸ್ವರಾಜ್ಯದ ಗುರಿಯಾಗಿರಲಿಲ್ಲ. ಬಂದೇ ಬರಲಿದ್ದ ಸ್ವಾತಂತ್ರ್ಯವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದು ಮುಖ್ಯವಾದ ಗುರಿಯಾಗಿತ್ತು.

ಭಾರತ 67 ವರ್ಷಗಳ ಹಿಂದೆ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಿ ತನ್ನದೇ ಆದ ಸಂವಿಧಾನವನ್ನು ರಚಿಸಿಕೊಂಡಿತು. ಜನವರಿ 26–2017ಕ್ಕೆ ನಮ್ಮ ಸಂವಿಧಾನ ಜಾರಿಗೆ ಒಂದು 67 ವರ್ಷಗಳು ಪೂರೈಸಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನದ ರಚನೆ, ಸ್ವರೂಪ, ಹಾಗೂ ಮಹತ್ವ ಅಗತ್ಯ ಇತ್ಯಾದಿ ಅಂಶಗಳನ್ನು ಭಾರತದ ನಾಗರೀಕರೆಲ್ಲರೂ ತಿಳಿಯಬೇಕು. ಸುಮಾರು 200 ವರ್ಷಗಳ ಕಾಲ ಭಾರತವನ್ನಾಳಿದ ಬ್ರಿಟಿಷರು ತಮ್ಮ ಆಳ್ವಿಕೆಗೆ ತೆರೆ ಎಳೆಯುವ ಸಂದರ್ಭದಲ್ಲಿ "ದ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಆಫ್ 1947" ನ್ನು ರೂಪಿಸಿದರು. ಇದು ಅಧಿಕಾರ ಅವಧಿಯಲ್ಲಿ ಬದಲಾವಣೆಗೆ ನೆರವಾಯಿತು. ಈ ಕಾನೂನಿನ ಪ್ರಮುಖ ಅಂಶ ನಮ್ಮ ಸಂವಿಧಾನದ ರಚನೆಗೆ ತಳಹದಿ ಒದಗಿಸಿತು. "ದ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಆಫ್ 1947" ನ್ನು ರಚಿಸಿ ಭಾರತ ಪಾಕಿಸ್ತಾನ ರಾಷ್ಟ್ರಗಳು ಸಂವಿಧಾನಗಳನ್ನು ರೂಪಿಸಿಕೊಂಡು ಜಾರಿಗೆ ತರಬಹುದು ಎಂದು ಸ್ಪಷ್ಟೀಕರಿಸಿತ್ತು. ವಾಸ್ತವವಾಗಿ ಭಾರತ ಸ್ವಾತಂತ್ರ್ಯ ಕಾನೂನು 1947 ಹೊರಬೀಳುವುದಕ್ಕಿಂತಲೂ ವರ್ಷ ಮುಂಚಿತವಾಗಿಯೇ ಸಂವಿಧಾನ ಸಮಿತಿ ರಚನೆಯಾಗಿತ್ತು. ಬ್ರಿಟೀಷ್ ಕ್ಯಾಬಿನೆಟ್ ಮಿಷನ್ ಪ್ಲಾನ್ 1946ರ ಆಧಾರದಿಂದ ಅವಿಭಕ್ತ ಭಾರತ ದೇಶಕ್ಕೆ ಪ್ರತ್ಯೇಕ ಸಂವಿಧಾನ ರೂಪಿಸುವ ಉದ್ದೇಶದಿಂದ ಆ ಸಮಿತಿಯನ್ನು ಏರ್ಪಡಿಸಲಾಗಿತ್ತು. ಆ ಸಮಿತಿಯ ಮೊದಲ ಸಮಾವೇಶ 1946 ರ ಡಿಸೆಂಬರ್ 9 ರಂದು ಜರುಗಿತು.

ಸ್ವಾತಂತ್ರ್ಯ ಘೋಷಣೆ ಸಮೀಪಿಸಿದ ಹಂತದಲ್ಲಿ 1947 ರ ಆಗಸ್ಟ್ 14 ನೇ ತಾರೀಖು ಸಂವಿಧಾನ ಸಮಿತಿ ಪುನಃ ಸಮಾವೇಶಗೊಂಡಿತು. ಬ್ರಿಟಿಷ್ ಸರಕಾರದಿಂದ ಅಧಿಕಾರ ಹಸ್ತಾಂತರ ಮಾಡಿಕೊಳ್ಳುವುದು ಮತ್ತು ಸ್ವಾತಂತ್ರ ದೇಶದ ಅವಿರ್ಭಾವಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳುವುದರ ಬಗ್ಗೆ ಚರ್ಚಿಸುವುದೇ ಆ ಸಮಾವೇಶದ ಪ್ರಮುಖ ಉದ್ದೇಶವಾಗಿತ್ತು.

1946 ರ ಡಿಸೆಂಬರ್‌ನಲ್ಲಿ ಆದ ಸಮಾವೇಶಕ್ಕೂ 1947 ರ ಆಗಸ್ಟ್‌ನಲ್ಲಿ ಆದ ಸಮಾವೇಶಕ್ಕೂ ಮುಖ್ಯವಾದ ವ್ಯತ್ಯಾಸವಿದೆ. ಮೊದಲ ಸಮಾವೇಶ ಬ್ರಿಟಿಷ್ ಪಾರ್ಲಿಮೆಂಟಿನ ಹಿಡಿತಕ್ಕೊಳಪಟ್ಟಿದ್ದರೆ, 2ನೇ ಸಮಾವೇಶ ಸರ್ವತಂತ್ರ ಸ್ವತಂತ್ರವನ್ನು ಹೊಂದಿದ್ದು ವಿಶೇಷ. 1947ರಲ್ಲಿ ಭಾರತ ಸ್ವತಂತ್ರವಾಗಿ ಆನಂತರ ಮೂರು ವರ್ಷಗಳ ಕಾಲ ಹಲವಾರು ಮೇಧಾವಿಗಳು ಸಮಗ್ರ ಸಂವಿಧಾನ ರಚನೆಗೋಸ್ಕರ ಅವಿರತ ಶ್ರಮಪಟ್ಟಿದರಿಂದಲೇ ಭಾರತ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಲು ಸಾಧ್ಯವಾಯಿತು.

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತ ಕೂಡ ಸಾಂಪ್ರದಾಯಿಕ ಅಲಿಖಿತ ಸಂವಿಧಾನವನ್ನೇ ಅನುಸರಿಸುತ್ತಾ ಬಂದಿತ್ತು. ಆದರೆ ಗಾತ್ರ ಮತ್ತು ಜನಸಂಖ್ಯೆಯಲ್ಲಿ ಅತಿ ದೊಡ್ಡದಾಗಿರುವ ಭಾರತ ದೇಶ ವಿಭಿನ್ನ ಜಾತಿ, ಮತಗಳ ಸಂಸ್ಕೃತಿಗಳ ಸಂಗಮ ಎನ್ನುವುದನ್ನು ಗ್ರಹಿಸಿದರೆ ಇದಕ್ಕೊಂದು ಪ್ರತ್ಯೇಕ ಸಂವಿಧಾನ ಸಮಿತಿಯ ಅಗತ್ಯವಿದೆ ಎಂದು ಆಗಿನ ರಾಜಕೀಯ ತಜ್ಞರು ಹೇಳಿದರು. ಅವರಲ್ಲಿ ಮಹಾತ್ಮಾಗಾಂಧಿ ಪ್ರಮುಖರು.

ಪ್ರತ್ಯೇಕ ಸಂವಿಧಾನ ಸಮಿತಿಯ ಏರ್ಪಾಡಿನ ಬಗ್ಗೆ ಸ್ಪಷ್ಟ ಅಭಿಪ್ರಾಯಗಳೇಷ್ಟೇ ಕೇಳಿ ಬಂದರೂ 1935ರಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಬಗ್ಗೆ ಕಾಂಗ್ರೆಸ್ ತೀರ್ಮಾನಿಸಿದ ಅನಂತರವೇ ಪ್ರತ್ಯೇಕ ಸಂವಿಧಾನ ಸಮಿತಿಯ ಏರ್ಪಾಡಿನ ಅಂಶ ಪ್ರಮುಖವಾಗಿ ಬೆಳಕಿಗೆ ಬಂತು. ಕಾಂಗ್ರೆಸ್‌ನ ಪ್ರಧಾನ ಪ್ರತಿನಿಧಿಯಾಗಿ ನೆಹರು 1938 ರಲ್ಲಿ ಈ ವಿಷಯವನ್ನು ಸ್ಪಷ್ಟಗೊಳಿಸಿದರು.

ಸಂವಿಧಾನದ ಸಮಿತಿಯ ರಚನೆಗೆ ಕಾಂಗ್ರೆಸ್ ತೀವ್ರ ಒತ್ತಡ ತಂದರೂ ಎರಡನೇ ಮಹಾಯುದ್ಧ ಆರಂಭವಾದುದರಿಂದ



ಬ್ರಿಟಿಷ್ ಸರಕಾರ ಆ ಪ್ರಸ್ತಾಪವನ್ನು ತಾತ್ಕಾಲಿಕವಾಗಿ ಪಕ್ಕಕ್ಕೆ ಸರಿಸಿತು. 1939 ರ ಸೆಪ್ಟೆಂಬರ್ 14ನೇ ತಾರೀಖಿನಂದು ಸಂವಿಧಾನ ಸಮಿತಿಯ ಬಗ್ಗೆ ಒತ್ತಾಯಿಸುತ್ತಾ ಕಾಂಗ್ರೆಸ್, ಬ್ರಿಟಿಷ್ ಸರಕಾರಕ್ಕೆ ಮನಸ್ಸಿದ್ದರೆ ಭಾರತದಲ್ಲಿ ಜನತಂತ್ರ ಸ್ಥಾಪಿಸಲು ಒಪ್ಪಬೇಕು. ಭಾರತದ ಜನತೆ ತಮ್ಮದೇ ಆದ ಸಂವಿಧಾನ ಸ್ಫೂರ್ತಿಯಿಂದ ರೂಪಗೊಂಡ ಸರಕಾರ ರಚಿಸಿಕೊಳ್ಳಲು ಏರ್ಪಾಡುಗಳಾಗಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತು. ಆದರೆ ಎರಡು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿ ಭಾರತೀಯ ಮುಖಂಡರೊಂದಿಗೆ ರಾಯಭಾರ ನಡೆಸಲು ಸ್ಟ್ಯಾಫರ್ಡ್ ಕ್ರಿಪ್ಸ್ ಎನ್ನುವವರನ್ನು ಕಳಿಸಲಾಯಿತು. ಎರಡನೇ ಮಹಾಯುದ್ದದಲ್ಲಿ ನೆರವು ನೀಡಿ, ಯುದ್ಧಾನಂತರ ಅಧಿಕಾರ ಒಪ್ಪಿಸಲಾಗುತ್ತದೆ ಎಂದು ಕ್ರಿಪ್ಸ್ ಸಲಹೆ ಮಾಡಿದರು. ಕಾಂಗ್ರೆಸ್ ಮುಖಂಡರು ಅದನ್ನು ತಿರಸ್ಕರಿಸಿದ್ದರಿಂದ ರಾಯಭಾರ ವಿಫಲವಾಯಿತು. ಭಾರತೀಯರು 1942ರ ಮುಂಬೈ ಅಧಿವೇಶನದಲ್ಲಿ "ಭಾರತ ಬಿಟ್ಟು ತೊಲಗಿ" ಘೋಷಣೆ ಕೂಗಿದರು. ಈ ಘೋಷಣೆ ಆಕಾಶಕ್ಕೇರಿತ್ತು. ಆನಂತರ ಬ್ರಿಟನ್ನಿನಲ್ಲಿ ರಚನೆಯಾದ ಲೇಬರ್ ಪಕ್ಷದ ನೇತೃತ್ವದ ಸರಕಾರ ಪ್ರಮುಖ ನಿರ್ಧಾರಗಳನ್ನು ಕೈಗೊಂಡಿತ್ತು. 1946ರಲ್ಲಿ ಆಗಿನ ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಆಟ್ಲಿ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಹೊರಡಿಸಿದ ಘೋಷಣೆ ಸಂವಿಧಾನತ್ಮಕ ಬಿಕ್ಕಟ್ಟುಗಳ ಪರಿಹಾರಕ್ಕೆ ಮಾರ್ಗವನ್ನು ಸುಗಮಗೊಳಿಸಿತು. ಸ್ವಾತಂತ್ರ ಘೋಷಣೆಗೂ, ಸಂವಿಧಾನ ರಚನೆಯಾಗುವುದಕ್ಕೂ ನಡುವಿನ ಮೂರು ವರ್ಷಗಳ ಅವಧಿಯಲ್ಲಿ ಸ್ವತಂತ್ರ ಭಾರತ ಅನೇಕ ಅಡ್ಡಿ–ಆತಂಕಗಳನ್ನು ಎದುರಿಸಬೇಕಾಯಿತು.

ಭಾರತ ಸ್ವಾತಂತ್ರ್ಯಾ ನಂತರ ಕಾಮನ್‌ವೆಲ್ತ್‌ನಲ್ಲೊಂದು ಭಾಗವಾಗಿ ಬಹುಕಾಲ ಮುಂದುವರೆಯಲಿಲ್ಲ ಸಂವಿಧಾನ ಸಮಿತಿ 1949 ರ ಮೇ ತಿಂಗಳಿನಲ್ಲಿ ಐತಿಹಾಸಿಕ ನಿರ್ಣಯವೊಂದನ್ನು ಕೈಗೊಂಡಿತ್ತು. ಭಾರತ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಬೇಕೆಂದು ನಿರ್ಧರಿಸಿತು. ಅದೇ ರೀತಿ ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಸದಸ್ಯತ್ವವನ್ನು ಮುಂದುವರಿಸಬೇಕೆಂದು ಅಂಗೀಕರಿಸಿತು. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಯಾವುದೇ ಪ್ರಸ್ತಾಪ ಇಲ್ಲದಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಭಾರತವು ಸ್ವಾತಂತ್ರ್ಯ ಘೋಷಣೆಗೆ ಮುನ್ನವೇ ಸಂವಿಧಾನ ರಚನೆಗೆಂದು ಏರ್ಪಾಡಾದ ಸಂವಿಧಾನ ಸಮಿತಿಯು ಚುರುಕಾಗಿ ಕೆಲಸ ಮಾಡಿತು, ವಿಭಿನ್ನ ಜಾತಿ, ಜನಾಂಗ, ಸಂಸ್ಕೃತಿ, ಕುಲ, ಮತ, ಪ್ರಾಂತ್ಯಗಳನ್ನು ಒಂದೇ ಸೂರಿನಡಿ ತರುವಂತಹ ಸಂವಿಧಾನ ಪರಿಕಲ್ಪನೆಗೆ ಶ್ರಮಿಸಿತು.

ಬ್ರಿಟಿಷ್ ಕ್ಯಾಬಿನೆಟ್ ಮಿಷನ್ ಭಾರತ ರಾಜಕೀಯ ಪಕ್ಷಗಳ ಪರಸ್ಪರ ಸಮಿತಿಯೊಂದಿಗೆ 1946 ರಲ್ಲಿ ಸಂವಿಧಾನ ಸಮಿತಿಯನ್ನು ರಚಿಸಿತು. ಈ ಸಮಿತಿಗೆ ಪರೋಕ್ಷ ಪದ್ಧತಿಯ ಚುನಾವಣೆಗಳು ಆಗಬೇಕು ಎಂಬುದನ್ನು ಉಭಯ ಪಕ್ಷಗಳವರೂ ಅಂಗೀಕರಿಸಿದರು. ಅದರಂತೆ ಭಾರತ ವಿವಿಧ ಪ್ರಾಂತ್ಯಗಳ ಶಾಸನ ಸಭೆಗಳ ಪ್ರತಿನಿಧಿಗಳು ಸಂವಿಧಾನ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಿದರು. ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ 292 ಸ್ಥಾನಗಳನ್ನು ಸಂಸ್ಥಾನಿಕ ಪ್ರತಿನಿಧಿಗಳಿಗೆ 93 ಸ್ಥಾನಗಳನ್ನು ಮೀಸಲಿರಿಸಲಾಯಿತು.

ಈ ರೀತಿ ಒಟ್ಟು 385, ಸದಸ್ಯರನ್ನು ಒಳಗೊಂಡ ಸಂವಿಧಾನ ಸಮಿತಿಯ ರಚನೆಯೂ ಆಯಿತು. 1946 ರ ಡಿಸೆಂಬರ್ 9 ರಲ್ಲಿ ಡಾ॥ ಸಚ್ಚಿದಾನಂದ ಸಿನ್ಹಾ ಅವರ ತಾತ್ಕಾಲಿಕ ಅಧ್ಯಕ್ಷತೆಯಲ್ಲಿ ರಚನೆಯಾದ ಈ ಸಮಿತಿ 1947 ರ ಆಗಸ್ಟ್ 15 ರ ನಂತರ ಕಾರ್ಯೋನ್ಮುಖವಾಯಿತು. ಡಿಸೆಂಬರ್ 11.1946 ರಂದು ಡಾ॥ ರಾಜೇಂದ್ರಪ್ರಸಾದ್ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾದರು, ಟಿ.ಟಿ. ಕೃಷ್ಣಮಾಚಾರಿಯವರನ್ನು ಉಪಾಧ್ಯಕ್ಷರನ್ನಾಗಿ, ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಮೂಲಭೂತ ಹಕ್ಕುಗಳ ಸಲಹಾ ಸಮಿತಿ ಅಧ್ಯಕ್ಷರಾಗಿ ನೇಮಿಸಲಾಯಿತು.

ಸಂವಿಧಾನ ರಚನಾ ಸಭೆಯಲ್ಲಿ ಅನೇಕ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ತಮ್ಮ ವರದಿಗಳನ್ನು 1947 ರ ಆಗಸ್ಟ್ ತಿಂಗಳಿಗಿಂತ ಮುಂಚೆ ಸಿದ್ಧಪಡಿಸಿದವು. ಈ ಸಮಿತಿಗಳ ವರದಿಗಳ ಆಧಾರದ ಮೇಲೆ ಸಂವಿಧಾನ ಸಲಹೆಗಾರರಾಗಿದ್ದ ಡಾ॥ ಬಿ.ನ್.ರಾವ್ ಮೂರು ತಿಂಗಳಲ್ಲಿ ಕರಡು ಸಂವಿಧಾನವನ್ನು ಸಿದ್ಧಪಡಿಸಿದರು. ಈ ಕರಡು ಸಂವಿಧಾನವನ್ನು ಪರಿಶೀಲಿಸಲು ಡಾ॥ ಬಿ.ಆರ್.ಅಂಬೇಡ್ಕರ್‌ರವರ ಅಧ್ಯಕ್ಷತೆಯಲ್ಲಿ ಕರಡು ಸಮಿತಿಯನ್ನು 29 ಆಗಸ್ಟ್ 1947 ರಲ್ಲಿ ನೇಮಿಸಲಾಯಿತು. ಕರಡು ಸಮಿತಿಯಲ್ಲಿ ಮತ್ತು ಸಂವಿಧಾನ ರಚನಾ ಸಭೆಯಲ್ಲಿ ಡಾ॥ ಅಂಬೇಡ್ಕರ್ ಅವರ ಪಾತ್ರ ವಿಶೇಷವಾಗಿತ್ತು. ತಮ್ಮ ಪಾತ್ರವನ್ನು ಸಂಪೂರ್ಣವಾಗಿ ನಿರ್ವಹಿಸುವಲ್ಲಿ ಅಂಬೇಡ್ಕರ್ ಅವರಿಗೆ ಹಲವಾರು ದೇಶಗಳ ಸಂವಿಧಾನಗಳನ್ನು ಆಳವಾಗಿ ಅಧ್ಯಯನ ಮಾಡಿದ ಅನುಭವ ನೆರವಾಯಿತು. ಇವರ ಸೇವೆಗೆ ಮನ್ನಣೆ ದೊರೆತು ಇವರನ್ನು ಸಂವಿಧಾನ ಪಿತಾಮಹ ಮತ್ತು ಆಧುನಿಕ ಮನು ಎಂದು ಡಾ॥ ಎಂ.ವಿ. ಪೈಲಿ ವರ್ಣಿಸಿರುವುದು ಸಮಂಜಸವಾಗಿದೆ. ಇವರ ಜೊತೆಗೆ ಸಂವಿಧಾನ ರಚನೆಗೆ ಅಮೂಲ್ಯ ಕೊಡುಗೆ ನೀಡಿದ ಇತರ ಮಹನೀಯರೆಂದರೆ ಶ್ರೀಮತಿ ಸುಚೇತಾ ಕೃಪಾಲನಿ, ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್, ರಾಜಕುಮಾರಿ ಅಮೃತ್‌ಕೌರ್ ಮತ್ತು ಸರೋಜಿನಿ ನಾಯ್ಡು.

1946 ರ ಡಿಸೆಂಬರ್ 9ನೇ ತಾರೀಖಿನಂದು ಮೊದಲ ಬಾರಿಗೆ ಸಂವಿಧಾನ ಸಮಿತಿಯ ಸಮಾವೇಶ ಏರ್ಪಾಡಾಗಿತ್ತು. ಎರಡು ವರ್ಷ ಹನ್ನೊಂದು ತಿಂಗಳು ಹದಿನೇಳು ದಿನಗಳ ನಿರಂತರ ಶ್ರಮದ ಅನಂತರ ಸಂವಿಧಾನ ರಚನಾ ಸಭೆ ಸುಮಾರು ಮೂರು ವರ್ಷಗಳ ಅವಧಿಯಲ್ಲಿ 11 ಅಧಿವೇಶನಗಳನ್ನು ನಡೆಸಿ ಜನತಂತ್ರಾತ್ಮಕವಾಗಿ ಕಾರ್ಯನಿರ್ವಹಿಸಿತು.

ಸುಮಾರು ನೂರು ಹದಿನಾಲ್ಕು ದಿನಗಳ ಕಾಲ ಕರಡು ಸಂವಿಧಾನದ ಬಗ್ಗೆ ಚರ್ಚೆ ನಡೆದು ಅಂತಿಮವಾಗಿ ಸಂವಿಧಾನವನ್ನು ನವೆಂಬರ್ 26,1949 ರಂದು ಅಂಗೀಕರಿಸಲಾಯಿತು. ಸಂವಿಧಾನ ಪ್ರಥಮ ಕರಡು ಸಿದ್ಧವಾದ ಅನಂತರ ಬಗೆ ಬಗೆಯ ಮಾರ್ಪಾಡುಗಳಿಗೊಸ್ಕರ ಸಮಿತಿಯ ಸದಸ್ಯರು 76355 ಆದೇಶಗಳನ್ನು ಜಾರಿ ಮಾಡಿದರು. ಇವುಗಳಲ್ಲಿ 2473 ಆದೇಶಗಳನ್ನು ಚರ್ಚೆಗೊಳಪಡಿಸಲು ಅನುವಾಯಿತು. ಕೊನೆಗೆ ಅಂತಿಮ ಕರಡು ಸಿದ್ಧವಾದ ಅನಂತರ 395 ವಿಧಿಗಳು, 8 ಪರಿಚ್ಛೇದಗಳು, 22 ಅಧ್ಯಾಯಗಳನ್ನು ಒಳಗೊಂಡ ಸಂವಿಧಾನ ಜನವರಿ 26.1950 ರಂದು ಜಾರಿಗೆ ಬಂತು ಇದೇ ದಿನವನ್ನು ಪ್ರತಿವರ್ಷ ಗಣರಾಜ್ಯ ದಿನವೆಂದು ಆಚರಿಸಲಾಗುತ್ತಿದೆ, ಈಗ ನಮ್ಮ ಸಂವಿಧಾನದಲ್ಲಿ 395 ಮೂಲ ವಿಧಿಗಳು, 12 ಅನುಚ್ಛೇದಗಳಿದ್ದು 122 ತಿದ್ದುಪಡಿಗಳಾಗಿವೆ.

ಜನವರಿ–25

# ರಾಷ್ಟ್ರೀಯ ಮತದಾರರ ದಿನ



ಪ್ರೊ॥ ಎಸ್ ರಾಮಕೃಷ್ಣಪ್ಪ

**ಭಾ**ರತದ ಚುನಾವಣಾ ಆಯೋಗ ಜನವರಿ 25ನೇ ತಾರೀಖನ್ನು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಿ ದೇಶದ ಮತದಾರರಲ್ಲಿ ಪ್ರಜ್ಞೆ ಮೂಡಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಈ ಸಂದರ್ಭದಲ್ಲಿ ಮತದಾನದ ಮಹತ್ವ, ಭಾರತದಲ್ಲಿ ನಡೆಯುತ್ತಿರುವ ಮತದಾನದ ಪ್ರಮಾಣ, ಚುನಾವಣಾ ಆಯೋಗದ ಮಹತ್ವ, ಚುನಾವಣಾ ಸುಧಾರಣೆಗಳನ್ನು ತಿಳಿಯುವುದು ಅವಶ್ಯಕವಾಗಿದೆ.

ಆಧುನಿಕ, ಯುಗಪ್ರಜಾಪ್ರಭುತ್ವ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳ ಪಾತ್ರ ಅತ್ಯಂತ ಮಹತ್ತರವಾದುದು. ಆಧುನಿಕ ರಾಷ್ಟ್ರಗಳು ಹೆಚ್ಚು ಜನಸಂಖ್ಯೆ ಮತ್ತು ವಿಶಾಲವಾದ ಭೂ ಪ್ರದೇಶಗಳನ್ನು ಹೊಂದಿರುವುದರಿಂದ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಈ ವ್ಯವಸ್ಥೆಯಲ್ಲಿ ಪ್ರಜೆಗಳು ಚುನಾವಣೆಗಳಲ್ಲಿ ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ.

ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಚುನಾವಣೆಗಳ ಮೂಲಕ ಸರ್ಕಾರವನ್ನು ರಚಿಸುತ್ತಾರೆ. ಪ್ರಜೆಗಳಿಂದ ಚುನಾವಣೆಗಳ ಮೂಲಕ ಆಯ್ಕೆಯಾದ ಸರ್ಕಾರಗಳು ಜನರ ಆಶೋತ್ತರಗಳನ್ನು ಈಡೇರಿಸಲು ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಜನರ ಅನೂಕೂಲಕ್ಕಾಗಿ ಕಾನೂನು ಮತ್ತು ನೀತಿ ನಿಯಮಗಳನ್ನು ರೂಪಿಸದೇ ಇದ್ದಾಗ ಮುಂದಿನ ಚುನಾವಣೆಗಳಲ್ಲಿ ಪ್ರಜೆಗಳು ಜನವಿರೋಧಿ ಸರ್ಕಾರವನ್ನು ಚುನಾವಣೆಯ ಮೂಲಕ ಅಧಿಕಾರದಿಂದ ಉಚ್ಛಾಟಿಸುತ್ತಾರೆ. ಹೀಗೆ ಚುನಾವಣೆಯು ಪ್ರಜೆಗಳಿಗೆ ಒಂದು ಸರ್ಕಾರವನ್ನು ಸ್ಥಾಪಿಸುವ ಹಾಗೂ ಅಧಿಕಾರದಿಂದ ಉಚ್ಛಾಟಿಸುವ ರಾಜಕೀಯ ಅಧಿಕಾರವನ್ನು ನೀಡುತ್ತದೆ ಇದನ್ನು ರಾಜ್ಯಶಾಸ್ತ್ರದ ಪರಿಭಾಷೆಯಲ್ಲಿ 'ರಾಜಕೀಯ ಪರಮಾಧಿಕಾರ ಜನತಾ ಪರಮಾಧಿಕಾರ' ಎಂದು ಕರೆಯುತ್ತೇವೆ. ಚುನಾವಣೆಯು ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸಲು ಪ್ರಜೆಗಳ ಕೈಯಲ್ಲಿರುವ ಶಕ್ತಿಶಾಲಿ ಅಸ್ತ್ರವಾಗಿದೆ, ಅದ್ದರಿಂದಲೇ ಪ್ರಜಾಪ್ರಭುತ್ವದಲ್ಲಿ 'ಮತ ಪತ್ರವು ತುಪಾಕಿಯ ಗುಂಡಿಗಿಂತ ಶಕ್ತಿಶಾಲಿಯಾದುದು' ಎಂಬು ಮಾತು ಪ್ರಚಲಿತಲ್ಲಿದೆ. ಚುನಾವಣೆಯು ಜನತಾ ಪರಮಾಧಿಕಾರದ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತದೆ. ಚುನಾವಣೆಯಲ್ಲಿ ಮತದಾರರ ವರ್ಗವು ಪ್ರಮುಖ ಪಾತ್ರ ವಹಿಸುತ್ತದೆ. ಮತ ನೀಡುವ ಹಕ್ಕನ್ನು ಹೊಂದಿರುವ ವ್ಯಕ್ತಿಗಳ ಸಮೂಹವನ್ನು ಮತದಾರರ ವರ್ಗ ಎಂದು ಕರೆಯಲಾಗುತ್ತದೆ.

ಚುನಾವಣೆ ಪ್ರಜೆಗಳಿಗೆ ಪರೋಕ್ಷವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಇದರಿಂದ ಸರ್ಕಾರವನ್ನು ಶಾಂತಿಯುತವಾಗಿ ಬದಲಾವಣೆ ಮಾಡಲು ಸಾಧ್ಯ. ಪ್ರಜಾಪ್ರಭುತ್ವ ಮತ್ತು ಚುನಾವಣೆಗಳ ನಡುವೆ ಬೇರ್ಪಡಿಸಲಾಗದ ಸಂಬಂಧವಿದೆ. ಚುನಾವಣೆ ಇಲ್ಲದೆ ಪ್ರಜಾಪ್ರಭುತ್ವವನ್ನು ಊಹಿಸಲು ಸಾಧ್ಯವಾಗುವುದಿಲ್ಲ. ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಮೂಲಕ ಆಯ್ಕೆಯಾದ ಜನತಾ ಪ್ರತಿನಿಧಿಗಳು





ಪ್ರಜೆಗಳ ಪರವಾಗಿ ಆಡಳಿತ ನಡೆಸುತ್ತಾರೆ. ಆದ್ದರಿಂದ ಚುನಾವಣೆಯನ್ನು ಪ್ರಜಾಪ್ರಭುತ್ವದ ಆಧಾರಸ್ತಂಭ ಎಂದು ಕರೆಯಲಾಗುತ್ತದೆ. ಚುನಾವಣೆಗಳನ್ನು ಸಾರ್ವಜನಿಕ ಅಭಿಪ್ರಾಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮಾಧ್ಯಮಗಳೆಂದು ಕರೆಯಬಹುದು. ಚುನಾವಣೆಗಳು ರಾಜಕೀಯ ಶಿಕ್ಷಣವನ್ನು ನೀಡಿ ಪ್ರಜಾಪ್ರತಿನಿಧಿಗಳಿಗೆ ರಾಜಕೀಯ ತರಬೇತಿಯನ್ನು ನೀಡುತ್ತವೆ. ಮುಕ್ತ ಮತ್ತು ನಿರ್ಭಿತ ಚುನಾವಣೆಗಳು ಆರೋಗ್ಯವಂತ ಪ್ರಜಾಪ್ರಭುತ್ವದ ಲಕ್ಷಣಗಳಾಗಿದ್ದು, ರಾಷ್ಟ್ರದ ಪ್ರತಿಷ್ಠೆ ಹಾಗೂ ಮೌಲ್ಯಗಳನ್ನು ಹೆಚ್ಚಿಸುತ್ತವೆ.

> **ಚುನಾವಣೆ ಪ್ರಜೆಗಳಿಗೆ ಪರೋಕ್ಷವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಇದರಿಂದ ಸರ್ಕಾರವನ್ನು ಶಾಂತಿಯುತವಾಗಿ ಬದಲಾವಣೆ ಮಾಡಲು ಸಾಧ್ಯ. ಪ್ರಜಾಪ್ರಭುತ್ವ ಮತ್ತು ಚುನಾವಣೆಗಳ ನಡುವೆ ಬೇರ್ಪಡಿಸಲಾಗದ ಸಂಬಂಧವಿದೆ. ಚುನಾವಣೆ ಇಲ್ಲದೆ ಪ್ರಜಾಪ್ರಭುತ್ವವನ್ನು ಊಹಿಸಲು ಸಾಧ್ಯವಾಗುವುದಿಲ್ಲ.**

ಭಾರತದ ಪ್ರಜಾಶಕ್ತಿ ಈ ಭೂಮಿಯ ಮೇಲೆ ಒಂದು ಬೃಹತ್ ಪ್ರಜಾತಾಂತ್ರಿಕ ಶಕ್ತಿ ಎಂಬುದು ನಿರ್ವಿವಾದಿತ ಅಂಶ. ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲೇ ನಮ್ಮದು ಅತ್ಯಂತ ಸ್ಥಿರವಾದ ಪ್ರಜಾತಾಂತ್ರಿಕತೆ ಎಂದು ಕೂಡ ಪರಿಗಣಿಸಲಾಗಿದೆ.

**ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ:–** ಪ್ರಪಂಚದ ಅನೇಕ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಜಾರಿಗೆ ತರಲು ಹೋರಾಟಗಳು ನಡೆದಿವೆ. ಬ್ರಿಟನ್ ಅಮೇರಿಕಾ, ಸ್ವಿತ್ಸರ್ಲೆಂಡ್ ಮುಂತಾದ ದೇಶಗಳಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಕಾಲ ಕ್ರಮೇಣ ಜಾರಿಗೆ ಬಂದಿತು. ಬ್ರಿಟಿಷರ ಆಡಳಿತ ಕಾಲದಲ್ಲಿ ಎಲ್ಲಾ ಭಾರತೀಯರು ಮತ ಚಲಾಯಿಸುವ ಹಕ್ಕನ್ನು ಪಡೆದಿರಲಿಲ್ಲ. ಭಾರತದ ಸಂವಿಧಾನದ ಪಿತಾಮಹರು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಬೆಂಬಲಿಸಿ ಪ್ರಜಾಪ್ರಭುತ್ವದ ಕಾರ್ಯಾಚರಣೆಗೆ ಅದನ್ನು ಆಳವಡಿಸಿದರು, ಸಂವಿಧಾನದ 15ನೇ ಭಾಗದಲ್ಲಿರುವ 326ನೇ ವಿಧಿಯಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಆಳವಡಿಸಿ ಲೋಕಸಭೆ, ರಾಜ್ಯಗಳ ವಿಧಾನಸಭೆಗಳಿಗೆ ಮತ್ತು ಸ್ಥಳೀಯ ಸರ್ಕಾರಗಳಿಗೆ ನಡೆಯುವ ಚುನಾವಣೆಗಳಲ್ಲಿ 18 ವರ್ಷ ಮೀರಿದ ಎಲ್ಲರೂ ಮತದಾರರಾಗಲು ಅವಕಾಶವಿದೆ. 1988 ರಲ್ಲಿ ಸಂಸತ್ತು 326ನೇ

## ಜಾರಿಗೆ ಬಂದ ಚುನಾವಣಾ ಸುಧಾರಣೆ ಕ್ರಮಗಳು

ಚುನಾವಣಾ ಆಕ್ರಮಗಳನ್ನು ತಡೆಯಲು ಚುನಾವಣಾ ಆಯೋಗ ಆನೇಕ ಸುಧಾರಣಾ, ಕ್ರಮಗಳನ್ನು ಕೈಗೊಂಡಿದೆ.

- ಚುನಾವಣಾ ಸುಧಾರಣೆಗಾಗಿ 1974 ರಲ್ಲಿ ವಿ.ಎಂ. ತಾರ್ಕುಂಡೆ ಸಮಿತಿ 1990 ರಲ್ಲಿ ದಿನೇಶ್ ಗೋಸ್ವಾಮಿ ಸಮಿತಿ 1998 ರಲ್ಲಿ ಇಂದ್ರಜಿತ್ ಗುಪ್ತ ಸಮಿತಿಗಳನ್ನು ನೇಮಿಸಿತು.
- ರಾಜಕೀಯ ಶುದ್ಧಿಗೆ ಜಸ್ಟಿಸ್ ಅಜಿತ್ ಪ್ರಕಾಶ ಸಮಿತಿ 12/3/2015 ರಂದು ಮಹತ್ವದ ಶಿಫಾರಸ್ಸುಗಳನ್ನು ಸಲ್ಲಿಸಿದೆ.
- ಪ್ರಧಾನಿ ವಿ.ಪಿ.ಸಿಂಗ್ ಆಡಳಿತದಲ್ಲಿ ದಿನೇಶ್ ಗೋಸ್ವಾಮಿ ರಚನೆ. ಕಲವು ಶಿಫಾರಸ್ಸುಗಳ ಜಾರಿ.
- ಪಕ್ಷಾಂತರ ವಿರೋಧಿ ಕಾಯ್ದೆ ಜಾರಿ.
- ಎರಡು ಕ್ಷೇತ್ರಗಳಿಗಿಂತ ಹೆಚ್ಚು ಕಡೆ ಸ್ಪರ್ಧೆಗೆ ನಿಷೇಧ.
- ನಾಮಪತ್ರ ಸಲ್ಲಿಸುವಾಗ ತಪ್ಪು ಮಾಹಿತಿ ನೀಡಿಕೆಯಲ್ಲಿ ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವುದು.
- ನಾಮಪತ್ರ ಸಲ್ಲಿಕೆ ಜೊತೆಯಲ್ಲಿಯೇ ಅಭ್ಯರ್ಥಿಯ ಅಪರಾಧಗಳ ಹಿನ್ನೆಲೆ ಮತ್ತು ಆಸ್ತಿಪಾಸ್ತಿ ಘೋಷಣೆ ಕಡ್ಡಾಯ.
- ಪಕ್ಷಗಳಿಗೆ ಉದ್ಯಮಿಗಳು ಮತ್ತು ಖಾಸಗಿ ಸಂಸ್ಥೆಗಳು ನೀಡುವ ದೇಣಿಗೆ ವಿವರ.
- ಪಕ್ಷಗಳ ಚುನಾವಣಾ ವೆಚ್ಚ ಮತ್ತು ದೇಣಿಗೆ ಸಂಗ್ರಹ ಮಾಹಿತಿ ದಾಖಲೆಯನ್ನು ಇಡುವುದು ಮತ್ತು ವಾರ್ಷಿಕ ಲೆಕ್ಕ ಪರಿಶೋಧನೆಯ ವಿವರವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸುವುದು.
- ಅಭ್ಯರ್ಥಿಯ ಪರ ಅವರ ಪ್ರತಿನಿಧಿಯಾಗಿ ಪತ್ರಿಕೆಗಳಿಗೆ ಜಾಹೀರಾತು ನೀಡಿಕೆ ನಿರ್ಬಂಧ.
- ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಕೆ. (61 ನೇ ತಿದ್ದುಪಡಿ ಮೂಲಕ)
- ಭಾವಚಿತ್ರ ಸಹಿತ ಮತದಾರರ ಪಟ್ಟಿ ಮತಪತ್ರ ಚೀಟಿ ಜಾರಿಗೆ.



ವಿಧಿಯನ್ನು ತಿದ್ದುಪಡಿ ಮಾಡಿ (61ನೇ ತಿದ್ದುಪಡಿಯ ಮೂಲಕ) ಮತದಾನದ ವಯಸ್ಸನ್ನು 21 ವರ್ಷದಿಂದ 18 ವರ್ಷಕ್ಕೆ ಇಳಿಸಿತು. ಈ ಸಂವಿಧಾನ ತಿದ್ದುಪಡಿಗೆ 1989ರಲ್ಲಿ ರಾಷ್ಟ್ರಪತಿ ಒಪ್ಪಿಗೆ ನೀಡಿದರು. ವಯಸ್ಕ ಮತದಾನ ಪದ್ಧತಿಯಲ್ಲಿ ಜಾತಿ, ಧರ್ಮ, ಲಿಂಗ, ಬಡತನ, ಸಿರಿತನ, ಅಂತಸ್ತು, ಆಸ್ತಿ ಮುಂತಾದ ಯಾವುದೇ ಭೇದ, ಭಾವನೆಗಳಿಲ್ಲ, ಈ ಪದ್ಧತಿಯು ಪ್ರಜೆಗಳ ಪರಮಾಧಿಕಾರದ ಸಂಕೇತವಾಗಿದೆ.

ಸಮಾಜದ ವಿವಿಧ ವರ್ಗಗಳಲ್ಲಿ ರಾಜಕೀಯ ಪ್ರಜ್ಞೆ, ಬೆಳೆದು ರಾಜಕೀಯದ ಆಗು–ಹೋಗುಗಳನ್ನು ಅರಿಯುವುದರಲ್ಲಿ ಬಹುತೇಕ ಮಟ್ಟಿಗೆ ಯಶಸ್ವಿಯಾಗಿದ್ದಾರೆ. ತಪ್ಪು ಮಾಡಿದ ಆಡಳಿತ ಪಕ್ಷವನ್ನು ಪದಚ್ಯುತಿಗೊಳಿಸುವುದರಲ್ಲಿ ಪ್ರಜೆಗಳ ಧೈರ್ಯವನ್ನು ಪ್ರದರ್ಶಿಸಿದ್ದಾರೆ.

### ಚುನಾವಣಾ ಆಯೋಗ ಮತ್ತು ಚುನಾವಣಾ ವಿಧಾನ

ಪ್ರಜಾಪ್ರಭುತ್ವದಲ್ಲಿ ಚುನಾವಣಾ ಮಹತ್ವವನ್ನು ಅರಿತು ಸಂವಿಧಾನದ ರಚನಾಕಾರರು ಇವುಗಳನ್ನು ನಡೆಸಲು ಸ್ವತಂತ್ರ ಚುನಾವಣಾ ಆಯೋಗಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಿದ್ದಾರೆ. 15ನೇ ಭಾಗದಲ್ಲಿರುವ 324 ರಿಂದ 329 ರವರೆಗಿನ ವಿಧಿಗಳು ಚುನಾವಣಾ ಆಯೋಗ ಹಾಗೂ ಚುನಾವಣೆಗಳ ಬಗ್ಗೆ ನಿಯಮಗಳನ್ನು ಒಳಗೊಂಡಿದೆ.

### ಚುನಾವಣಾ ಆಯೋಗದ ರಚನೆ

324(2)ನೇ ವಿಧಿ ಪ್ರಕಾರ ಚುನಾವಣಾ ಆಯೋಗ ಮುಖ್ಯ ಚುನಾವಣಾಧಿಕಾರಿಯನ್ನು ಮತ್ತು ಆಗಾಗ್ಗೆ ರಾಷ್ಟ್ರಪತಿಯಿಂದ ನೇಮಿಸಲ್ಪಡುವ ಇತರೆ ಚುನಾವಣಾಧಿಕಾರಿಗಳನ್ನು ಒಳಗೊಂಡಿರುತ್ತದೆ. ಮೊದಲ ಬಾರಿಗೆ 16–10–1989 ರಂದು ಎಸ್ ಎಸ್ ಧನೋವಾ ಮತ್ತು ವಿ.ಎಸ್. ಸೀಗೆಲ್ ಅವರನ್ನು ಬಹು ಚುನಾವಣಾಧಿಕಾರಿಗಳನ್ನಾಗಿ ಕೇಂದ್ರ ಸರ್ಕಾರ ನೇಮಿಸಿತು. ಆದರೆ 12–12–1990 ರಂದು ಮುಖ್ಯ ಚುನಾವಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಟಿ.ಎನ್. ಶೇಷನ್ ಚುನಾವಣಾ ಪದ್ಧತಿಗೆ ಅರ್ಥವನ್ನು ಮತ್ತು ದಕ್ಷತೆಯ ಸ್ವರೂಪವನ್ನು ರೂಪಿಸಿದರು.

### ಚುನಾವಣಾ ಆಯೋಗದ ಅಧಿಕಾರ ಮತ್ತು ಕರ್ತವ್ಯಗಳು:–

ಸಂವಿಧಾನದ 324(1)ನೇ ವಿಧಿಯಲ್ಲಿ ಚುನಾವಣಾ ಆಯೋಗದ ಎರಡು ಮುಖ್ಯ ಕರ್ತವ್ಯಗಳನ್ನು ನಮೂದಿಸಲಾಗಿದೆ. ಅವು,

- ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಿ ಅವುಗಳ ಪರಿಷ್ಕರಣವನ್ನು ವೀಕ್ಷಿಸಿ ನಿರ್ದೇಶನ ನೀಡುವುದು.
- ಸಂಸತ್ತಿಗೆ, ರಾಜ್ಯ ಶಾಸಕಾಂಗಗಳಿಗೆ, ರಾಷ್ಟ್ರಪತಿ, ಉಪರಾಷ್ಟ್ರಪತಿ ಸ್ಥಳೀಯ ಸರ್ಕಾರಗಳಿಗೆ ಚುನಾವಣೆಗಳನ್ನು ನಡೆಸುವುದು, ಅಲ್ಲದೆ 1950 ಮತ್ತು 1951ರ ಪ್ರಜಾ ಪ್ರತಿನಿಧಿ ಕಾಯ್ದೆಗಳ ಪ್ರಕಾರ ಇನ್ನು ಕೆಲವು ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತದೆ.

### ಚುನಾವಣಾ ವ್ಯವಸ್ಥೆ

ಪಂಡಿತ್ ಜವಾಹರಲಾಲ್ ನೆಹರು ಪ್ರಕಾರ ಚುನಾವಣೆಗಳ ಫಲಿತಾಂಶಕ್ಕಿಂತ ನಾವು ಗೆಲ್ಲುವ ಅಥವಾ ಸೋಲುವ ರೀತಿ ಹೆಚ್ಚು ಮುಖ್ಯವಾದದ್ದು, ತಪ್ಪುದಾರಿಯಲ್ಲಿ ಗೆಲ್ಲುವುದಕ್ಕಿಂತ ಗೌರವದಿಂದ ಸೋಲುವುದು ಉತ್ತಮ.





ಆದರೆ ಇತ್ತೀಚಿನ ದಿನಗಳಲ್ಲಿ ಚುನಾವಣಾ ವ್ಯವಸ್ಥೆ ಪರಿಪೂರ್ಣ ಎಂದು ಎದೆತಟ್ಟಿ ಹೇಳಿಕೊಳ್ಳುವಂತಿಲ್ಲ. ನಮ್ಮ ಚುನಾವಣಾ ವ್ಯವಸ್ಥೆ 4 ಬಗೆಯ ಶಕ್ತಿಗಳ ನಿಯಂತ್ರಣದಲ್ಲಿದೆ ಎನ್ನಬಹುದು.

- ಹಣಬಲ
- ತೋಳ್ಬಲ
- ಅಧಿಕಾರದಲ್ಲಿರುವವರ ಬಲ (ಆಡಳಿತ ನಿಯಂತ್ರಣದ ದುರ್ಬಳಕೆ)

ಅಂದರೆ ಚುನಾವಣಾ ವ್ಯವಸ್ಥೆಯನ್ನು ಹಣ ಅಪರಾಧಿಗಳು ಮತ್ತು ಭ್ರಷ್ಟರು ಆಳುತ್ತಿವೆ ಎನ್ನಬಹುದು. ಇವು ಮೂರು ಒಂದು ಮುಖ ಅದರೆ ಇನ್ನೊಂದು ಮುಖ 4ನೇ ಅಂಶ ಮತದಾರ ಪ್ರಭು ಸರಿಯಾದ ರೀತಿಯಲ್ಲಿ ಯೋಚಿಸಿ ಮತ ನೀಡದೇ ಇತ್ತೀಚಿಗೆ ಬಹುತೇಕ ಮತದಾರರ ಆಸೆ ಆಮಿಷಗಳಿಗೆ ಒಳಗಾಗಿ ಮೌಲ್ಯಧಾರಿತ ವ್ಯಕ್ತಿಗಳನ್ನು ಆಯ್ಕೆ ಮಾಡದಿರುವುದು.

ಆದರೆ ಇತ್ತೀಚಿನ ದಿನಗಳಲ್ಲಿ ಅಧಿಕಾರ ವರ್ಗ ಆಡಳಿತ ಯಂತ್ರವನ್ನು ದುರುಪಯೋಗ ಮಾಡುವುದಕ್ಕೆ ಚುನಾವಣಾ ಆಯೋಗ ನೀತಿ ಸಂಹಿತೆಯ ಚಾಟಿ ಹಿಡಿದು ನಿಯಂತ್ರಣಕ್ಕೆ ತರುತ್ತಿದೆ. ಚುನಾವಣಾ ಆಯೋಗ ಕೈಗೊಂಡಿರುವ ಕೆಲ ರಚನಾತ್ಮಕ ಕ್ರಮಗಳಿಂದಾಗಿ ಚುನಾವಣಾ ಸಮಯದಲ್ಲಿ ಅಕ್ರಮಗಳು ನಡೆಯುವುದಕ್ಕೆ ಕಡಿವಾಣ ಬಿದ್ದಿದೆ. ಚುನಾವಣಾ ಆಯೋಗ ಚುನಾವಣಾ ಅವಧಿಯಲ್ಲಿ ಸ್ಪರ್ಧಿಗಳು ಹಾಗೂ ರಾಜಕೀಯ ಪಕ್ಷಗಳು ಮಾಡುವ ಖರ್ಚು ವೆಚ್ಚದ ಮೇಲೆ ನಿಗಾ ವಹಿಸಲು ವಿವಿಧ ಸೇವೆಗಳಿಂದ ಅಧಿಕಾರಗಳನ್ನು ವೀಕ್ಷಕರನ್ನಾಗಿ ನಿಯೋಜಿಸುತ್ತದೆ. ತನ್ಮೂಲಕ ಖರ್ಚಿನ ಮೇಲೆ ಕಡಿವಾಣ ಹಾಕಲು ಕ್ರಮ ಕೈಗೊಂಡಿದೆ. ಚುನಾವಣಾ ಆಯೋಗ




ನಿರ್ದೇಶನಗಳಡಿಯಲ್ಲಿ ಮತ್ತು ಸಲಹೆ ಸೂಚನೆ ಮೇರೆಗೆ ರಾಜಕೀಯ ಹಾಗೂ ಸ್ಪರ್ಧಿಗಳು ಮಾಡುವ ದುಂದು ವೆಚ್ಚ ಅಂದರೆ ಕಟೌಟ್‌ಗಳು, ಬ್ಯಾನರ್‌ಗಳು, ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಚಿತ್ರ ಅಂಟಿಸುವುದು. ಸ್ಲೋಗನ್‌ಗಳ ಬರಹ ಮುಂತಾದವುಗಳ ಮೇಲೆ ನಿಷೇಧ ಹೇರಲಾಗಿದೆ.

### ಉಳಿದ ಪ್ರಮುಖ ಶಿಫಾರಸ್ಸುಗಳು

- ಮತ ನಿರಾಕರಣೆ ಅಥಾವ ತಟಸ್ಥವಾಗಿರುವುದಕ್ಕೆ ಕಾನೂನು ಮಾನ್ಯತೆ.
- ಚುನಾವಣೆಯಲ್ಲಿ ಶೇ 20ಕ್ಕಿಂತ ಕಡಿಮೆ ಮತ ಪಡೆಯುವ ಅಭ್ಯರ್ಥಿಗಳನ್ನು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸುವುದು.
- ಚುನಾವಣಾ ವೆಚ್ಚದಲ್ಲಿ ಸ್ವಲ್ಪ ಭಾಗವನ್ನು ಸರ್ಕಾರವೇ ಭರಿಸುವುದು.
- ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳನ್ನು ಸ್ಪರ್ಧೆಯಿಂದ ಅನರ್ಹಗೊಳಿಸುವುದು.
- ರಾಜೀವ್ ಗಾಂಧಿ ಪ್ರಸ್ತಾಪಿಸಿದ್ದ ರಾಜಕೀಯ ಪಕ್ಷಗಳ ಸಂಖ್ಯೆಯನ್ನು ಎರಡು ಅಥವಾ ಮೂರಕ್ಕೆ ಮಿತಿಗೊಳಿಸುವುದು.

### ಮತ ಹಿಂಜರಿತ (ಮತದಾನ ಕುಸಿತ)

ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಕುಸಿತ ಈಗ ಹೆಚ್ಚು ಚರ್ಚೆಯಾಗುತ್ತಿರುವ ವಿಷಯವಾಗಿದೆ. ಇದಕ್ಕೆ ಹಲವರು ಅನೇಕ ಕಾರಣಗಳನ್ನು ನೀಡುತ್ತಾರೆ. ಪ್ರಮುಖ ವಿಷಯಗಳ ಮೇಲೆ ಚುನಾವಣೆಗಳು ನಡೆದಾಗ ಘಟನೆಗಳು ಸಂಭವಿಸಿದಾಗ ಮತದಾನದ ಪ್ರಮಾಣ ಹೆಚ್ಚಾಗಿಯೆ ಇತ್ತು. ಉದಾ: ಭಾರತ ಪಾಕಿಸ್ತಾನ ಯುದ್ಧ, ಲಾಲ್ ಬಹುದ್ದೂರ್ ಶಾಸ್ತ್ರಿ ಸಾವು, ತುರ್ತು ಪರಿಸ್ಥಿತಿ, ಇಂದಿರಾಗಾಂಧಿ ಮರಣ, ಬೋಫೋರ್ಸ್ ಹಗರಣ, ರಾಜೀವ್ ಗಾಂಧಿ ಸಾವು, ಕಾರ್ಗಿಲ್ ಯುದ್ಧ ಮುಂತಾದ ಘಟನೆಗಳು ನಡೆದ ಸಂದರ್ಭಗಳಲ್ಲಿ ಚುನಾವಣೆಗಳು ಆದಾಗ ಮತದಾನ ಶೇ 60% ನಡೆದಿರುವುದು ಗಮನಾರ್ಹ.

ಆದರೆ 1952ರಿಂದ 2014ರವರೆಗೆ ನಡೆದಿರುವ ಯಾವುದೇ ಲೋಕಸಭೆ ಚುನಾವಣೆಯಲ್ಲಿಯೂ ದೇಶದಲ್ಲಿ ಸರಾಸರಿ ಶೇ 64 ಕ್ಕಿಂತ ಹೆಚ್ಚು ಮತದಾನವೇ ಆಗಿಲ್ಲ. 1980ಕ್ಕಿಂತ ಮೊದಲ ದೇಶದಲ್ಲಿ ಸುಶಿಕ್ಷಿತರ ಪ್ರಮಾಣ ಕಡಿಮೆ ಇತ್ತು. ಎಂಬ ಕಾರಣ ಕೊಡಬಹುದು. ಆದರೆ ದೇಶದಲ್ಲಿ ಸಾಕ್ಷರರ ಪ್ರಮಾಣ ಹೆಚ್ಚಾಗುತ್ತ, ದೇಶ ವಿಜ್ಞಾನ ತಂತ್ರಜ್ಞಾನ ಹಾಗೂ ಉದ್ಯಮದಲ್ಲಿ ಕ್ರಾಂತಿ ಮಾಡುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಮತದಾನದ ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಅದರಲ್ಲೂ ವಿದ್ಯಾವಂತರು ಮತದಾನ ಮಾಡುವುದಿಲ್ಲ ಎಂಬ ಕಳವಳ ಹೆಚ್ಚಾಗುತ್ತಿದೆ.




# ಅಖಿಲ ಭಾರತ ಸಾರ್ವಜನಿಕ ಸೇವಾ ಸಂವಹನಾ ಅಧಿಕಾರಿಗಳ ಕಾರ್ಯಾಗಾರ

> ಸರ್ಕಾರದ ಪ್ರತಿ ಯೋಜನೆಗಳೂ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪಬೇಕೆನ್ನುವ ಕಳಕಳಿ ರಾಜ್ಯಸರ್ಕಾರದ್ದು. ಬದಲಾಗುತ್ತಿರುವ ದಿನಮಾನಗಳಲ್ಲಿ ಸಾಮಾಜಿಕ ಮಾಧ್ಯಮಗಳು ಹೆಚ್ಚು ಪರಿಣಾಮಕಾರಿಯಾಗಿ ಸಮಾಜವನ್ನು ಹಾಸು ಹೊಕ್ಕಿವೆ. ಈ ನಿಟ್ಟಿನಲ್ಲಿ ವಿವಿಧ ರಾಜ್ಯಗಳ ವಾರ್ತಾ ಕೇಂದ್ರಗಳು ಯಾವ ಬಗೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ; ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಅಂತಿಮ ಗುರಿ ಜನರಿಗೆ ಯೋಜನೆಗಳನ್ನು ತಲುಪಿಸುವುದೇ ಆದರೂ ಅವು ಅನುಸರಿಸುತ್ತಿರುವ ಮಾರ್ಗಗಳ ಮಾಹಿತಿ ವಿನಿಮಯ, ಅಂತಿಮವಾಗಿ ರಾಷ್ಟ್ರಮಟ್ಟದಲ್ಲಿ ಅದಕ್ಕೊಂದು ವೇದಿಕೆ ಸಿದ್ಧಪಡಿಸುವುದು ಕಾರ್ಯಾಗಾರದ ಉದ್ದೇಶವಾಗಿತ್ತು.

**ರಾ**ಜ್ಯದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಪುನಃಶ್ಚೇತನಗೊಳಿಸಲು ನಿರ್ಧರಿಸಿದ್ದು ಇಲಾಖೆ ಪುನರ್ ರಚನೆಗೆ ಈಗಾಗಲೇ ಸಮಿತಿಯೊಂದನ್ನು ರಚಿಸಿರುವುದಾಗಿ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ತಿಳಿಸಿದರು.

ಅವರು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಅಖಿಲ ಭಾರತ ಸೇವಾ ಸಂವಹನಾ ಅಧಿಕಾರಿಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಭಾಷೆ ಮತ್ತು ಅಭಿವ್ಯಕ್ತಿಗಳೇ ಸಂವಹನ ಕ್ರಿಯೆಯನ್ನು ಪರಿಣಾಮಕಾರಿಯಾಗಿಸುವುದು. ಅದೇ ರೀತಿ ಸಂವಿಧಾನದ ಅನುಚ್ಛೇದ 21ರ ಅನ್ವಯ ದೇಶದ ಪ್ರತಿ ಪ್ರಜೆಗೂ ಘನತೆ, ಗೌರವಗಳಿಂದ ಬಾಳುವ ಸಂಪೂರ್ಣ ಹಕ್ಕನ್ನು ಸಂವಿಧಾನ ನೀಡಿದೆ'.

'ಈ ನಿಟ್ಟಿನಲ್ಲಿ ನಮ್ಮ ಸರ್ಕಾರವು ಸರ್ಕಾರದ ಎಲ್ಲ ಸೌಲಭ್ಯಗಳು ಸಮಾಜದ ಕಟ್ಟಕಡೆಯ ವ್ಯಕ್ತಿಯವರೆಗೂ ತಲುಪಬೇಕೆನ್ನುವ ಹಂಬಲದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಅನೇಕಾನೇಕ ಯೋಜನೆಗಳನ್ನು ರೂಪಿಸಿದೆ. ಸರ್ಕಾರಿ ಸೌಲಭ್ಯಗಳ ಕುರಿತು ಅರಿವು ಮೂಡಿಸಿ ಅವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕೆನ್ನುವುದೇ ಇದರ ಉದ್ದೇಶ. ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಸಾರ್ವಜನಿಕ ಸಂಪರ್ಕ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಪ್ರಸಕ್ತ ಸನ್ನಿವೇಶಕ್ಕೆ ಅನುಗುಣವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿಯೂ ತೀವ್ರತರವಾದ ಬದಲಾವಣೆಗಳಾಗಿವೆ.

ಮಾಹಿತಿ, ಶಿಕ್ಷಣ, ಸಂವಹನ (ಐಇಸಿ) ಸೂತ್ರಗಳ ಮೂಲಕ ಪ್ರಜ್ಞಾವಂತ ಸಮಾಜ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನಗಳು ನಡೆಯುತ್ತಿವೆ. ಬದಲಾಗುತ್ತಿರುವ ಕಾಲಮಾನದಲ್ಲಿ ಸಾಮಾಜಿಕ ಜಾಲತಾಣಗಳು ಸಂವಹನಕಾರನಿಗೆ ಸವಾಲಾಗಿ ಪರಿಣಮಿಸಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳನ್ನು ಸಮರ್ಥವಾಗಿ ನಿಭಾಯಿಸುವುದು ಹೇಗೆ ಎನ್ನುವ ಪ್ರಶ್ನೆಗೆ ಈ ಕಾರ್ಯಾಗಾರ ಉತ್ತರ ನೀಡಲಿದೆ'.

'ವೃತ್ತಿಪರ ಪತ್ರಿಕೋದ್ಯಮಿಗಳೇ ಅಲ್ಲ, ಪೌರ ಪತ್ರಕರ್ತನೂ ಎಚ್ಚೆತ್ತಿರುವ ದಿನಗಳಿವು. ಆದ್ದರಿಂದ ಸಂವಹನಕಾರರ ಮೇಲೆ ಗುರುತರ ಹೊಣೆ ಬಿದ್ದಿದೆ. ಸಂವಹನಕಾರರು ಸ್ಪಷ್ಟ, ಸಮಂಜಸ, ನಿಖರ ಮಾಹಿತಿಗಳನ್ನು ನೀಡುವ ಬದ್ಧತೆಯನ್ನು ರೂಢಿಸಿಕೊಳ್ಳುವುದು ಅತ್ಯಗತ್ಯವಾಗಿದೆ'.

'ಕಾರ್ಯಾಗಾರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಹೊಸ ಸಾರ್ವಜನಿಕ ಸಂಪರ್ಕ ನೀತಿ ಮರುಪರಿಶೀಲನೆಗೆ ಪೂರಕವಾಗಲಿವೆ ಎನ್ನುವ ಆಶಾಭಾವನೆ ವ್ಯಕ್ತಪಡಿಸುತ್ತೇನೆ' ಎಂದು ಮಾನ್ಯ ಮುಖ್ಯಮಂತ್ರಿಗಳು ನುಡಿದರು. ಕಾರ್ಯಾಗಾರದ ಮುನ್ನಾದಿನ ಕೇಂದ್ರ ನಗರಾಭಿವೃದ್ಧಿ ಹಾಗೂ ವಾರ್ತಾ ಮತ್ತು ಪ್ರಸಾರಖಾತೆ ಸಚಿವ ಶ್ರೀ ಎಂ ವೆಂಕಯ್ಯ ನಾಯ್ಡು ಅವರು ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೇಂದ್ರ ಸರ್ಕಾರವು ಸದ್ಯದಲ್ಲೇ ನೂತನ ಸಾರ್ವಜನಿಕ ಸಂಪರ್ಕ ನೀತಿಯನ್ನು ಜಾರಿಗೆ ತರಲಿರುವುದಾಗಿ ಈ ಸಂದರ್ಭದಲ್ಲಿ ಅವರು ತಿಳಿಸಿದರು.

'ಸಾಮಾಜಿಕ ಜಾಲತಾಣಗಳು ಪ್ರಾಮುಖ್ಯ ಪಡೆಯುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಪರಿಣಾಮಕಾರಿ ಸಂವಹನ ಸಾಧಿಸಲು ಸಮುದಾಯದ ಸಹಭಾಗಿತ್ವ ಅತ್ಯಗತ್ಯ. ಸಮುದಾಯದ ಸಹಭಾಗಿತ್ವವಿಲ್ಲದೆ ಪರಿಣಾಮಕಾರಿ ಸಂವಹನಶೀಲತೆ ಸಾಧ್ಯವಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು. ನೂತನ ತಂತ್ರಜ್ಞಾನ ರೂಢಿಸಿಕೊಂಡು ಬದ್ಧತೆ, ವಿಶ್ವಾಸಾರ್ಹತೆಯನ್ನು ಕಾಪಾಡಿಕೊಂಡು ಜನರಿಗೆ ಮಾಹಿತಿ ನೀಡಬೇಕು ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು.

'ಸಂವಹನವು ಪ್ರಾದೇಶಿಕ ಭಾಷೆಗಳಲ್ಲಿ ಪರಿಣಾಮಕಾರಿಯಾಗಿರುತ್ತದೆ. ಆದ್ದರಿಂದ ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ನೀಡಿ' ಎನ್ನುವ ಅಭಿಪ್ರಾಯವನ್ನು ಹಿರಿಯ ಪತ್ರಕರ್ತ, ಅಂಕಣಕಾರ ಶೇಖರ್ ಗುಪ್ತ ವ್ಯಕ್ತಪಡಿಸಿದರು.

'ನಾವೀಗ ಮಾಹಿತಿ ಯುಗದ ಉಚ್ಛ್ರಾಯ ಸ್ಥಿತಿಯಲ್ಲಿದ್ದೇವೆ. ಪತ್ರಕರ್ತರು ಸಾಮಾಜಿಕ ಜಾಲತಾಣಗಳಿಂದ ದೂರವುಳಿಯದೆ






ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಆದರೆ ಸುದ್ದಿಯನ್ನು ತುರ್ತಾಗಿ ಜನರಿಗೆ ತಲುಪಿಸುವ ಭರದಲ್ಲಿ ಮಾಹಿತಿಗಳು ವಿಭಿನ್ನವಾಗಿ ಜನರಿಗೆ ತಲುಪುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಇಷ್ಟಬಂದಂತೆ ಮಾಹಿತಿಯನ್ನು ಹರಿಯಬಿಡುವ ಮುನ್ನ ಎಚ್ಚರಿಕೆಯೂ ಅತ್ಯಗತ್ಯ' ಎಂದು ಅಭಿಪ್ರಾಯಪಟ್ಟರು.

ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಕೇಂದ್ರ ಮಾಜಿ ವಾರ್ತಾ ಸಚಿವ ಮನೀಶ್ ತಿವಾರಿಯವರು ಪ್ರಸಕ್ತ ಸನ್ನಿವೇಶಕ್ಕೆ ಅನುಗುಣವಾಗಿ ವಾರ್ತಾ ಇಲಾಖೆಗಳನ್ನು ಪುನರ್ ರಚಿಸುವ ತೀವ್ರ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಅನುಗುಣವಾಗಿ ಇಲಾಖೆಯ ಕಾರ್ಯ ವೈಖರಿಯು ಬದಲಾಗಬೇಕು. ಈ ನಿಟ್ಟಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಅಗತ್ಯ ಸೌಲಭ್ಯ ನೀಡಿ ಪುನರ್ ರೂಪಿಸಲು ಪ್ರಯತ್ನಗಳಾಗಬೇಕೆಂದು ಎಂದರು.

ಹಿರಿಯ ಪತ್ರಕರ್ತ, ಅಮೇರಿಕಾದಲ್ಲಿ ಟೈಮ್ಸ್ ಆಫ್ ಇಂಡಿಯಾ ಪ್ರತಿನಿಧಿಯಾಗಿರುವ ಚಿದಾನಂದ ರಾಜಘಟ್ಟ ಮಾತನಾಡಿ ನಮ್ಮ ದೇಶದಲ್ಲಿ ಸುದ್ದಿಯನ್ನು ಹೊರ ಬಿಡುವುದಕ್ಕಿಂತ ಸುದ್ದಿಯನ್ನು ಸಂರಕ್ಷಿಸುವ ಪ್ರಯತ್ನಗಳೇ ಹೆಚ್ಚು. ಸಾರ್ವಜನಿಕ ಸಂಪರ್ಕಾಧಿಕಾರಿಗಳು ಪಾರದರ್ಶಕ ಪ್ರಕ್ರಿಯೆಗಳನ್ನು ರೂಢಿಸಿಕೊಂಡು ಕಾರ್ಯವೈಖರಿ ಬದಲಿಸಿಕೊಳ್ಳುವ ಅಗತ್ಯವಿದೆ ಎಂದರು. ಈ ನಿಟ್ಟಿನಲ್ಲಿ ತಮ್ಮನ್ನು ತಾವು ಪುನರ್ ರೂಪಿಸಿಕೊಳ್ಳುವ ಜವಾಬ್ದಾರಿಯೂ ಅಧಿಕಾರಿಗಳ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಎರಡನೇ ದಿನದ ಕಾರ್ಯಾಗಾರದಲ್ಲಿ ನಡೆದ ಚರ್ಚಾ ಗೋಷ್ಠಿಯಲ್ಲಿ ಸಾಮಾಜಿಕ ಜಾಲತಾಣಗಳ ಭವಿಷ್ಯತ್ತಿನ ಸವಾಲುಗಳ ಬಗ್ಗೆ ಚರ್ಚಿಸಲಾಯಿತು. ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋ (ಸಾಮಾಜಿಕ ಮಾಧ್ಯಮ) ನಿರ್ದೇಶಕರಾದ ಶ್ರೀ ಬಿ ನಾರಾಯಣನ್, ಇಡ್ಯಾಟ್‌ಲ್ಯಾಬ್ಸ್ (idetatelabs) ವ್ಯವಸ್ಥಾಪಕರಾದ ಶ್ರೀ ಅಮಿತ್ ತ್ರಿಪಾಠಿ, ಎಕನಾಮಿಕ್ ಟೈಮ್ಸ್‌ನ ಸಹ ಸಂಪಾದಕಿ ಸೌಮ್ಯ ಅಜಿ ಭಾಗವಹಿಸಿದ್ದರು. ಮಧ್ಯಾಹ್ನದ ಗೋಷ್ಠಿಯಲ್ಲಿ ಸಾರ್ವಜನಿಕ ಸಂಪರ್ಕ ಮತ್ತು ಜಾಹಿರಾತು ಕುರಿತು ಸಂವಾದ ನಡೆಯಿತು. ಆಕಾಶವಾಣಿಯ ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಜಿತೇಂದ್ರ ಭಾರ್ಗವ, ಓಗಿಲ್ವಿ ಹಾಗೂ ಮ್ಯಾಥರ್ ಕಂಪನಿಯ ಉಪಾಧ್ಯಕ್ಷ ಮಧುಕರ್ ಸಬ್ನವೀಸ್ ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ವಾರ್ತಾ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಚಿರಂಜೀವಿ ಸಿಂಗ್ ಭಾಗವಹಿಸಿ ಮಾತನಾಡಿ ಇಲಾಖೆಯೊಡನೆ ಅವರ ಒಡನಾಟವನ್ನು ಮೆಲುಕು ಹಾಕಿದರು. ಅವರ ಅವಧಿಯಲ್ಲಿ ಪ್ರಕಟವಾದ ಪುಸ್ತಕಗಳ ಬಗ್ಗೆ ಹೆಮ್ಮೆಯಿಂದ ಮಾತನಾಡಿದರು. ಕಾರ್ಯಾಗಾರದಲ್ಲಿ ಒಟ್ಟು 13 ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಂ ಲಕ್ಷ್ಮೀನಾರಾಯಣ್, ಇಲಾಖೆಯ ನಿರ್ದೇಶಕರಾದ ಶ್ರೀ ಎನ್ ಆರ್ ವಿಶುಕುಮಾರ್ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು, ರಾಜ್ಯದ ಜಿಲ್ಲಾ ವಾರ್ತಾಧಿಕಾರಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

**ವಾರ್ತಾ ಇಲಾಖೆಯ ನಿರ್ದೇಶಕರ ಆಯ್ಕೆ :** ಕಾರ್ಯಾಗಾರದಲ್ಲಿ 'ಅಖಿಲ ಭಾರತ ಸಾರ್ವಜನಿಕ ಸೇವಾ ಸಂವಹನಾ ಅಧಿಕಾರಿಗಳ ಸಂಘಕ್ಕೆ ಚಾಲನೆ ನೀಡಲಾಯಿತು. ಸಂಘದ ಮೊಟ್ಟ ಮೊದಲ ಅಧ್ಯಕ್ಷರಾಗಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಶ್ರೀ ಎನ್ ಆರ್ ವಿಶುಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾದರು.





# ತುಂಗೆ-ಕೃಷ್ಣೆಯರ ಅಂಗಳದಲ್ಲಿ
# ಕನ್ನಡ ನುಡಿಹಬ್ಬದ ಸಂಭ್ರಮ

ಗವಿಸಿದ್ದಪ್ಪ ಹೊಸಮನಿ
ವಾರ್ತಾ ಸಹಾಯಕರು, ಬೀದರ್

ಮನಸಿದ್ದರೆ ಮಾತ್ರ ಕಲೆ, ಸಾಹಿತ್ಯಕ್ಕೆ ಬೆಲೆ ಬರುತ್ತದೆ. ನಾಡು-ನುಡಿ ಉಳಿಯಲು ಜನರ ಮನಸೇ ಮುಖ್ಯ. ಅಂತಹ ಮನಸು ರಾಯಚೂರು ಜನರದ್ದು. ರಾಯಚೂರು ಜನರು ತೋರಿದ ಪ್ರೀತಿಯನ್ನು ನಾನೆಂದೂ ಮರೆಯಲಾರೆ.

ಡಾ.ಬರಗೂರು ರಾಮಚಂದ್ರಪ್ಪ
ಹಿರಿಯ ಚಿಂತಕರು, ಸಾಹಿತಿಗಳು






**ಕೃ**ಷ್ಣ–ತುಂಗೆಯರ ಅಂಗಳದಲ್ಲಿ ಅಕ್ಷರಶಃ 'ಅಕ್ಷರ ಜಾತ್ರೆ'ಯ 'ಬೆಳಗು'.. 'ಭತ್ತದ ಕಣಜ'ದಲ್ಲಿ ಕನ್ನಡಾಭಿಮಾನದ ಉತ್ಸಾಹಕ್ಕೆ ಬರವಿರಲಿಲ್ಲ. ಬಂಡೆಗಲ್ಲಿನ ನಾಡು ಖ್ಯಾತಿಯ ಚಿನ್ನದ ಬೀಡಿನಲ್ಲಿ ಎಲ್ಲೆಡೆ ಕನ್ನಡದ್ದೇ ಮಾತು–ಮಂಥನದ ಭಾವ. ನಾಡೋಜಗೆ ಬೆವರಿನ ಗೌರವ..'

ಹೌದು! ಎಡದೊರೆಯ ನಾಡು ಎಂದೇ ಖ್ಯಾತಿವೆತ್ತ ರಾಯಚೂರಿನಲ್ಲಿ ಬರೋಬ್ಬರಿ ಆರು ದಶಕಗಳ ನಂತರ ಆಯೋಜನೆಗೊಂಡಿದ್ದ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 'ನುಡಿಹಬ್ಬ'ವು ಕನ್ನಡ ಮನಸುಗಳ ಕಲರವಕ್ಕೆ ಮತ್ತೊಮ್ಮೆ ಸಾಕ್ಷಿಯಾಗಿ ಇತಿಹಾಸದ ಪುಟಗಳನ್ನು ಸೇರಿತು.

ದೇಶದ ಹತ್ತು ರಾಜ್ಯಗಳಿಗೆ ವಿದ್ಯುತ್ ಪೂರೈಸುವ ಬೆಳಕಿನ ನಾಡು, ಇಡೀ ಏಷ್ಯಾ ಖಂಡದಲ್ಲಿಯೇ ಅತೀ ಹೆಚ್ಚು ಚಿನ್ನ ಉತ್ಪಾದಿಸುವ ಚಿನ್ನದ ನಾಡು, ಹತ್ತಿ ಮಾರುಕಟ್ಟೆಗೆ ದಕ್ಷಿಣ ಭಾರತದಲ್ಲೇ ಖ್ಯಾತಿವೆತ್ತ ನಾಡು ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಡಿಸೆಂಬರ್ 2, 3 ಮತ್ತು 4ರಂದು ಮೂರು ದಿನಗಳ ಕಾಲ ಎಲ್ಲೆಡೆ ಅಕ್ಷರ ಜಾತ್ರೆಯ ಸಂಭ್ರಮ ಕಳೆಗಟ್ಟಿತ್ತು. ಹೈದ್ರಾಬಾದ್ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳ ಜನರಲ್ಲಿರುವ ಕನ್ನಡತನವನ್ನು ಸಮ್ಮೇಳನವು ತೆರೆದಿಟ್ಟಿತು.

ಕೃಷಿ ವಿಶ್ವ ವಿದ್ಯಾಲಯದ ಆವರಣದ ಅಂಗಳದಲ್ಲಿ ಸುಮಾರು 20,000 ಚದರಡಿ ಗಾತ್ರದಲ್ಲಿ ನಿರ್ಮಿಸಿದ್ದ ಪಂಡಿತ ತಾರಾನಾಥ ಮಹಾಮಂಟಪ, ಪಂಡಿತ ಜಂಬಲದಿನ್ನಿ ಮಹಾದ್ವಾರ ಹೆಸರಿನ ಭವ್ಯ ವೇದಿಕೆಯು ಅಕ್ಷರ ಜಾತ್ರೆಗೆ ಅಕ್ಷರಶಃ ಮೆರುಗು ನೀಡುವಂತಿತ್ತು ಎಂಬುದಕ್ಕೆ ಅಲ್ಲಿ ಸಾಹಿತ್ಯ ಪ್ರಿಯರು ಕ್ಲಿಕ್ಕಿಸುತ್ತಿದ್ದ ಸೆಲ್ಫಿ ಸಂಭ್ರಮವೇ ಸಾಕ್ಷಿಯಾಗಿತ್ತು. ಅಕ್ಷರ ಜಾತ್ರೆಗೆ ಆಗಮಿಸುವ ಅತಿಥಿಗಳು, ಪ್ರತಿನಿಧಿಗಳಿಗೆ ಅಗತ್ಯ ವಸತಿ ವ್ಯವಸ್ಥೆ ಮಾಡಿದ್ದಲ್ಲದೇ, ವಿವಿಧ ವೇದಿಕೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಆಸನಗಳ ವ್ಯವಸ್ಥೆ ಮಾಡಲಾಗಿತ್ತು.

**ನಾಡೋಜಗೆ ನಾಡ ಗೌರವ:** ಹಿಂದಿನ ಹಲವಾರು ಸಮ್ಮೇಳನಗಳ ಪೈಕಿ ದಾಖಲೆಯ ಪ್ರಮಾಣದಲ್ಲಿ ಜನಸ್ತೋಮ ಕಂಡ ಕನ್ನಡ ಸಾಹಿತ್ಯ ಸಮ್ಮೇಳನವೆಂದೇ 82 ಕನ್ನಡ ಸಾಹಿತ್ಯ ಸಮ್ಮೇಳನವು ಹೊಸ ದಾಖಲೆ ಬರೆಯಿತು. ಸಮ್ಮೇಳನದ ಮೊದಲ ದಿನದ ಮುಂಜಾವಿಗೆ ಆರಂಭಗೊಂಡಿದ್ದ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಬಂಡಾಯ ಸಾಹಿತಿ, ಚಿಂತಕ, ಚಲನಚಿತ್ರ ನಿರ್ದೇಶಕರಾದ ಡಾ.ಬರಗೂರು ರಾಮಚಂದ್ರಪ್ಪ ಅವರ ಮೆರವಣಿಗೆಯು ಕೂಡ ಹಲವು ಹೊಸತನಕ್ಕೆ ಸಾಕ್ಷಿಯಾಯಿತು.

ರಾಯಚೂರು ನಗರದ ಕರ್ನಾಟಕ ಸಂಘದ ಆವರಣದಿಂದ ಅಲಂಕೃತ ಸಾರೋಟಿನಲ್ಲಿ ಆರಂಭಗೊಂಡ ಸರ್ವಾಧ್ಯಕ್ಷರ ಮೆರವಣಿಗೆಯಲ್ಲಿ 50ಕ್ಕೂ ಹೆಚ್ಚು ಕಲಾ ತಂಡಗಳು ಮತ್ತು 500ಕ್ಕೂ ಹೆಚ್ಚು ಕಲಾವಿದರು ಪಾಲ್ಗೊಂಡು ದೇಶಿ ಕಲೆಗಳನ್ನು ಪ್ರದರ್ಶಿಸಿ ಗಮನ ಸೆಳೆದರು. 'ಭತ್ತದ ಕಣಜ'ವಿದು ಎಮ್ಮ ನಾಡು ಎಂಬುದನ್ನು ಸಾಂಕೇತಿಕವಾಗಿ ತಿಳಿಸುವಂತೆ ಕಾಲೇಜೊಂದರ 82 ವಿದ್ಯಾರ್ಥಿಗಳು ಹಸಿರಾದ ಭತ್ತದ ಸಸಿಗಳನ್ನು ಹೊತ್ತು ಹಾಗೂ 82 ವಿದ್ಯಾರ್ಥಿನಿಯರು ಹಸಿರು ಸೀರೆಯುಟ್ಟು ಸಾಗುತ್ತಿದ್ದುದು ಕಂಡು ಬಂದಿತು. ಮೆರವಣಿಗೆ ವೇಳೆಯಲ್ಲಿ ಕಣ್ಣಾಯಿಸಿದುದ್ದಕ್ಕೂ ಕಾಣುತ್ತಿದ್ದ 3550 ಅಡಿಯಷ್ಟು ಉದ್ದದ ಕನ್ನಡ ಧ್ವಜಕ್ಕೆ ನಗರದ ವಿವಿಧ ಶಾಲಾ–ಕಾಲೇಜುಗಳ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳೊಟ್ಟಿಗೆ ವಿವಿಧೆಡೆಯಿಂದ ಆಗಮಿಸಿದ್ದ ತರುಣ–ತರುಣಿಯರು, ನಾಗರಿಕರು, ಮಹಿಳೆಯರು, ಮಕ್ಕಳು, ಕೈ ಜೋಡಿಸುತ್ತ ಜೋಡಿಸುತ್ತ ಕನ್ನಡಾಭಿಮಾನ ಮೆರೆದರು.

ಸಮ್ಮೇಳನದ ಮುನ್ನಾದಿನದ ಸಂಜೆ ವೇಳೆಗೆ ಪುರಪ್ರವೇಶ ಮಾಡಿದ ಸಮ್ಮೇಳನಾಧ್ಯಕ್ಷರಾದ ಡಾ.ಬರಗೂರು ರಾಮಚಂದ್ರಪ್ಪ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತ,
'ಶ್ರಮಸಂಸ್ಕೃತಿಯನ್ನೇ ಉಸಿರಾಡುವ ರಾಯಚೂರಿಗೆ ಬರಗೂರೇ ಬಂದಂತಾಗಿದೆ. ರಾಯಚೂರು ಸೀಮೆಗೆ ಬರುತ್ತಲೇ ಬೆವರಿನ ನಾಡು ಬಿಸಿಲೂರಿನ ಜನರು ತೋರಿದ ಪ್ರೀತಿಗೆ ಮನದುಂಬಿ ಬಂದಿದೆ. ಕರ್ನಾಟಕ ಏಕೀಕರಣದ ವಜ್ರಮಹೋತ್ಸವ ಆಚರಣೆಯ ಈ ಸಮಯದಲ್ಲಿ ಏಕೀಕರಣದ ಆಶಯಕ್ಕೆ ಮತ್ತಷ್ಟು ಮಹತ್ವ ಬಂದಂತಾಗಿದೆ ಎಂಬುದಕ್ಕೆ ಮೈಸೂರು ಪ್ರಾಂತ್ಯದ ವ್ಯಕ್ತಿಯನ್ನು ಗೌರವಿಸುತ್ತಿರುವುದೇ ಸಾಕ್ಷಿಯಾಗಿದೆ. ಏಕೀಕರಣದ ಆಶಯವನ್ನು ಈ ಸಮ್ಮೇಳನವು ಖಂಡಿತಾ ನೆರವೇರಿಸುತ್ತದೆ' ಎಂದು ವಾಗ್ದಾನ ನೀಡಿ, ನಾಡು–ನುಡಿಯನು ಉಳಿಸಿ, ಬೆಳೆಸುವ ಕೈಂಕರ್ಯಕ್ಕೆ ಮತ್ತಷ್ಟು ಕಸುವು ತುಂಬಿದರು.

ಸಮ್ಮೇಳನದ ಮೊದಲ ದಿನ ಬೆಳಗ್ಗೆ ರಾಷ್ಟ್ರ ಧ್ವಜಾರೋಹಣವನ್ನು ರಾಜ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಈ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ತನ್ವೀರ್ ಸೇಠ್ ನೆರವೇರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ.ಮನು ಬಳಿಗಾರ್ ಅವರು ಪರಿಷತ್ತಿನ ಧ್ವಜಾರೋಹಣವನ್ನು ನೆರವೇರಿಸಿದರು. ಮತ್ತು ನಾಡ ಧ್ವಜಾರೋಹಣವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು ಅವರು ನೆರವೇರಿಸಿದರು. ಬಳಿಕ ನಡೆದ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಜಿಲ್ಲಾಧಿಕಾರಿಗಳಾದ ಎಸ್. ಸಸಿಕಾಂತ್ ಸೆಂಥಿಲ್ ಅವರು ಚಾಲನೆ ನೀಡಿದರು.

ಮೊದಲ ದಿನ ಸಮ್ಮೇಳನದ ಉದ್ಘಾಟನಾ ಸಮಾರಂಭ ಬಿಸಿಲು ಬಾಗುವ ಹೊತ್ತಿಗೆ ಆರಂಭಗೊಂಡಿತು. ಬರೋಬ್ಬರಿ 82 ಜನರಿಂದ ಮೊಳಗಿದ ನಾಡಗೀತೆಯ ಮಾಧುರ್ಯವು ಕಿಕ್ಕಿರಿದು ನೆರೆದಿದ್ದ ಕನ್ನಡ ಮನಸುಗಳ ಮನತಣಿಸಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೀಪ ಬೆಳಗಿಸಿ 'ನುಡಿಹಬ್ಬ'ಕ್ಕೆ ಚಾಲನೆ ನೀಡಿದರು. ಸಮ್ಮೇಳನಾಧ್ಯಕ್ಷರಾದ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ, ಹಿರಿಯ ಸಾಹಿತಿ ನಾಡೋಜ ಡಾ.ಸಿದ್ದಲಿಂಗಯ್ಯ ಜೊತೆಗಿದ್ದರು. ಇದೆ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀಮತಿ ಉಮಾಶ್ರೀ ಅವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಲೋಕಸಭೆ ಸದಸ್ಯರಾದ ಬಿ.ವಿ ನಾಯಕ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಪುಸ್ತಕ ಮಳಿಗೆಗಳ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್ ಭೋಸರಾಜು ನೆರವೇರಿಸಿದರು. ಸ್ಥಳೀಯ ಶಾಸಕರಾದ ಡಾ.ಎಸ್. ಶಿವರಾಜ್ ಪಾಟೀಲ್ ಅವರು ವಾಣಿಜ್ಯ ಮಳಿಗೆಗಳನ್ನು ಉದ್ಘಾಟಿಸಿದರು. ಇದೆ ವೇಳೆ ಪರಿಷತ್ತಿನ ಪುಸ್ತಕಗಳು ಮತ್ತು ವಿವಿಧ ಲೇಖಕರ ಪುಸ್ತಕಗಳ ಲೋಕಾರ್ಪಣೆ ನಡೆಯಿತು. ಚಿತ್ರಕಲಾ ಪ್ರದರ್ಶನ, ಮಹಾಮಂಟಪದ, ವೇದಿಕೆ ಹಾಗೂ ಮುಖ್ಯದ್ವಾರದ ಉದ್ಘಾಟನೆ ಕೂಡ ಇದೆ ವೇಳೆ ನಡೆದವು.

**ಅಚ್ಚುಕಟ್ಟಾದ ಪುಸ್ತಕ ಮಳಿಗೆಗಳು**

ಇಲ್ಲಿವರೆಗಿನ ಸಮ್ಮೇಳನಗಳ ಪೈಕಿ ಬಹು ಅಚ್ಚುಕಟ್ಟಾಗಿ ಪುಸ್ತಕ ಮಳಿಗೆಗಳನ್ನು ರೂಪಿಸಲಾಗಿತ್ತು ಎನ್ನುವ ಮಾತುಗಳು ಪುಸ್ತಕ ಪ್ರಿಯರಿಂದ ಕೇಳಿ ಬಂದವು. ಸಮ್ಮೇಳನದ ಮುಖ್ಯ ವೇದಿಕೆಯ ಹತ್ತಿರ 520 ಮಳಿಗೆಯನ್ನೊಳಗೊಂಡಿದ್ದ ಬೃಹತ್ ವೇದಿಕೆಯಲ್ಲಿ ಸಾಲುಸಾಲಾಗಿದ್ದ 280 ಪುಸ್ತಕ ಮಳಿಗೆಗಳು, 80 ಕಲಾ ಕೃತಿ ಪ್ರದರ್ಶನ ಹಾಗೂ ವಾಣಿಜ್ಯ ಮಳಿಗೆಗಳ ಮಧ್ಯೆ ಮೂರು ದಿನಗಳ ಕಾಲ ಜನಸ್ತೋಮವೇ ಕಂಡು ಬಂದಿತು.

**ಮಾರ್ಗಸೂಚಿಯಾದ ಚಿಂತನ–ಮಂಥನ**

ಈ ಬಾರಿಯ ಸಮ್ಮೇಳನದಲ್ಲಿ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಪುಸ್ತಕ ಪ್ರಕಟಣೆ, ಮಹಿಳೆ, ಕೃಷಿ, ಮಾಧ್ಯಮ, ರಾಜಕೀಯ, ಸಾಮಾಜಿಕ ಸೇರಿದಂತೆ ನಾನಾ ವಿಷಯಗಳ ಮೇಲೆ ಬೆಳಕು ಚೆಲ್ಲುವ ದಿಶೆಯಲ್ಲಿ ಹಲವಾರು ಗೋಷ್ಠಿಗಳು ಮುಖ್ಯವೇದಿಕೆಯ ಮತ್ತು ಸಮಾನಾಂತರ ವೇದಿಕೆಗಳಲ್ಲಿ ಏಕಕಾಲಕ್ಕೆ ನಡೆದವು. ಮೊದಲ ದಿನ ನಾಲ್ಕು ಗೋಷ್ಠಿಗಳು ಮತ್ತು ಉಪನ್ಯಾಸ. ಎರಡನೇ ದಿನ ಏಳು ಗೋಷ್ಠಿಗಳು, ಕವಿಗೋಷ್ಠಿ ಮತ್ತು ಉಪನ್ಯಾಸ ನಡೆದವು. ಕೊನೆಯ ದಿನ ಸನ್ಮಾನ ಸಮಾರಂಭ ಕವಿಗೋಷ್ಠಿ, ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ಹಾಗೂ ಬಹಿರಂಗ ಅಧಿವೇಶನ ನಡೆದವು. ಈ ಮೂಲಕ ಸಮ್ಮೇಳನವು ಕೆಲವು ಮಾರ್ಗಸೂಚಿಗಳನ್ನು ನೀಡುವಲ್ಲಿ ಯಶಕಂಡಿತು. ಪರೋಕ್ಷವಾಗಿ ಕನ್ನಡ ಸಾಹಿತ್ಯವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕು. ಇದಕ್ಕೆ ಎಲ್ಲ ಬರಹಗಾರರು ಸಿದ್ಧರಾಗಬೇಕು. ತಂತ್ರಜ್ಞಾನದ ಎಲ್ಲ ಸಾಧ್ಯತೆಗಳನ್ನು ಬಳಸಿಕೊಂಡಲ್ಲಿ ಈ ಕೆಲಸ ಸಾಧ್ಯವಾಗುತ್ತದೆ ಎನ್ನುವ ಸಂದೇಶವನ್ನು ಸಮ್ಮೇಳನ ನೀಡಿತು. ಅಲ್ಲದೇ ಸಾಂಸ್ಕೃತಿಕ ರಾಜಕಾರಣ ಎನ್ನುವುದು ತೊಲಗಬೇಕು.



**ಈ ನೆಲದಲ್ಲಿ ಗುರುತರವಾಗಿರುವ ಬಂಡಾಯ ಸಾಹಿತ್ಯ ಚಳುವಳಿಗೆ ಒಂದು ಹೊಸ ದಿಕ್ಕು, ಛಂದಸ್ಸು, ಮೀಮಾಂಸೆ ನೀಡಿದ ಗೆಳೆಯ ಬರಗೂರು ರಾಮಚಂದ್ರಪ್ಪ. ಅವರ ಅಧ್ಯಕ್ಷತೆಯಲ್ಲಿ ನುಡಿಹಬ್ಬ ನಡೆದದ್ದು ಅರ್ಥಪೂರ್ಣವಾದುದಾಗಿದೆ.**

**ಪ್ರೊ. ಚಂದ್ರಶೇಖರ ಪಾಟೀಲ**
ಹಿರಿಯ ಸಾಹಿತಿಗಳು




ಆರೋಗ್ಯರ ಚಿಂತನ–ಮಂಥನಕ್ಕೆ ಅವಕಾಶವಿರಬೇಕು ಎನ್ನುವ ಎಚ್ಚರಿಕೆಯನ್ನು ಕೂಡ ಸಮ್ಮೇಳನವು ವಿವಿಧ ಗೋಷ್ಠಿಗಳ ಮೂಲಕ ನೀಡಿತು.

ದಲಿತ–ಬಂಡಾಯ ಸಾಹಿತ್ಯ ಮತ್ತು ಚಳುವಳಿಗಳು, ಸಾಹಿತ್ಯ–ಸಂಸ್ಕೃತಿ ಮತ್ತು ಸಾಮರಸ್ಯ, ಸೂಫಿ ಚಿಂತನೆ, ಸಂಸ್ಕೃತಿ ಮತ್ತು ರಾಜಕಾರಣ, ಸಾಹಿತ್ಯ ಮತ್ತು ರಾಜಕಾರಣ, ಮಹಿಳೆ–ಆಧುನಿಕತೆಗೆ ಮುಖಾಮುಖಿ, ಸಮಕಾಲೀನ ಸಮಸ್ಯೆಗಳು, ಸಾಹಿತ್ಯ ಮತ್ತು ಲಿಂಗ ರಾಜಕಾರಣ ಹಾಗೂ ಕೌಟುಂಬಿಕ ವ್ಯವಸ್ಥೆಯೊಳಗೆ ಮಹಿಳೆ, ಕನ್ನಡ ಸಾಹಿತ್ಯ : ಬಹುಮುಖಿ ನೆಲೆಗಳು, ಮುಸ್ಲಿಂ ಸಂವೇದನೆ, ವಚನಕಾರರ ಜೀವನ ದೃಷ್ಟಿ, ದಾಸ ಪರಂಪರೆಯ ಲೋಕದೃಷ್ಟಿ, ಪ್ರಜಾಪ್ರಭುತ್ವದಲ್ಲಿನ ವಿಮರ್ಶೆಯ ಸಾಧ್ಯತೆಗಳು, ಸಾಹಿತ್ಯ– ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಮರ್ಶೆ, ವಿಮರ್ಶೆಗೊಳಪಡದ ಅಧಿಕಾರ ಕೇಂದ್ರಗಳು, ಸಾಮಾನ್ಯ ಜನರ ವಿಮರ್ಶಾ ಪ್ರಜ್ಞೆ ಹೀಗೆ ನಾನಾ ವಿಷಯಗಳ ಮೇಲೆ ಸಾಹಿತಿಗಳು, ಚಿಂತಕರು, ಕವಿಗಳು ವಿಷಯ ಮಂಡಿಸಿದರು.

ಮಾಧ್ಯಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಮೂಹ ಮಾಧ್ಯಮ ಮತ್ತು ಸಾಮಾಜಿಕ ಹೊಣೆಗಾರಿಕೆ, ದೃಶ್ಯ ಮಾಧ್ಯಮ, ಮುದ್ರಣ ಮಾಧ್ಯಮ, ಹಾಗೂ ಸಾಮಾಜಿಕ ಜಾಲತಾಣಗಳು ವಿಷಯದ ಮೇಲೆ ಅವಲೋಕನ ನಡೆಯಿತು. ಸಮಾನ ಶಿಕ್ಷಣ ನೀತಿಯ ಸಾಧ್ಯತೆಗಳು, ಕನ್ನಡ ಶಾಲೆಗಳ ಅಳಿವು–ಉಳಿವು, ಪಠ್ಯಪುಸ್ತಕಗಳ ಸ್ವರೂಪ ಮತ್ತು ಶಿಕ್ಷಣ ಪದ್ಧತಿ, ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಪ್ರಾದೇಶಿಕ ಭಾಷೆಗಳ ವಿಷಯ ಮೇಲೆ ನಡೆದ ಚರ್ಚೆಯು ಶೈಕ್ಷಣಿಕ ಕ್ಷೇತ್ರದಲ್ಲಿರುವ ಸವಾಲುಗಳ ಅವಲೋಕನಕ್ಕೆ ಅವಕಾಶ ನೀಡಿತು. ಕೃಷಿ ಸಂಸ್ಕೃತಿ, ಕೃಷಿ ಕ್ಷೇತ್ರದ ಬಿಕ್ಕಟ್ಟು ಹಾಗೂ ಆಧುನಿಕತೆ ಹಾಗೂ ಸಾಂಪ್ರಾದಾಯಿಕ ಕೃಷಿ ವಿಷಯಗಳ ಮೇಲೆ ಕೂಡ ಗೋಷ್ಠಿಗಳು ನಡೆದವು. ಹೊಸ ತಲೆಮಾರಿನ ಸಾಹಿತಿಗಳ ಚಿಂತನ–ಮಂಥನಕ್ಕೂ ಸಮ್ಮೇಳನದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಕನ್ನಡ ಮತ್ತು ಹೊಸ ತಲೆಮಾರು ಗೋಷ್ಠಿಯಲ್ಲಿ ಕನ್ನಡ ತಂತ್ರಾಂಶದ ಬಳಕೆಯ ಸವಾಲುಗಳು, ಮಾತೃ ಭಾಷೆಯಲ್ಲಿ ಮುಕ್ತಜ್ಞಾನದ ಸಾಧ್ಯತೆಗಳು, ಅನ್ನದ ಭಾಷೆಯಾಗಿ ಕನ್ನಡದ ಕುರಿತು ವಿಚಾರ ವಿನಿಮಯ ನಡೆಯಿತು. ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಕನ್ನಡ ಸಾಹಿತ್ಯ:ಕೃಷಿ ಸಂವೇದನೆ, ಪುಸ್ತಕ ಸಂಸ್ಕೃತಿ: ಸವಾಲುಗಳು, ಪುಸ್ತಕ ಪ್ರಕಟಣೆ ಮತ್ತು ವಿತರಣೆ, ಸಾಹಿತ್ಯದ ಪತ್ರಿಕೆಗಳು ವಿಷಯಗಳ ಮೇಲೆ ಉಪನ್ಯಾಸ ಹಾಗೂ ಗೋಷ್ಠಿಗಳು ನಡೆದವು.



ರಾಜ್ಯದ ನೀರು–ನೀರಾವರಿ:ಸಮಸ್ಯೆಗಳು –ಪರಿಹಾರಗಳು ಎಂಬ ವಿಷಯದ ಮೇಲೆ ಬಸವರಾಜ ಬೊಮ್ಮಾಯಿ, ರಾಜಕೀಯ ಮತ್ತು ಸಾಮಾಜಿಕ ಚಲನೆ ಕುರಿತು ಅಡಗೂರು ಎಚ್.ವಿಶ್ವನಾಥ, ಧರ್ಮ ಮತ್ತು ರಾಜಕಾರಣದ ಕುರಿತು ವೈಎಸ್‌ವಿ ದತ್ತ, ಕೃಷಿ ಬಿಕ್ಕಟ್ಟುಗಳ ಕುರಿತು ಕೋಡಿಹಳ್ಳಿ ಚಂದ್ರಶೇಖರ ಮಾತನಾಡಿದರು. ರಾಯಚೂರಿನ ಇತಿಹಾಸ–ಶಿಕ್ಷಣ, ಸಾಹಿತ್ಯ–ಸಂಸ್ಕೃತಿ, ಮೂಲಭೂತ ಸೌಲಭ್ಯಗಳು ಕುರಿತು ನಡೆದ ಗೋಷ್ಠಿಯು ಅಕ್ಷರಶಃ ರಾಯಚೂರು ಜಿಲ್ಲಾ ದರ್ಶನ ಮಾಡಿಸಿತು. ಕನ್ನಡ ಸಂಸ್ಕೃತಿ : ವೈವಿಧ್ಯತೆ–ವೈಶಿಷ್ಟ್ಯತೆ, ಮಕ್ಕಳ ಸಾಹಿತ್ಯ ಕುರಿತು, ರಂಗಭೂಮಿ ಕುರಿತು ಡಾ.ಪ್ರಕಾಶ ಗರುಡ ಹಾಗೂ ಲಲಿತ ಕಲೆಗಳು ಕುರಿತು ಡಾ.ಸುಭಾಷ ಕಮ್ಮಾರ ಅವರು ವಿಷಯ ಮಂಡಿಸಿದರು.

ಸಮ್ಮೇಳನವು ಗಡಿಭಾಗದಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿಶೇಷವಾಗಿ ಕೆಲವು ಗೋಷ್ಠಿಗಳನ್ನು ರೂಪಿಸಲಾಗಿತ್ತು. ಪ್ರಾದೇಶಿಕ ಅಸಮಾನತೆ : ಅಭಿವೃದ್ಧಿಯ ಸವಾಲುಗಳು, ಪ್ರಾದೇಶಿಕ ಅಸಮಾನತೆ : ರಾಜಕೀಯ ಇಚ್ಛಾಶಕ್ತಿ, ಪ್ರಾದೇಶಿಕ ಅಸಮಾನತೆಯ ಸ್ವರೂಪಗಳು, 371 (ಜೆ) ಕಲಂ ಅಡಿಯಲ್ಲಿ ಇರುವ ಸೌಲಭ್ಯಗಳು ಮತ್ತು ಅನುಷ್ಠಾನದ ಸವಾಲುಗಳು ಕುರಿತು ನಡೆದ ಚರ್ಚೆಗಳು ಹೊಸ ಚಿಂತನೆಗೆ ಹಚ್ಚುವಂತೆ ಪ್ರೇರೇಪಿಸಿದವು.

ಕೊನೆಯ ದಿನ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲ್ ಅವರು ಗಣ್ಯರಿಗೆ ಸನ್ಮಾನಿಸಿದರು. ಬಳಿಕ ಕವಿ, ಚಿಂತಕ ಡಾ.ಚೆನ್ನಣ್ಣ ವಾಲಿಕಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಕವಿ–ಕವಯಿತ್ರಿಯರು ಕವನ ವಾಚನ ಮಾಡಿದರು. ಸಮ್ಮೇಳನದ ಎರಡನೇ ದಿನ ಆಯೋಜನೆಗೊಂಡಿದ್ದ ಕವಿಗೋಷ್ಠಿಯಲ್ಲಿ 50ಕ್ಕೂ ಹೆಚ್ಚು ಕವಿತೆಗಳು ಕವಿತೆ ಓದುತ್ತ ಕಾವ್ಯದ ಹೊಳೆಯನ್ನೇ ಹರಿಸಿದ್ದರು. ಚಿಂತಕರಾದ ಡಾ.ರಂಗರಾಜ ವನದುರ್ಗ, ಸರಜೂ ಕಾಟ್ಕರ್ ಹಾಗೂ ಇತರರು ಸಮ್ಮೇಳನಾಧ್ಯಕ್ಷರೊಂದಿಗೆ ನಡೆಸಿದ ಸಂವಾದ ಅರ್ಥಪೂರ್ಣವಾಗಿತ್ತು. ಡಾ.ಬರಗೂರು ಅವರು ಬರೋಬ್ಬರಿ ಎರಡು ತಾಸುಗಳ ಕಾಲ ಎಲ್ಲ ಪ್ರಶ್ನೆಗಳಿಗೆ ಮತ್ತು ನಿವೇದನೆಗಳಿಗೆ ನಿರರ್ಗಳವಾಗಿ ಪ್ರತಿಕ್ರಿಯಿಸಿದರು.

**ಹೃನ್ಮನ ಸೆಳೆದ ಸಾಂಸ್ಕೃತಿಕ ಸಂಜೆ:**

ಸಮ್ಮೇಳನದ ಮೂರು ದಿನಗಳ ಕಾಲ ಮುಖ್ಯ ವೇದಿಕೆ ಮತ್ತು ಸಮಾನಾಂತರ ವೇದಿಕೆಯಲ್ಲಿ ಸಂಜೆ ವೇಳೆಯಿಂದ ಏಕಕಾಲಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಜುಗಲ್‌ಬಂದಿ, ಜಾನಪದ ಗೀತೆಗಳ ಹಾಡುಗಾರಿಕೆ, ಸಮೂಹ ನೃತ್ಯ, ದಾಸವಾಣಿ, ವಚನಗಾಯನ, ಭಾವ ಗೀತೆಗಳು, ಕೊಳಲುವಾದನ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಸಮೂಹ ನೃತ್ಯ, ತತ್ವಪದ ಗಾಯನ, ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ವಚನ ಗಾಯನ, ಗೊಂದಲಗೇರಿ ಮೇಳ, ಛಾಡಕಿ ಪದ, ತಬಲಾ ಸೋಲೊ ವಾದನ ಹೀಗೆ ವಿವಿಧ ಕಾರ್ಯಕ್ರಮಗಳು ತಡರಾತ್ರಿವರೆಗೂ ನಡೆದರು ಕೂಡ ಸಹೃದಯರ ಉತ್ಸಾಹ ಮಾತ್ರ ಬತ್ತಲಿಲ್ಲ.

ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕೂಡ ಮೂರು ದಿನಗಳ ಕಾಲ ನಾನಾ ಕಲಾವಿದರಿಂದ ವಚನ ಸಂಗೀತ, ಭಾವಗೀತೆಗಳ ಗಾಯನ ಸೇರಿದಂತೆ ಸಂಜೆವರೆಗೆ ವಿವಿಧ ಕಾರ್ಯಕ್ರಮಗಳು ನಿರಂತರ ನಡೆದವು. ಅಲ್ಲಿ ದೃಶ್ಯ ಕಾವ್ಯ, ರಂಗ ಗೀತೆಗಳ ಹಾಡುವಿಕೆ, ಕನ್ನಡ ಗಜಲ್‌ಗಳ ಹಾಡುವಿಕೆಯು ವಿಶೇಷವಾಗಿತ್ತು. ರಂಗಮಂದಿರದಲ್ಲಿ ಸಮ್ಮೇಳನದ ನಿಮಿತ್ತ ವಿವಿಧ ನಾಟಕಗಳು ಪ್ರದರ್ಶನಗೊಂಡವು. ವರಾಹ ಪುರಾಣ, ಏಕಲವ್ಯ, ಸಿಂಗಾರವ್ವ ಮತ್ತು ಅರಮನೆ, ಪ್ರಚಂಡ ರಾವಣ, ಅಮರ ಜ್ಯೋತಿಗಳು, ತೆರೆಯದ ಪುಟ, ಗಾಂಧಿಗೆ ಸಾವಿಲ್ಲ, ಸಿಂಧೂರ ಲಕ್ಷ್ಮಣ, ಶಿವಶರಣ ಮಡಿವಾಳ ಮಾಚಿದೇವ ನಾಟಕಗಳು ಸೇರಿದಂತೆ ಬಯಲಾಟಗಳನ್ನು ಕೂಡ ಸಂಘಟಿಸಲಾಗಿತ್ತು.

**ಒಪ್ಪ ಓರಣಗೊಂಡಿದ್ದ ರಾಯಚೂರು**

ಸಮ್ಮೇಳನದ ಹಿನ್ನೆಲೆಯಲ್ಲಿ ರಾಯಚೂರು ನಗರದ ಬೀದಿ ಬೀದಿಗಳು ಅಲಂಕೃತಗೊಂಡಿದ್ದವು. ಮುಖ್ಯ ರಸ್ತೆಗಳಲ್ಲಿ ಪ್ರಮುಖ ವೃತ್ತಗಳಲ್ಲಿ ಸಮ್ಮೇಳನಾಧ್ಯಕ್ಷರ ಭಾವಚಿತ್ರವನ್ನೊಳಗೊಂಡಿದ್ದ ದೊಡ್ಡ ದೊಡ್ಡ ಫ್ಲೆಕ್ಸ್‌ಗಳನ್ನು ಹಾಗೂ ಬ್ಯಾನರ್‌ಗಳನ್ನು ಹಾಕಲಾಗಿತ್ತು. ಅಕ್ಷರ ಜಾತ್ರೆಗೆ ಅತಿಥಿಗಳನ್ನು ಸ್ವಾಗತಿಸಲು ಬೃಹತ್ ಗಾತ್ರದ ಕಮಾನುಗಳನ್ನು ನಿಲ್ಲಿಸಲಾಗಿತ್ತು. ಸಮ್ಮೇಳನದ ಹಿನ್ನೆಲೆಯಲ್ಲಿ ರಸ್ತೆಗಳು ಅಗಲೀಕರಣಗೊಂಡು ಗಮನ ಸೆಳೆದವು.

**ವರ್ಲಿ ಕಲೆಯ ಚಿತ್ತಾರ**

ಸಮ್ಮೇಳನದ ಹಿನ್ನೆಲೆಯಲ್ಲಿ ಮುಖ್ಯ ವೃತ್ತಗಳಲ್ಲಿ ಕಂಡು ಬಂದ ಅಲಂಕೃತ ಚಕ್ಕಡಿ ಬಂಡಿಗಳು ಗ್ರಾಮೀಣ ಸೊಗಡಿನ ಕಲೆಯನ್ನು ಅನಾವರಣಗೊಳಿಸಿದವು. ಸಮ್ಮೇಳನದ ಬಹುವಿಶೇಷತೆ ಎಂದರೆ ಕಣ್ಣಾಯಿಸಿದಲ್ಲೆಲ್ಲಾ ಕಾಣುತ್ತಿದ್ದ ಹಾಗೂ ನಗರದ ಮುಖ್ಯ ಹಾಗೂ ಒಳ ರಸ್ತೆಗಳ ಇಕ್ಕೆಲಗಳಲ್ಲಿ ಬಿಡಿಸಿದ್ದ ವರ್ಲಿ ಚಿತ್ರ ಕಲೆಯ ಫಲಕಗಳು. ಕೃಷಿ ವಿವಿ ಆವರಣದಲ್ಲಿ ಹಲವು ಬಗೆಯ ಅಲಂಕೃತ ಫಲಕಗಳು ಕಣ್ಮನ ಸೆಳೆದವು.

**ಖಡಕ್ ರೊಟ್ಟಿ ಊಟ**

ಸಮ್ಮೇಳನದ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಪಾಕಶಾಲೆಯಲ್ಲಿ 4 ಲಕ್ಷಗಳಷ್ಟು ರೊಟ್ಟಿಗಳನ್ನು ಸಂಗ್ರಹಿಸಿತ್ತು. ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳು ಮತ್ತು ಅತಿಥಿಗಳು ಹಾಗೂ ಸಾಹಿತ್ಯ ಪ್ರಿಯರಿಗೆ ಉತ್ತರ ಕರ್ನಾಟಕ ಶೈಲಿಯ ಊಟದ ವ್ಯವಸ್ಥೆ ಮಾಡಲಾಗಿತ್ತು.

**ಸುಸಜ್ಜಿತ ಮಾಧ್ಯಮ ಕೇಂದ್ರ**

ಸಮ್ಮೇಳನದ ಹಿನ್ನೆಲೆಯಲ್ಲಿ ಆಗಮಿಸುವ ಮಾಧ್ಯಮ ಪ್ರತಿನಿಧಿಗಳಿಗೆ ತ್ವರಿತವಾಗಿ ಸುದ್ದಿ ರವಾನಿಸಲು



**ಪ್ರಮುಖ ನಿರ್ಣಯಗಳು**

ಕರ್ನಾಟಕದಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದವರಿಗೆ ಸಿಗುವ ಎಲ್ಲಾ ಶೈಕ್ಷಣಿಕ ಹಾಗೂ ಔದ್ಯೋಗಿಕ ಸೌಲಭ್ಯಗಳು ಹೊರ ನಾಡ ಕನ್ನಡಿಗರಿಗೆ ದೊರೆಯಬೇಕು. ಸರ್ಕಾರಿ ಶಾಲೆಗಳ ಸಬಲೀಕರಣ ಮತ್ತು ಸಮಾನ ಶಿಕ್ಷಣಕ್ಕೆ ಸೂಕ್ತ ನೀಲಿ ನಕ್ಷೆ ಸಿದ್ಧಗೊಳಿಸಿ ಶೀಘ್ರವಾಗಿ ಅನುಷ್ಠಾನಗೊಳಿಸಲು ಒತ್ತಾಯಿಸಬೇಕು, ಸರ್ಕಾರ ಕೈಬಿಟ್ಟ ರಾಷ್ಟ್ರಕವಿ ಆಯ್ಕೆಯನ್ನು ಮತ್ತೆ ಆರಂಭಿಸಿ ರಾಷ್ಟ್ರಕವಿ ಪುರಸ್ಕಾರ ಕೊಡುವ ಪದ್ಧತಿಯನ್ನು ಮುಂದುವರೆಸಬೇಕು ಎನ್ನುವ ಕೆಲವು ನಿರ್ಣಯಗಳನ್ನು ಸಮ್ಮೇಳನದ ಕೊನೆಯ ದಿನ ಕೈಗೊಳ್ಳಲಾಯಿತು. ಜೊತೆಗೆ ರಾಯಚೂರು ತಾಲೂಕಿಗೆ ನಿರಂತರವಾಗಿ ವಿದ್ಯುತ್ ಪೂರೈಕೆಗೆ ಒತ್ತು ಕೊಡಬೇಕು, ರಾಯಚೂರಿನ ಸ್ನಾತಕೋತ್ತರ ಕೇಂದ್ರವನ್ನು ಸ್ವತಂತ್ರ ವಿಶ್ವವಿದ್ಯಾಲಯವನ್ನಾಗಿ ಘೋಷಿಸಬೇಕು ಎನ್ನುವ ಬೇಡಿಕೆಗಳನ್ನು ಕೂಡ ಸರ್ಕಾರದ ಮುಂದಿಡಲು ಸಮ್ಮೇಳನದಲ್ಲಿ ನಿರ್ಧರಿಸಲಾಯಿತು.

ಅನುಕೂಲವಾಗುವಂತೆ ಸುಸಜ್ಜಿತವಾಗಿ ನಿರ್ಮಿಸಿದ್ದ ಮಾಧ್ಯಮ ಕೇಂದ್ರದಲ್ಲಿ 75ಕ್ಕೂ ಹೆಚ್ಚು ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರಗಳ ವ್ಯವಸ್ಥೆ ಮಾಡಲಾಗಿತ್ತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕಾರಿಗಳು ಕೇಂದ್ರದ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಸಮ್ಮೇಳನದ ವಿವಿಧ ಕಾರ್ಯಕ್ರಮಗಳ ಮಾಹಿತಿ ಒದಗಿಸಲು ಜಿಲ್ಲಾಡಳಿತವು ವೆಬ್‌ಸೈಟ್ ರೂಪಿಸಿತ್ತು.

ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪ, ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರೆಡ್ಡಿ, ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್ ಹಾಗೂ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಪ್ರಕಾಶ ಮೃತ್ಯುಂಜಯ ಸಾಲಿಮಠ ಇತರರು ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಪರಿಷತ್ತಿನ ಮಾಜಿ ಅಧ್ಯಕ್ಷ ಪ್ರೊ.ಚಂದ್ರಶೇಖರ್ ಪಾಟೀಲ್ ಅವರು ಮಾತನಾಡಿ, 'ಬಂಡಾಯ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದ ಡಾ.ಬರಗೂರು ಅವರು ಸಮ್ಮೇಳನ ಸರ್ವಾಧ್ಯಕ್ಷತೆಯನ್ನು ವಹಿಸಿದ್ದು 82ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಿಶೇಷ ಅರ್ಥ ಬಂದಂತಾಗಿದೆ' ಎಂದು ತಿಳಿಸಿದರು. ಡಾ.ಬರಗೂರು ಅವರು ಮಾತನಾಡಿ, 'ಕನ್ನಡ ಭಾಷೆಯು ನಶಿಸುತ್ತದೆ ಎನ್ನುವುದು ಬರೀ ಮಾತಷ್ಟೇ. ಸಾವಿರಾರು ವರ್ಷಗಳ ಕಾಲ ಕನ್ನಡವು ಹಲವಾರು ಸವಾಲುಗಳನ್ನು ಎದುರಿಸುತ್ತ ಬಂದಿರುವುದನ್ನು ನೋಡಿದರೆ ಕನ್ನಡವು ಸದಾಕಾಲ ಜೀವಂತಿಕೆಯಿಂದಿರುವ ಭಾಷೆಯಾಗಿಯೇ ಇರುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಕನ್ನಡ ಭಾಷೆಯನ್ನು ಉಳಿಸಬೇಕೆಂದರೆ ಜನರಿಗೆ ಬದುಕುವ ಭರವಸೆ ಕೊಡಬೇಕಿದೆ. ಭಾಷೆ ಮತ್ತು ಬದುಕನ್ನು ಒಟ್ಟಿಗೆ ನೋಡಿದರೆ, ಜನರಿಗೆ ಬದುಕುವ ಸ್ವಾತಂತ್ರ್ಯವನ್ನು ಕಲ್ಪಿಸಿದರೆ ಮಾತ್ರ ಕನ್ನಡವನ್ನು ಉಳಿಸಲು ಸಾಧ್ಯವಾಗುತ್ತದೆ' ಎಂದು ಮತ್ತೊಮ್ಮೆ ಬಲವಾಗಿ ಪ್ರತಿಪಾದಿಸಿದರು.

**ಜನಮನ ಸೂರೆಗೊಂಡ ಹಂಸಲೇಖ ತಂಡದ ಗಾಯನ**

ಸಮ್ಮೇಳನದ ಕೊನೆಯ ದಿನವೂ ಜನರು ಕೃಷಿ ವಿವಿ ಆವರಣದತ್ತ ದಂಡುದಂಡಾಗಿ ಬರುತ್ತಿರುವುದು ಕಂಡು ಬಂದಿತು. ಕೊನೆಯ ದಿನ ಖ್ಯಾತ ಸಂಗೀತ ನಿರ್ದೇಶಕರಾದ ಹಂಸಲೇಖ ಹಾಗೂ ಅವರ ತಂಡದಿಂದ ನಡೆದ ಸಂಗೀತ ಕಾರ್ಯಕ್ರಮಕ್ಕೆ ಜನರು ಕಿಕ್ಕಿರಿದು ಸೇರಿ, ಸಿಳ್ಳೆ ಹೊಡೆಯುತ್ತ ಸಂಭ್ರಮಿಸಿದರು.

ನಾಡು ನುಡಿಯ ಸ್ವಾಭಿಮಾನದ ಸಂಕೇತದಂತಿರುವ ಈ ಸಮೇಳನವು ರಾಯಚೂರಿನಲ್ಲಿ ಕಳೆದ ವರ್ಷವೇ ನಡೆಯಬೇಕಿತ್ತು. ಆದರೆ, ಬರ ಹಾಗೂ ಮತ್ತಿತರ ಕಾರಣಕ್ಕೆ ಮುಂದೂಡಲಾಗಿತ್ತು. ರಾಯಚೂರಿನಲ್ಲಿ ಈ ಮೊದಲು 1932 ಹಾಗೂ 1955ರಲ್ಲಿ ಕೂಡ ಸಾಹಿತ್ಯ ಸಮ್ಮೇಳನಗಳು ನಡೆದಿದ್ದು ಇತಿಹಾಸ.

ಸಮ್ಮೇಳನದ ನಿರ್ವಹಣೆಯ ಹೊಣೆಯು ಜಿಲ್ಲಾಧಿಕಾರಿ ಎಸ್. ಸಸಿಕಾಂತ್ ಸೆಂಥಿಲ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂ. ಕೂರ್ಮರಾವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಚೇತನ್ ಸಿಂಗ್ ರಾಥೋರ್, ಅಪರ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರ ಹೆಗಲೇರಿತ್ತು. ಮೂರು ದಿನಗಳ ಕಾಲ ಸಮ್ಮೇಳನವು ಅಚ್ಚುಕಟ್ಟಾಗಿ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು ಮತ್ತು ಸ್ಥಳೀಯ ವಿವಿಧ ಕನ್ನಡ ಪರ ಸಂಘಟನೆಗಳ ಪ್ರಮುಖರು ನೇತೃತ್ವ ವಹಿಸಿ ಸಮ್ಮೇಳನದ ಯಶಸ್ಸಿಗೆ ಹಗಲಿರುಳು ಶ್ರಮಿಸಿದರು.






# ಹೊಸ ವರ್ಷ.. ನೂರು ಬಣ್ಣ..

ಎನ್. ಜಗನ್ನಾಥ ಪ್ರಕಾಶ್

ಹ್ಯಾಪಿ ನ್ಯೂ ಇಯರ್ ಎಂಬ ಸೊಲ್ಲು ಜನವರಿ 1 ರಂದು ಕೇಳುವುದು ಸಾಮಾನ್ಯ. ಹಳೆಯ ವರ್ಷಕ್ಕೆ ವಿದಾಯ ಕೊಟ್ಟು ಹೊಸ ವರ್ಷದ ಹುಟ್ಟಿಗೆ ಸ್ವಾಗತ ಹೇಳುವ ಈ ಸಂಭ್ರಮ ದೇಶ, ಭಾಷೆ, ಗಡಿಗಳನ್ನು ಮೀರಿದ್ದು. ಹಬ್ಬ-ಹರಿದಿನಗಳು ಹಾಸುಹೊಕ್ಕಾಗಿರುವ ಮಾನವ ಸಂಸ್ಕೃತಿಯಲ್ಲಿ ಹೊಸವರ್ಷ ಆಚರಣೆ ಶುರುವಾಗಿರುವುದು ಕ್ರಿಸ್ತಪೂರ್ವ 2000ರಷ್ಟು ಹಿಂದೆ. ಅದು ಪ್ರಾಚೀನ ನಾಗರಿಕತೆಯ ಕಾಲದಲ್ಲಿ.

ಬ್ಯಾಬಿಲೇನಿಯಾ, ಮೆಸಪಟೋಮಿಯಾ, ಗ್ರೀಸ್, ರೋಮ್, ಭಾರತೀಯ ಸಂಸ್ಕೃತಿಗಳಲ್ಲಿ ಹೊಸ ವರ್ಷಕ್ಕೆ ಸ್ವಾಗತ ಕೋರುವ ಪರಿಪಾಠವಿದ್ದು ಆಯಾದೇಶಗಳ ಪಂಚಾಂಗಗಳಿಗೆ ಅನುಗುಣವಾಗಿ ದಿನಗಳು ಬದಲಾಗಿವೆ, ಭಿನ್ನ ಭಿನ್ನ ಆಚರಣೆಗಳೂ ಹೊಸ ವರ್ಷಕ್ಕಿವೆ. ಆದರೆ ಇವುಗಳೆಲ್ಲದರ ಹಿನ್ನೆಲೆ ಮಾತ್ರ 'ಹಳೆ ಕಹಿಗೆ ವಿದಾಯ, ಹೊಸ ಸಿಹಿಗೆ ಆಹ್ವಾನ'.

ನಮ್ಮ ನಾಡಲ್ಲಿ ಹೊಸ ವರುಷದಿಂದ ಯುಗಾದಿ. ನಾಡಿನ ಉಳಿದೆಡೆ ಹೊಸ ವರ್ಷದ ಆಚರಣೆ ಬೇರೆ ಬೇರೆ ಕಾಲಕ್ಕೆ ಆಗುವುದಿದೆ. ಉಳಿದ ದೇಶಗಳಲ್ಲೂ ಹೊಸ ವರ್ಷದ ಆರಂಭಕ್ಕೆ ಇಂತದ್ದೇ ದಿನವೆಂಬುದಿರಲಿಲ್ಲ. ಕ್ರಿ.ಪೂ.46ರಲ್ಲಿ ಜೂಲಿಯಸ್ ಸೀಸರ್ ಕಾಲಮಾಪನ ಪಟ್ಟಿಯನ್ನು ಪರಿಷ್ಕರಿಸಿ ಸ್ಯಾಟರ್ನ್ ದೇವತೆಯ ಉತ್ಸವ ಮುಗಿದ ಕೂಡಲೇ ಬರುವ ಜನವರಿಯನ್ನು ವರ್ಷದ ಮೊದಲ ತಿಂಗಳಾಗಿ ಸೂಚಿಸಿದನು.



ಜನವರಿ ವರ್ಷದ ಮೊದಲ ತಿಂಗಳೆಂದು ಜೂಲಿಯಸ್ ಸೀಸರ್ ರೋಮ್‌ನಲ್ಲಿ ಸೂಚಿಸಿದರೂ ಹೊಸ ವರ್ಷ ಕ್ರಿಸ್‌ಮಸ್‌ನಲ್ಲೊ ಅಥವಾ ಮಾರ್ಚ್ ಮಾಸದಲ್ಲಿಯೋ ಜರುಗುತ್ತಿತ್ತು. ನಿರ್ದಿಷ್ಟ ದಿನದಂದೇ ಹೊಸ ವರ್ಷದ ಆಚರಣೆ ಮಾಡಬೇಕೆಂಬ ಕಟ್ಟಪ್ಪಣೆಗಳೂ ಆಗಿರಲಿಲ್ಲ.



ಅದು 16ನೇ ಶತಮಾನದಲ್ಲಾದ ಬದಲಾವಣೆ. ಅಲ್ಲಿಯವರೆಗೆ ಯುರೋಪಿನಾದ್ಯಂತ ಹೊಸವರ್ಷದ ಹಬ್ಬ ನಡೆಯುತ್ತಿದ್ದ ದಿನ ಮಾರ್ಚ್ 24. ಗ್ರೆಗೋರಿಯನ್ ಕ್ಯಾಲೆಂಡರ್ ಅನುಸರಿಸಲು ಅನೇಕ ದೇಶಗಳು ಸಮ್ಮತಿಸಿದ ಮೇಲೆ ವರ್ಷದ ಮೊದಲ ವರ್ಷ ಜನವರಿ ಮಾಹೆಗೆ ವರ್ಗವಾಯಿತು. ಸ್ಕಾಟ್‌ಲೆಂಡ್ 1600ರ ಸುಮಾರಿಗೆ ಗ್ರೆಗೋರಿಯನ್ ಸುಧಾರಣೆಗಳನ್ನು ಅಳವಡಿಸಿಕೊಂಡು ಜನವರಿ ಒಂದನ್ನು ವರ್ಷದ ಮೊದಲ ದಿನವನ್ನಾಗಿ ಆಚರಿಸಿತು. ಸ್ಕಾಟ್‌ಲೆಂಡ್ ಅನ್ನು ಜರ್ಮನಿ, ಡೆನ್ಮಾರ್ಕ್, ರಷ್ಯಾ, ಸ್ವೀಡನ್‌ಗಳೂ ಅನುಸರಿಸಿದವು.

ಪ್ರತಿವರ್ಷ ಜನವರಿ ಒಂದರಂದು ವರ್ಷದ ಮೊದಲ ದಿನ ಆಚರಿಸುವ ಪದ್ಧತಿ 1752ರಲ್ಲಿ ಇಂಗ್ಲೆಂಡಿನಲ್ಲಿ ಜಾರಿಗೆ ಬಂದರೂ ದೇಶದ ಎಲ್ಲರೂ ಅನ್ನು ಪಾಲಿಸುತ್ತಿರಲಿಲ್ಲ. ಇಂಗ್ಲೆಂಡ್‌ನಲ್ಲಿ ಎಲ್ಲ ಜನತೆ ಜನವರಿ ಒಂದರಂದೇ ಹೊಸ ವರ್ಷ ಆಚರಿಸಬೇಕೆಂದು ಅಲ್ಲಿಯ ಅರಸು ವಿಲಿಯಂ ಕಾನೂನು ಜಾರಿ ಮಾಡಬೇಕಾಯಿತು. ಯುರೋಪಿನಲ್ಲಾದ ಬದಲಾವಣೆ ಬ್ರಿಟಿಷ್ ಆಡಳಿತವಿದ್ದ ಭಾರತದಲ್ಲೂ ಕಾಣಿಸಿಕೊಂಡಿದ್ದು ಈಗ ಇತಿಹಾಸ.

ತೂಗುಬಿಟ್ಟ ನಕ್ಷತ್ರಗಳು ಮಿನುಗುವ, ರಂಗುರಂಗಿನ ದೀಪಗಳು ಹೊಳೆ ಹೊಳೆಯುವ ಹೊತ್ತಿನಲ್ಲಿ ಹೊಸವರ್ಷವನ್ನು ಸ್ವಾಗತಿಸಲು ಜಗತ್ತಿನ ಜನ ಕಾತುರದಿಂದ ಕಾಯುವುದು ಈಗೀಗ ಮಾಮೂಲು. ಐರೋಪ್ಯರೇಕೆ ನಮ್ಮಲ್ಲಿಯೂ ಡಿಸೆಂಬರ್ 31, ಜನವರಿ 1ರ ಆಚರಣೆ ವ್ಯಾಪಕವಾಗಿದೆ. ಪ್ರತಿಷ್ಠಿತ ಹೋಟೆಲ್–ಕ್ಲಬ್, ಐಷಾರಾಮಿ ಬಂಗ್ಲೆಗಳು ಆ ರಾತ್ರಿಯ ಆಮೋದ–ಪ್ರಮೋದಗಳಿಗೆ ಕಾಯುತ್ತಿರುತ್ತವೆ. ಇದೊಂದು ಬಗೆಯ ಸಾರ್ವತ್ರಿಕ ಹಬ್ಬವೆನ್ನುವಂತಾಗಿದೆ.

**ಶುಭಾಶಯ ವಿನಿಮಯ, ನಗು, ಕೇಕೆ, ಪಟಾಕಿ ಸದ್ದು, ದೊಂಬಿ, ಗದ್ದಲ, ಲಾಠಿ ಪ್ರಹಾರಗಳಿಗೂ ಕಾರಣವಾಗುವ ಹೊಸ ವರ್ಷದ ಸ್ವಾಗತ ಸಂಭ್ರಮದ ಆಚರಣೆ ಎಲ್ಲಡೆ ಒಂದೇ ರೀತಿಯಾಗಿದೆ. ವೈವಿಧ್ಯಮಯವಾಗಿರುವುದು ವಿಶೇಷ.**



ಶುಭಾಶಯ ವಿನಿಮಯ, ನಗು, ಕೇಕೆ, ಪಟಾಕಿ ಸದ್ದು, ದೊಂಬಿ, ಗದ್ದಲ, ಲಾಠಿ ಪ್ರಹಾರಗಳಿಗೂ ಕಾರಣವಾಗುವ ಹೊಸ ವರ್ಷದ ಸ್ವಾಗತ ಸಂಭ್ರಮದ ಆಚರಣೆ ಎಲ್ಲಡೆ ಒಂದೇ ರೀತಿಯಾಗಿದೆ. ವೈವಿಧ್ಯಮಯವಾಗಿರುವುದು ವಿಶೇಷ. ಇದಕ್ಕೆ ಧಾರ್ಮಿಕ ಸ್ಪರ್ಶವೂ ಇದೆ. ಇಂತಹ ಆಚರಣೆಗಳು ದೇಶದಿಂದ ದೇಶಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುವುದೂ ಇದೆ.

ಕೇಕ್ ಮೇಲೆ ಮೊಂಬತ್ತಿ ಬೆಳಗಿಸುವುದು, ಅದನ್ನು ಕತ್ತರಿಸಿ ಹಂಚಿಕೊಳ್ಳುವುದು ಹೊಸ ವರ್ಷವ ಸ್ವಾಗತ ಕೋರುವ ವಿಧಿ–ವಿಧಾನಗಳಲ್ಲಿ ಬಹುಸಾಮಾನ್ಯವಾದುದು. ಸ್ಕಾಟ್‌ಲೆಂಡ್, ಫ್ರಾನ್ಸ್‌ಗಳಲ್ಲಿ ಇದು ಹಿರಿಯರನ್ನು ಗೌರವಿಸುವ ಮಹತ್ವದ ಹಬ್ಬ. ಹೊಸವರ್ಷ ಶುರುವಾದ ಕೂಡಲೇ ಹಿರಿಯರನ್ನು ಅಭಿನಂದಿಸಿ ಅವರಿಗೆ ಉಡುಗೊರೆಗಳನ್ನು ಕೊಟ್ಟು ಅವರಿಂದ ಆಶೀರ್ವಾದ ಪಡೆಯುವುದು ಫ್ರಾನ್ಸ್‌ನಲ್ಲಿ ರೂಢಿ. ಆಗ ಪರಸ್ಪರ ಕೇಕ್ ವಿನಿಮಯವೂ ಮಾಮೂಲಿ.

ರೋಂನಲ್ಲಿ ಗಂಡುಹೆಣ್ಣು ವೇಷ ತೊಡುವುದು, ಹೆಣ್ಣು ಗಂಡುವೇಷ ತೊಟ್ಟು ಹಾಡು, ಕುಡಿತ, ಕುಣಿತಗಳಲ್ಲಿ ರಾತ್ರಿಯೆಲ್ಲಾ ಕಳೆಯುವುದು ಹಿಂದಿನಿಂದಲೂ ನಡೆದು ಬರುತ್ತಿದ್ದರೂ ಈಗ ಇದಕ್ಕೆಲ್ಲಾ ಕಟ್ಟುಪಾಡುಗಳು ಅಡ್ಡಬಂದಿವೆ. ಸಂಪ್ರದಾಯವೆಂಬಂತೆ ನಡೆದಿವೆ ಅಷ್ಟೆ.

ಪಡೆದ ಸಾಲವನ್ನು ವರ್ಷಾಂತ್ಯಕ್ಕೆ ತೀರಿಸಿಬಿಡುವ ನಂತರವಷ್ಟೇ ಹೊಸ ವರ್ಷಕ್ಕೆ ಕಾಲಿಡುವ ಸಂಪ್ರದಾಯವೊಂದು ಚೀನಿಯರಲ್ಲಿದೆ. ಇದು ಹೊಸ ವರ್ಷದ ಆಚರಣೆಗೆ ಥಳಕು ಹಾಕಿಕೊಂಡಿವುದು ಅಚ್ಚರಿಯ ವಿಷಯ ಕೂಡ. ಸಾಲದ ಗಡವು ಡಿಸೆಂಬರ್ ಕೊನೆವರೆಗೆ ಮಾತ್ರ. ಸಾಲ ಮುಗಿದ ಮೇಲಷ್ಟೇ ಸಿಹಿ ವಿನಿಮಯ. ಬಣ್ಣ ಬಣ್ಣದ ಲಕೋಟೆಗಳಲ್ಲಿ ಟೀ ಸೊಪ್ಪನ್ನು ಕಾಣಿಕೆಯಾಗಿ ಕೊಡುವುದೂ ಚೀನಿಯರ ಹೊಸ ವರ್ಷದ ಆಚರಣೆಗಳ ಭಾಗ. ಡ್ರ್ಯಾಗನ್‌ಗಳ ಮಾದರಿಗಳನ್ನು ಚಿತ್ರವಿಚಿತ್ರವಾಗಿ ಮಾಡಿ ಮನೆ ಮುಂದೆ, ಹಾದಿಬೀದಿಗಳಲ್ಲಿ ಪ್ರದರ್ಶಿಸುವುದು ಚೀನಿಯರ ಹೊಸ ವರ್ಷದ ಆಚರಣೆಗಳಲ್ಲಿ ಸಾಮಾನ್ಯವಾಗಿ ಕಾಣಬಹುದಾದ ಸಂಗತಿ.

ರೋಮ್‌ನಲ್ಲಿ ರಾಜರ ಆಡಳಿತವಿದ್ದ ಸಂದರ್ಭದಲ್ಲಿ ಸೈನಿಕರು ತಮ್ಮಲ್ಲಿಯೇ ಒಬ್ಬನನ್ನು ಮೂರ್ಖ ರಾಜರೊಬ್ಬರನ್ನಾಗಿ ಆಯ್ಕೆ ಮಾಡಿ ಅವರಿಗೆ ರಾಜರ ಪೋಷಾಕು ಹಾಕಿ ಹೊಸ ವರ್ಷದ ಮೊದಲ ದಿನ ಅವರನ್ನು ಅವಹೇಳನ ಮಾಡುವ ಪರಿಪಾಠವಿದ್ದು ಈಗ ಅವೆಲ್ಲಾ ಬಂದ್ ಆಗಿವೆ.

ಹೊಸ ವರ್ಷವನ್ನು ಸ್ವಾಗತಿಸಲು ಪೆನ್ಸಿಲ್ವೆನಿಯಾದಲ್ಲಿ ಇನ್ನೊಂದು ವಿಚಿತ್ರ ಆಚರಣೆ ಬಹುಕಾಲದಿಂದ ಆಚರಣೆಯಲ್ಲಿದೆ. ಈ ದೇಶದ ಬೀದಿಗಳಲ್ಲಿ ವಿವಿಧ ವೇಷಧಾರಿಗಳು ಹೊಸ ವರ್ಷದ ರಾತ್ರಿ ಕಾಣಸಿಗುತ್ತಾರೆ. ಬಗೆಬಗೆಯ ಧಿರುಸು ಹಾಕಿಕೊಂಡ ನಾಗರೀಕರು ಮೆರವಣಿಗೆಯಲ್ಲಿ ಸಾಗುವರು. ಅವರಲ್ಲಿ ರಾಜ, ಮಂತ್ರಿ, ಸಾಹುಕಾರ, ವಿದೂಷಕ, ಮೂಲ ನಿವಾಸಿ, ಬೇಟೆಗಾರ, ಮಾಂತ್ರಿಕ, ಗಗನಯಾತ್ರಿ, ಹೆಣ್ಣು–ಗಂಡು ಬೇಧವಿಲ್ಲದೆ ವಿಲಕ್ಷಣ ವಾದ್ಯಗಳೊಂದಿಗೆ ಸದ್ದುಗದ್ದಲ ಮಾಡುತ್ತ ಹಾದಿಬೀದಿಯಲ್ಲಿ ಕುಣಿಯುತ್ತ ಗಮನ ಸೆಳೆಯುತ್ತಾರೆ.

ವರ್ಷದಿಂದ ವರ್ಷಕ್ಕೆ ಇಂತಹ ಮೆರವಣಿಗೆಗಳಲ್ಲಿ ಭಾಗವಹಿಸುವ ವಿಚಿತ್ರ ವೇಷಭೂಷಣ ಧರಿಸುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಇವರಲ್ಲಿ ಕೆಲವರಿಗೆ ಅತ್ಯುತ್ತಮವೆಂದು ಬಹುಮಾನ ಕೊಡುವ ಪದ್ಧತಿ ಕೂಡ ಬಂದಿರುವುದರಿಂದ ಹೊಸ ವರ್ಷವನ್ನು ಬರಮಾಡಿಕೊಳ್ಳುವ ಇಂತಹ ಸಂಪ್ರದಾಯ ಹೆಚ್ಚುತ್ತಿದೆ.

**ಜನವರಿ ವರ್ಷದ ಮೊದಲ ತಿಂಗಳೆಂದು ಜೂಲಿಯಸ್ ಸೀಸರ್ ರೋಮ್‌ನಲ್ಲಿ ಸೂಚಿಸಿದರೂ ಹೊಸ ವರ್ಷ ಕ್ರಿಸ್‌ಮಸ್‌ನಲ್ಲೋ ಅಥವಾ ಮಾರ್ಚ್ ಮಾಸದಲ್ಲಿಯೋ ಜರುಗುತ್ತಿತ್ತು.**

ನರ್ತನ, ನೃತ್ಯಗೋಷ್ಠಿಗಳು ಹೊಸ ವರ್ಷಾಚರಣೆ ಸಮಯದಲ್ಲಿ ಎಲ್ಲೆಡೆ ನೋಡಸಿಗುವ ಸಾಮಾನ್ಯ ದೃಶ್ಯ. ಪಾಶ್ಚಿಮಾತ್ಯರಲ್ಲಂತೂ ಸಾಮೂಹಿಕ ನೃತ್ಯಗಳು ಹೆಚ್ಚು. ಗ್ರಾಮೀಣ ಭಾಗಗಳಲ್ಲಿ ಕೊಂಬುಕಹಳೆಗಳೂ ನೃತ್ಯಗಳಲ್ಲಿ ಸೇರುತ್ತವೆ. ಜೊತೆಗೆ ಗಂಟೆಗಳ ಸದ್ದೂ ಇರುವುದು. ನೃತ್ಯದ ನಡುವೆ ಸಿಹಿ ತಿಂಡಿಗಳನ್ನೂ ಪರಸ್ಪರ ಎರಚಾಡುವುದೂ ಇದೆ. ಪಾನಮತ್ತರಾಗಿ ಕುಣಿದು ಕುಪ್ಪಳಿಸುವುದು ಎಲ್ಲಿಲ್ಲ ಹೇಳಿ.

ಇಂಗ್ಲೆಂಡಿನ ಹಳ್ಳಿಯೊಂದರಲ್ಲಿ ಬ್ಯಾರಲ್ ಟಾರು ಸುರಿದು ಅದಕ್ಕೆ ಬೆಂಕಿ ಹಚ್ಚಿ ಅದರ ಸುತ್ತಲೂ ಕುಣಿಯುವ ವಿಚಿತ್ರ ರೂಢಿ ಇದೆ. ಬೆಂಕಿ ನಂದುವವರೆಗೂ ಕುಣಿತ ಇಲ್ಲಿ ನಿಲ್ಲಿಸುವುದಿಲ್ಲ. ಇದು ಹೊಸ ವರ್ಷಕ್ಕೆ ಸ್ವಾಗತ ಕೋರುವ ಒಂದು ಸಂಪ್ರದಾಯ. ನಮ್ಮಲ್ಲಿ ಡಿಸೆಂಬರ್ 31ರ ರಾತ್ರಿ ಯಾರು ಸಿಕ್ಕರೂ ಶುಭಾಶಯ ಹೇಳುವ ಪರಿಪಾಠವಿರುವಂತೆ ಜಪಾನ್‌ನಲ್ಲೂ ರಸ್ತೆಗಳಲ್ಲಿ ಹಾದು ಹೋಗುವ ಅಪರಿಚಿತರಂತೂ ಮಂಡಿಯೂರಿ ವಂದಿಸಿ ಹೊಸ ವರ್ಷದ ಹಾರೈಕೆಗಳನ್ನು ಪಡೆಯುವುದಿದೆ. ಜೊತೆಗೆ ಹೊಸ ಬಟ್ಟೆಗಳನ್ನು ಧರಿಸಿ ಸ್ನೇಹಿತರ ಬಂಧುಗಳ ಮನೆಗೆ ಹೋಗಿ ಕಾಣಿಕೆಗಳನ್ನು ಕೊಟ್ಟು ಬರುವ ಸಂಪ್ರದಾಯ ಈಗಲೂ ಇದೆ.

ಹೊಸ ವರ್ಷಕ್ಕೆ ಶ್ರೀಲಂಕಾದ ವೆಡ್ಡಾ ಜನಾಂಗಕ್ಕೆ ಸೇರಿದವರು ಅಕ್ಕಿ ದೋಸೆಗಳನ್ನು ಸಮುದ್ರಕ್ಕೆ ಅರ್ಪಿಸುವುದಿದ್ದರೆ ರಷ್ಯಾದ ಅನೇಕ ಪಟ್ಟಣಗಳಲ್ಲಿ ಫಿರಂಗಿಗಳನ್ನು ಹಾರಿಸುವ ಪರಿಪಾಠವಿದೆ.

ಸುಗ್ಗಿ ಮುಗಿದ ನಂತರ ಬರುವ ಹೊಸ ವರ್ಷದ ಹರುಷಕ್ಕೆ ಹೊಸ ಧಾನ್ಯಗಳಿಂದ ಅಡುಗೆ ಮಾಡಿ ತಿನ್ನುವುದು ನಮ್ಮಲ್ಲಿದೆ. ಅದು ಪೊಂಗಲ್, ಹೋಳಿಗೆ ಆಗಿರಬಹುದು. ಜಪಾನ್‌ನಲ್ಲಿ ಮನೆ ಮುಂದೆ ಪೈನ್ – ಬಿದಿರು ಸಸಿ ನೆಟ್ಟು ಹೊಸ ವರ್ಷ ಆಚರಿಸುವುದು ಮಾತ್ರವಲ್ಲ, ನಮ್ಮಲ್ಲಿ ಮಾವು–ಬೇವು ತೋರಣ ಕಟ್ಟುವಂತೆ ಸಮುದ್ರದ ಏಡಿ–ನಳಿಗಳನ್ನು ಮನೆ ಬಾಗಿಲಿಗೆ ಕಟ್ಟುವುದು ಜಪಾನ್‌ನಲ್ಲಿದೆ. ಕೆಲವು ಕಡೆ ಶುದ್ಧ ಸಸ್ಯಾಹಾರವನ್ನು ಹೊಸವರ್ಷದಲ್ಲಿ ತಯಾರಿಸಿದರೆ ಜಪಾನ್, ಚೀನಾಗಳಲ್ಲಿ ಮೀನು, ಕೋಳಿ, ಕುರಿ, ಹಂದಿಗಳ ಊಟವಿರುವುದು.

ನೋವು ಬವಣೆಗಳನ್ನು ಮರೆಯಲು ಸಂತಸ ಸಂಭ್ರಮ ಆಚರಣೆಗಳಿಗಾಗಿ ಮನುಷ್ಯರು ಕಾತರಿಸುತ್ತಾರೆ. ಅಂತಹ ಕ್ಷಣಗಳಲ್ಲಿ ಹೊಸ ವರ್ಷ ಸ್ವಾಗತವೂ ಒಂದು.




# 2017

**ಜನವರಿ JANUARY**

| | | | | | |
|---|---|---|---|---|---|
| ಭಾ | 1 | 8 | 15 | 22 | 29 |
| ಸೋ | 2 | 9 | 16 | 23 | 30 |
| ಮಂ | 3 | 10 | 17 | 24 | 31 |
| ಬು | 4 | 11 | 18 | 25 | |
| ಗು | 5 | 12 | 19 | 26 | |
| ಶು | 6 | 13 | 20 | 27 | |
| ಶ | 7 | 14 | 21 | 28 | |

**ಫೆಬ್ರವರಿ February**

| | | | | | |
|---|---|---|---|---|---|
| ಭಾ | | 5 | 12 | 19 | 26 |
| ಸೋ | | 6 | 13 | 20 | 27 |
| ಮಂ | | 7 | 14 | 21 | 28 |
| ಬು | 1 | 8 | 15 | 22 | |
| ಗು | 2 | 9 | 16 | 23 | |
| ಶು | 3 | 10 | 17 | 24 | |
| ಶ | 4 | 11 | 18 | 25 | |

**ಮಾರ್ಚ್ March**

| | | | | | |
|---|---|---|---|---|---|
| ಭಾ | | 5 | 12 | 19 | 26 |
| ಸೋ | | 6 | 13 | 20 | 27 |
| ಮಂ | | 7 | 14 | 21 | 28 |
| ಬು | 1 | 8 | 15 | 22 | 29 |
| ಗು | 2 | 9 | 16 | 23 | 30 |
| ಶು | 3 | 10 | 17 | 24 | 31 |
| ಶ | 4 | 11 | 18 | 25 | |

**ಏಪ್ರಿಲ್ April**

| | | | | | |
|---|---|---|---|---|---|
| ಭಾ | 30 | 2 | 9 | 16 | 23 |
| ಸೋ | | 3 | 10 | 17 | 24 |
| ಮಂ | | 4 | 11 | 18 | 25 |
| ಬು | | 5 | 12 | 19 | 26 |
| ಗು | | 6 | 13 | 20 | 27 |
| ಶು | | 7 | 14 | 21 | 28 |
| ಶ | 1 | 8 | 15 | 22 | 29 |

**ಮೇ May**

| | | | | | |
|---|---|---|---|---|---|
| ಭಾ | | 7 | 14 | 21 | 28 |
| ಸೋ | 1 | 8 | 15 | 22 | 29 |
| ಮಂ | 2 | 9 | 16 | 23 | 30 |
| ಬು | 3 | 10 | 17 | 24 | 31 |
| ಗು | 4 | 11 | 18 | 25 | |
| ಶು | 5 | 12 | 19 | 26 | |
| ಶ | 6 | 13 | 20 | 27 | |

**ಜೂನ್ June**

| | | | | | |
|---|---|---|---|---|---|
| ಭಾ | | 4 | 11 | 18 | 25 |
| ಸೋ | | 5 | 12 | 19 | 26 |
| ಮಂ | | 6 | 13 | 20 | 27 |
| ಬು | | 7 | 14 | 21 | 28 |
| ಗು | 1 | 8 | 15 | 22 | 29 |
| ಶು | 2 | 9 | 16 | 23 | 30 |
| ಶ | 3 | 10 | 17 | 24 | |

**ಜುಲೈ July**

| | | | | | |
|---|---|---|---|---|---|
| ಭಾ | 30 | 2 | 9 | 16 | 23 |
| ಸೋ | 31 | 3 | 10 | 17 | 24 |
| ಮಂ | | 4 | 11 | 18 | 25 |
| ಬು | | 5 | 12 | 19 | 26 |
| ಗು | | 6 | 13 | 20 | 27 |
| ಶು | | 7 | 14 | 21 | 28 |
| ಶ | 1 | 8 | 15 | 22 | 29 |

**ಆಗಸ್ಟ್ August**

| | | | | | |
|---|---|---|---|---|---|
| ಭಾ | | 6 | 13 | 20 | 27 |
| ಸೋ | | 7 | 14 | 21 | 28 |
| ಮಂ | 1 | 8 | 15 | 22 | 29 |
| ಬು | 2 | 9 | 16 | 23 | 30 |
| ಗು | 3 | 10 | 17 | 24 | 31 |
| ಶು | 4 | 11 | 18 | 25 | |
| ಶ | 5 | 12 | 19 | 26 | |

**ಸೆಪ್ಟೆಂಬರ್ September**

| | | | | | |
|---|---|---|---|---|---|
| ಭಾ | | 3 | 10 | 17 | 24 |
| ಸೋ | | 4 | 11 | 18 | 25 |
| ಮಂ | | 5 | 12 | 19 | 26 |
| ಬು | | 6 | 13 | 20 | 27 |
| ಗು | | 7 | 14 | 21 | 28 |
| ಶು | 1 | 8 | 15 | 22 | 29 |
| ಶ | 2 | 9 | 16 | 23 | 30 |

**ಅಕ್ಟೋಬರ್ October**

| | | | | | |
|---|---|---|---|---|---|
| ಭಾ | 1 | 8 | 15 | 22 | 29 |
| ಸೋ | 2 | 9 | 16 | 23 | 30 |
| ಮಂ | 3 | 10 | 17 | 24 | 31 |
| ಬು | 4 | 11 | 18 | 25 | |
| ಗು | 5 | 12 | 19 | 26 | |
| ಶು | 6 | 13 | 20 | 27 | |
| ಶ | 7 | 14 | 21 | 28 | |

**ನವೆಂಬರ್ November**

| | | | | | |
|---|---|---|---|---|---|
| ಭಾ | | 5 | 12 | 19 | 26 |
| ಸೋ | | 6 | 13 | 20 | 27 |
| ಮಂ | | 7 | 14 | 21 | 28 |
| ಬು | 1 | 8 | 15 | 22 | 29 |
| ಗು | 2 | 9 | 16 | 23 | 30 |
| ಶು | 3 | 10 | 17 | 24 | |
| ಶ | 4 | 11 | 18 | 25 | |

**ಡಿಸೆಂಬರ್ December**

| | | | | | |
|---|---|---|---|---|---|
| ಭಾ | 31 | 3 | 10 | 17 | 24 |
| ಸೋ | | 4 | 11 | 18 | 25 |
| ಮಂ | | 5 | 12 | 19 | 26 |
| ಬು | | 6 | 13 | 20 | 27 |
| ಗು | | 7 | 14 | 21 | 28 |
| ಶು | 1 | 8 | 15 | 22 | 29 |
| ಶ | 2 | 9 | 16 | 23 | 30 |

facebook.com/KarnatakaVartheOfficial
youtube.com/user/KarnatakaVarthe
twitter.com/KarnatakaVarthe
wordpress/KarnatakaVarthe

ಪ್ರಕಟಣೆ : ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಕರ್ನಾಟಕ ವಾರ್ತೆ
karnatakavarthe.org

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ಬೆಂಗಳೂರು – 560 001 ದೂ : 080 2202 8001/02



ವಿಶ್ವಮಾನವ

# ಸ್ವಾಮಿ ವಿವೇಕಾನಂದ

ಹೆಚ್.ಗಾಯಿತ್ರಿ

**ವಿವೇಕಾನಂದರು ತಮ್ಮ ಅಮೂಲ್ಯ ಸಂದೇಶಗಳ ಮೂಲಕ ವಿಶ್ವಕ್ಕೆ ಮಾರ್ಗದರ್ಶಕರಾಗಿದ್ದಾರೆ. ಅವರ ಸಂದೇಶಗಳನ್ನು ಗಮನಿಸಿದರೆ ಅವರ ಮೇರು ವ್ಯಕ್ತಿತ್ವ ಅರ್ಥವಾಗುತ್ತದೆ. "ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ" "ಉತ್ತಮನಾಗು ಉಪಕಾರಿಯಾಗು" "ದೀನ ದಲಿತರ ಬಗ್ಗೆ ಯಾರ ಹೃದಯವೂ ಮಿಡಿಯುತ್ತದೋ ಅವರೇ ಮಹಾತ್ಮರು" "ಮೂರ್ಖನಾಗುವುದಕ್ಕಿಂಥ ಶುದ್ಧ ನಾಸ್ತಿಕರಾಗುವುದು ಮೇಲು" 'ಮೂಢ ನಂಬಿಕೆ ಮನುಷ್ಯನನ್ನು ಪ್ರವೇಶಿಸಬಾರದು' 'ಧೀರರಾಗಿ, ಸ್ವಾವಲಂಬಿಗಳಾಗಿ' ಹೀಗೆ ಅವರ ಉಪದೇಶಗಳನ್ನು ಬರೆಯುತ್ತಾ ಹೋದರೆ ಅದಕ್ಕೆ ಕೊನೆಯೇ ಇಲ್ಲ.**


ವಿಶ್ವ ಕಂಡ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಜನವರಿ 12, 1863ರಲ್ಲಿ ಕೊಲ್ಕತ್ತಾದಲ್ಲಿ ಜನಿಸಿದರು. ಅವರ ಮೂಲ ಹೆಸರು ನರೇಂದ್ರನಾಥ. ಅವರ ಜೀವಿತಾವಧಿ ಕೇವಲ 39 ವರ್ಷಗಳು ಮಾತ್ರ. ತಮ್ಮ ತತ್ವಗಳು ಆದರ್ಶಗಳು, ಏಕಾಗ್ರತೆ ವಿವೇಕ, ದೂರದೃಷ್ಟಿ ಆದರ್ಶಪ್ರಾಯ ಜೀವನ, ಇತ್ಯಾದಿಗಳಿಂದ ವಿಶ್ವಮಾನವರಾದರು. "ಉತ್ತಮನಾಗು, ಉಪಕಾರಿಯಾಗು" ಎಂಬ ಸಂದೇಶವನ್ನು ಮಾನವ ಕುಲಕ್ಕೆ ನೀಡುವ ಮೂಲಕ ಮರಣ ಹೊಂದಿದ 115 ವರ್ಷಗಳ ನಂತರವೂ ನಮ್ಮ ನಡುವೆ ಜೀವಂತವಾಗಿದ್ದಾರೆ. ಅವರ ಸಂದೇಶಗಳು ಮನುಕುಲಕ್ಕೆ ಅದರಲ್ಲೂ ಯುವಜನತೆಯನ್ನು ಬಡಿದೆಬ್ಬಿಸುವಂತಿದೆ.

1879ರಿಂದ 1881ರ ಅವಧಿಯಲ್ಲಿ ಅವರಲ್ಲಿ ಆಧ್ಯಾತ್ಮ ಹಾಗೂ ದೇವರ ಬಗ್ಗೆ ಹುಟ್ಟಿಕೊಂಡ ಪ್ರಶ್ನೆ ವಿವೇಕಾನಂದರ ಬದುಕಿನ ದಿಕ್ಕನ್ನೇ ಬದಲಿಸಿತು. 1881 ರಲ್ಲಿ ದೇವರ ಅಸ್ತಿತ್ವದ ಬಗ್ಗೆ ಉತ್ತರ ಕಂಡುಕೊಳ್ಳಬೇಕು ಎಂದು ಹಠ ಹಿಡಿದು ತಲುಪಿದ್ದು ಶ್ರೀರಾಮಕೃಷ್ಣ ಪರಮಹಂಸರ ಬಳಿ. ದಕ್ಷಿಣೇಶ್ವರದಲ್ಲಿರುವ ರಾಮಕೃಷ್ಣರ ಹತ್ತಿರ ತೆರಳಿ ತಮ್ಮಲ್ಲಿದ್ದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದರು. ಆರಂಭದಲ್ಲಿ ಪರಮಹಂಸರು ಸಾಮಾನ್ಯ ವ್ಯಕ್ತಿಯಂತೆ ಕಂಡಿದ್ದರಿಂದ ವಿವೇಕಾನಂದರು ಅನುಮಾನಿಸಿದರು ಇವರಿಂದ ನನ್ನ ಪ್ರಶ್ನೆಗಳಿಗೆ ಉತ್ತರ ಸಿಗದು ಎಂದು ಭಾವಿಸಿದರು. ಕಾಲಕ್ರಮೇಣ ಪರಮಹಂಸರ ಅಪಾರ ಜ್ಞಾನಕ್ಕೆ ಮಾರುಹೋದರು. ಅವರನ್ನು ಗುರುಗಳನ್ನಾಗಿ ಸ್ವೀಕರಿಸಿದರು.

ಯಾರು ರಾಮ? ಯಾರು ಕೃಷ್ಣ? ಎಂದು ಪ್ರಶ್ನಿಸುತ್ತಿದ್ದ ವಿವೇಕಾನಂದರು ತಮ್ಮ ಗುರುಗಳಲ್ಲಿ ರಾಮಕೃಷ್ಣರನ್ನು ಕಂಡರು. ಕೆಲ ದಿನಗಳ ಬಳಿಕ ಗಂಗಾನದಿ ತಟದಲ್ಲಿದ್ದ ಬಾರಾವಗರದಲ್ಲಿ ರಾಮಕೃಷ್ಣ ಮಠ ಸ್ಥಾಪಿಸಿದರು. ಅಲ್ಲಿ ಪ್ರತಿದಿನ ಧ್ಯಾನ, ಆಧ್ಯಾತ್ಮದ ಬಗ್ಗೆ ಪಾಠಪ್ರವಚನಗಳನ್ನು ಏರ್ಪಡಿಸಿದರು, ವಿವೇಕಾನಂದರಿಗೆ ಒಬ್ಬರು ಒಂದು ಪ್ರಶ್ನೆ ಕೇಳಿದರು, 'ಪ್ರಾರ್ಥನೆಯಿಂದ ಏನು ಗಳಿಸಿದಿರಿ?' ಅದಕ್ಕೆ ವಿವೇಕಾನಂದರು ನೀಡಿದ ಉತ್ತರ " ನಾನು ಗಳಿಸಿದ್ದು ಏನೂ ಇಲ್ಲ; ವಾಸ್ತವವಾಗಿ ನನ್ನ ಕೋಪ ಕಳೆದುಕೊಂಡೆ, ಖಿನ್ನತೆ , ಅಸೂಯೆ, ಸಿಟ್ಟು , ಅಭದ್ರತೆ ಕಳೆದುಕೊಂಡೆ ಎಂದು ಉತ್ತರಿಸಿದ ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದ ಮೂಲಕ ವಿಶ್ವಮಾನವರಾದರು.

ಒಂದು ಸಂದರ್ಭದಲ್ಲಿ ಅವರು ನೀಡಿದ ಈ ಸಂದೇಶ ನೋಡಿ, I am not Handsome ನಾನು ಸುಂದರವಾಗಿಲ್ಲ But I can give my hands to some one who need help. ಪರೋಪಕಾರವೇ ಶ್ರೇಷ್ಠ ಎನ್ನುವುದೂ ಅವರ ಸಂದೇಶಗಳಲ್ಲಿ ಒಂದು ಎಂಬುದನ್ನು ಇಂದಿನ ಯುವಜನತೆ ಅರ್ಥ ಮಾಡಿಕೊಳ್ಳಬೇಕಿದೆ.

ಶುದ್ಧ ಚಾರಿತ್ರ್ಯದವನಾಗು, ಧೈರ್ಯವಂತನಾಗು, ಅಂತಃಕರಣಪೂರಿತನಾಗು, ಖಂಡಿತವಾಗಿಯೂ ನೀತಿವಂತನಾಗು, ಮತತ್ವಗಳಿಂದ ನಿನ್ನ ತಲೆಯನ್ನು ಕೆಡಿಸಿಕೊಳ್ಳಬೇಡ ಹೇಡಿಗಳು ಮಾತ್ರ ಪಾಪ ಮಾಡುತ್ತಾರೆ. ಧೀರರು ತಮ್ಮ ಮನಸ್ಸಿನಲ್ಲಿ ಕೂಡ ಎಂದಿಗೂ ಪಾಪ ಮಾಡುವುದಿಲ್ಲ. " ಯಾವ ಬೇಧವೂ ಇಲ್ಲದೆ ಎಲ್ಲರನ್ನೂ ಪ್ರೀತಿಸಲು ಯತ್ನಿಸು" ಎನ್ನುವ ಸ್ವಾಮಿ ವಿವೇಕಾನಂದರ ಸಂದೇಶದ ತತ್ವವನ್ನು ನಾವು ನಿತ್ಯ ಜೀವನದಲ್ಲೀಗ ಅಳವಡಿಸಿಕೊಳ್ಳಬೇಕಿದೆ.



'ಎದ್ದು ನಿಲ್ಲಿ, ಧೀರರಾಗಿ, ಬಲಾಢ್ಯರಾಗಿ, ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ. ನಿಮ್ಮ ಭವಿಷ್ಯದ ಶಿಲ್ಪಿಗಳು ನೀವೆ. ಸತ್ಯ ಎಂದಿಗೂ ಶಕ್ತಿವರ್ಧಕ. ಪರಿಶುದ್ಧ ಸತ್ಯವೇ ಅನಂತ ಜ್ಞಾನ. ಗಿಳಿಯಂತೆ ಮಾತನಾಡುವುದೊಂದು ನಮ್ಮ ಬಾಳಿನ ಚಾಳಿಯಾಗಿದೆ. ಏನನ್ನು ಅನುಷ್ಠಾನಕ್ಕೆ ತರುವುದಿಲ್ಲ. ಇದಕ್ಕೆ ಕಾರಣವೇ ಶಾರೀರಿಕ ದೌರ್ಬಲ್ಯತೆ. ಇಂತಹ ದುರ್ಬಲ ಮಿದುಳು ಏನನ್ನೂ ಸಾಧಿಸಲಾರದು ನಾವು ಅದನ್ನು ಪುಷ್ಠಿ ಗೊಳಿಸಬೇಕು ಮೊದಲು 'ನಮ್ಮ ಯುವಜನತೆ ಬಲಿಷ್ಠರಾಗಬೇಕು, ಮೊದಲು ಬಲಿಷ್ಠರಾಗಿ ಇದು ನನ್ನ ಬುದ್ದಿವಾದ' ಗೀತಾಧ್ಯಯನಕ್ಕಿಂತ ಫುಟ್‌ಬಾಲ್ ಆಟದಿಂದ ಮುಕ್ತಿಗೆ ಹತ್ತಿರ ಹೋಗುವಿರಿ ಇವು ಕೆಚ್ಚಿನ ಮಾತುಗಳು. ಆದರೂ ನಾನು ಇದನ್ನು ನಿಮಗೆ ಹೇಳಬೇಕಾಗಿದೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಿಮ್ಮ ನ್ಯೂನತೆ ನನಗೆ ಗೊತ್ತಿದೆ ನಿಮ್ಮ ಬಾಹುಗಳ ಮಾಂಸ ಖಂಡದಲ್ಲಿ ಸ್ವಲ್ಪ ಶಕ್ತಿ ಇದ್ದರೆ ನೀವು ಗೀತೆಯನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ. ನಮ್ಮ ಸಂಸ್ಕೃತಿಯೇ ನಮ್ಮ ಸಂಪತ್ತು'

**ಸರ್ವಧರ್ಮ ಸಮಭಾವ** : ಸೆಪ್ಟೆಂಬರ್ 11, 1893ರಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮದ ಸಿದ್ಧಾಂತಗಳ ಬಗ್ಗೆ ಮಾಡಿದ ಭಾಷಣ ಜಗತ್ತಿನ ಗಮನ ಸೆಳೆಯಿತು. 'ಅಮೇರಿಕಾದ ಸಹೋದರ, ಸಹೋದರಿಯರೇ ಎಂಬ ಮಾತಿನಿಂದಲೇ ಅಮೇರಿಕನ್ನರು ಬೆರಗಾದರು. ಸುಮಾರು ಐದು ವರ್ಷಗಳ ಕಾಲ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಚರಿಸಿ ಹಿಂದೂ ಧರ್ಮದ ಹಿರಿಮೆಯನ್ನು ಸಾರಿದರು. ನ್ಯೂಯಾರ್ಕ್, ಲಂಡನ್ ನಗರಗಳಲ್ಲಿ ವೇದಾಂತ ಕೇಂದ್ರಗಳನ್ನು ಸ್ಥಾಪಿಸಿ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಹಿಂದೂ ಧರ್ಮದ ಕುರಿತು ಭಾಷಣ ಮಾಡಿದರು.

**ಮೈಸೂರಿನಲ್ಲಿದ್ದ ದಿನಗಳು** : ಮೈಸೂರಿನ ಶೇಷಾದ್ರಿ ಅಯ್ಯರ್ ಅವರ ಒತ್ತಾಯದ ಮೇರೆಗೆ ಮೈಸೂರಿಗೆ ಆಗಮಿಸಿದ ಸ್ವಾಮಿ ವಿವೇಕಾನಂದರು ಅರಮನೆಯಲ್ಲಿ ತಂಗದೆ ನಿರಂಜನ ಮಠದಲ್ಲಿ ಉಳಿದುಕೊಂಡಿದ್ದರು. ಯುವಕರೂ ಉತ್ಸಾಹಿಗಳೂ ಆಗಿದ್ದ ಚಾಮರಾಜ ಒಡೆಯರು ಸ್ವಾಮೀಜಿ ಅವರ ವ್ಯಕ್ತಿತ್ವಕ್ಕೆ ಮಾರುಹೋದರು. ಮೈಸೂರಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದನ್ನು ಗಮನಿಸಿದ ಸ್ವಾಮೀಜಿ ಈ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ವಿವೇಕಾನಂದರು ಮೈಸೂರಿನಲ್ಲಿದಷ್ಟೂ ಕಾಲ ಅರಮನೆಯಲ್ಲಿ ಗೋಷ್ಠಿ, ಮಹಾರಾಜರೊಂದಿಗೆ ಮಾತುಕತೆಗಳು ನಿರಂತರವಾಗಿದ್ದವು.

ಇದೇ ವೇಳೆ ಮೈಸೂರಿನಲ್ಲಿ ಸ್ವಾಮೀಜಿ ಅವರ ಕುರಿತು ಹರಡಿದ ಸುದ್ದಿಗಳನ್ನು ಕೇಳಿ ಅನೇಕರು ಅವರನ್ನು ಭೇಟಿಯಾದರು. ಆಗ ಪ್ರಜಾಪ್ರತಿನಿಧಿ ಸಭಾದ ಸದಸ್ಯರಾಗಿದ್ದ ಅಬ್ದುಲ್ ರೆಹಮಾನ್ ಸಾಹೇಬ್ ಎಂಬುವವರು ಸ್ವಾಮೀಜಿಯವರಿಗೆ ಕುರಾನಿನಲ್ಲಿರುವ ಆಳಜ್ಞಾನದ ಬಗ್ಗೆ ತಿಳಿದು ಅವರೊಂದಿಗೆ ಸಂಭಾಷಣೆ ನಡೆಸಿದರು. ಅರಮನೆಯಲ್ಲಿದ್ದ ಆಸ್ಟ್ರಿಯಾದ ಸಂಗೀತಗಾರನೊಂದಿಗೆ ಪಾಶ್ಚಾತ್ಯ ಸಂಗೀತ ಕುರಿತು ಬಹಳ ಆಸಕ್ತಿಯಿಂದ ವಿವೇಕಾನಂದರು ಚರ್ಚಿಸಿದರು. ಕೆಲ ದಿನಗಳ ಬಳಿಕ ಸ್ವಾಮೀಜಿ ಶಿಕಾಗೋ ಸಮ್ಮೇಳನಕ್ಕೆ ಹೋಗುತ್ತಿರುವ ವಿಷಯವನ್ನು ಮಹಾರಾಜರ ಬಳಿ ಪ್ರಸ್ತಾಪಿಸಿದಾಗ ಮಹಾರಾಜರು ಹಣಕಾಸಿನ ನೆರವು ನೀಡಲು ಮುಂದಾದರು. ಆಗ ಸ್ವಾಮೀಜಿ ರೈಲು ಟಿಕೆಟ್‌ಗೆ ಮಾತ್ರ ಬೇಡಿಕೆ ಇಟ್ಟರು. ನೆನಪಿಗಾಗಿ ಉಡುಗೊರೆಯನ್ನು ನೀಡಲು ಮುಂದಾದಾಗ, ಸ್ವಾಮೀಜಿ ಬೀಟೆ ಮರದಿಂದ ಮಾಡಿದ ಪೈಪ್‌ವೊಂದನ್ನು ಮಾತ್ರ ತೆಗೆದುಕೊಂಡರು. ನಂತರ ರೈಲಿನಲ್ಲಿ ರಾಮೇಶ್ವರಂನತ್ತ ಪ್ರಯಾಣ ಬೆಳೆಸಿದರು. ವಿವೇಕಾನಂದರು ಶಿಕಾಗೋ ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ಮಹಾರಾಜರಿಗೆ ಅಲ್ಲಿನ ಅನುಭವಗಳನ್ನು ಕುರಿತು ಪತ್ರ ಬರೆಯುತ್ತಾರೆ.

ಸ್ವಾಮೀಜಿಯವರ ಪಾಂಡಿತ್ಯ, ಪ್ರೌಢಿಮೆ ಮತ್ತು ವಿಚಾರಗಳಿಗೆ ಮನಸೋತಿದ್ದ ಮಹಾರಾಜರು ತಮ್ಮಲ್ಲಿದ್ದ ಫೋನೋಗ್ರಾಫ್‌ನಲ್ಲಿ ಅವರ ಧ್ವನಿಯನ್ನು ಮುದ್ರಿಸಿಕೊಂಡರಂತೆ.

**ಪ್ರಭಾವಿತರು** : ಸ್ವಾಮಿ ವಿವೇಕಾನಂದರು ಕನ್ನಡದ ಪ್ರಜ್ಞೆಯನ್ನು ಪ್ರಭಾವಿಸಿದವರು. ಕನ್ನಡದ ಸಾಹಿತ್ಯ ವಲಯದಲ್ಲಿ ಅವರಿಂದ ಪ್ರಭಾವಿತರಾಗಿ ತಮ್ಮ ಬರವಣಿಗೆ ಮತ್ತು ಚಿಂತನೆಗಳಲ್ಲಿ ವಿವೇಕರನ್ನು ಒಳಗೊಂಡವರು ಅನೇಕರು. ಅವರಲ್ಲಿ ಮೊದಲಿಗೆ ನೆನಪಾಗುವುದು ಕುವೆಂಪು. ಮೈಸೂರು ರಾಮಕೃಷ್ಣ ಮಿಷನ್‌ನ ಸಿದ್ದೇಶ್ವರಾನಂದರ ಮೂಲಕ ಸ್ವಾಮಿ ವಿವೇಕಾನಂದರ ವಿಚಾರಗಳತ್ತ ಆಸಕ್ತಿ ತಳೆದ ಕುವೆಂಪು ವಿವೇಕಾನಂದರ ವೈಚಾರಿಕತೆಗೆ ಮನಸೋತರು. ಸ್ವಾಮಿ ವಿವೇಕಾನಂದರ ಜೀವನಚರಿತ್ರೆ ಕೃತಿಯನ್ನು ಕನ್ನಡದ ಓದುಗರಿಗೆ ನೀಡಿದರು. ಇವರ ಶಿಷ್ಯರೂ ಆಪ್ತರೂ ಆಗಿದ್ದ ಜಿ.ಎಸ್.ಶಿವರುದ್ರಪ್ಪನವರೂ ವಿವೇಕಾನಂದ ಎಂಬ ಸನ್ಯಾಸಿಯೊಳಗಿದ್ದ ಕ್ರಾಂತಿಕಾರಿ ವ್ಯಕ್ತಿತ್ವವನ್ನು ಮೆಚ್ಚಿದರು. ತಮ್ಮ ಕವಿತೆ ಮತ್ತು ಬರಹಗಳಲ್ಲಿ ವಿವೇಕಾನಂದರ ಅಪೂರ್ವ ವ್ಯಕ್ತಿತ್ವವನ್ನು ದಾಖಲಿಸಿದರು. ಬೇಂದ್ರೆ, ಮಧುರ, ಚೆನ್ನ, ಸು ರಂ. ಎಕ್ಕುಂಡಿ, ಅನಕೃ ನಿರಂಜನ ಪ್ರಭುಶಂಕರರು ವಿವೇಕಾನಂದರ ಪ್ರಖರ ವೈಚಾರಿಕತೆಯನ್ನು ಮೆಚ್ಚಿಕೊಂಡು ಅದನ್ನು ತಮ್ಮ ಬರವಣಿಗೆ ಮತ್ತು ಆಲೋಚನಾ ಕ್ರಮದ ಭಾಗವಾಗಿ ಸ್ವೀಕರಿಸಿದರು.

**ಅದ್ಭುತ ಪ್ರತಿಭಾಸಂಪನ್ನರು** : ಡಿ.ವಿ.ಗುಂಡಪ್ಪ ವಿವೇಕಾನಂದರ ಬಗ್ಗೆ ಈ ರೀತಿ ಬರೆಯುತ್ತಾರೆ. ಸ್ವಾಮಿ ವಿವೇಕಾನಂದರು ಸ್ವಾಭಾವಿಕವಾಗಿ ಅದ್ಭುತ ಪ್ರತಿಭಾ ಸಂಪನ್ನರು. ಅವರ ಬುದ್ಧಿ ವಿದ್ಯುದ್ವೇಗದಿಂದ ಸಂಚಾರ ಮಾಡುತ್ತಿತ್ತು. ಅದು ಒಮ್ಮೆ ಲೀಲೆಯಿಂದ ಸಮುದ್ರ ತಳಕ್ಕೆ ಧುಮುಕುವುದು; ಇನ್ನೊಮ್ಮೆ ಪಕ್ಷಿಯಂತೆ ಗಿರಿಶಿಖರಕ್ಕೆ ಹಾರುವುದು. ಮತ್ತೊಮ್ಮೆ ಹುಲ್ಲುಗಾವಲಿನ ಮೇಲೆ ಮಂದಮಾರುತದಂತೆ ಸುಳಿದಾಡುವುದು. ಒಂದು ತೀಕ್ಷ್ಣತೆ, ಒಂದು ಲಘುತೆ, ಒಂದು ಆವೇಶ, ಒಂದು ವಿಲಾಸ ಇವು ಆ ಬುದ್ದಿಯ ಗುಣಗಳು, ಅವರು ಸಂಸ್ಕೃತದಲ್ಲಿ ವ್ಯಾಕರಣ ತರ್ಕಶಾಸ್ತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು. ಹಾಗೆಯೇ ಇಂಗ್ಲೀಷಿನಲ್ಲಿ ಕಾವ್ಯ ಇತಿಹಾಸಗಳನ್ನೂ ವಿಜ್ಞಾನಶಾಸ್ತ್ರ ತತ್ವಮೀಮಾಂಸೆಗಳನ್ನೂ ವಿಸ್ತಾರವಾಗಿ ಪರಾಮರ್ಶಿಸಿ ಸ್ವಾಧೀನಪಡಿಸಿಕೊಂಡಿದ್ದರು. ಈ ಉಭಯ ವಿದ್ಯಾಪ್ರಾವೀಣ್ಯಕ್ಕೆ ಅನುರೂಪವಾದ ವಾಗ್ಧೋರಣೆ, ತದನುಗುಣವಾದ ಉತ್ತಾಲಧ್ವನಿ, ಉನ್ನತವಾದ ವರ್ಚಸ್ವಿಯಾದ ಗಂಭೀರಾಕಾರ, ಸಕಲ ಜನಮನೋಗ್ರಾಹಿಯಾದ ಹಾಸ್ಯ ವಿನೋದ ರಸಿಕತೆ, ಗಾನಮಾಧುರ್ಯ ಇವೆಲ್ಲವೂ ಅವರಲ್ಲಿ ಸಮ್ಮಿಳಿತವಾಗಿದ್ದುವು.


ಈ ಎಲ್ಲಾ ಅಂಶಗಳಿಂದ ಸ್ವಾಮಿ ವಿವೇಕಾನಂದರು ವಿಶ್ವಮಾನವ ವ್ಯಕ್ತಿತ್ವವನ್ನು ಹೊಂದಿದ್ದ ಮೇರು ಶಿಖರವಾಗಿದ್ದರು. ಅವರ ಆದರ್ಶಗಳು ವಿಶ್ವಕ್ಕೆ ಸ್ಫೂರ್ತಿ.





# ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆ

**ವಿಷ್ಣು ನಾಯ್ಕ**
ರೇಖಾ ಚಿತ್ರಗಳು : ಜಿ. ಕೆ. ಶಿವಣ್ಣ



**ಭಾ**ರತದ ಸ್ವಾತಂತ್ರ್ಯ ಹೋರಾಟದಲ್ಲಿ ಬೇರೆ ಬೇರೆ ಹಂತಗಳನ್ನು ಗುರುತಿಸುತ್ತೇವೆ; ನಾನಿಂದು ನೆನಪಿಸ ಬಯಸಿದ್ದು 'ಗಾಂಧಿ ಯುಗ'ದ ಬಗ್ಗೆ. ಈ ಹಂತದ ಹೋರಾಟದಲ್ಲೂ ಹತ್ತು–ಹಲವು ಬಗೆಯ ಸ್ವರಗಳಿವೆ. ಅವೆಲ್ಲವನ್ನೂ ಒಂದು ಕೊರಳಾಗಿ–ಒಂದು ಧ್ವನಿಯಾಗಿ ತಮ್ಮೊಳಗೆ ಜೀರ್ಣಿಸಿಕೊಂಡು, 'ಗಾಂಧಿ ಮಹಾತ್ಮನ ಅಹಿಂಸಾತ್ಮಕ ಹೋರಾಟದ ಕರೆ'ಯೆಂದೇ ಪರಿಗಣಿಸಿ, ಸಣ್ಣಪುಟ್ಟ ಮತ–ಬೇಧಗಳನ್ನೆಲ್ಲ ಸುಟ್ಟುಹಾಕಿ, ಈ ಮಹಾಯಜ್ಞದಲ್ಲಿ ಪ್ರಖರವಾಗಿ ಮಿಂಚಿದ ತಾಲೂಕು,– ಅಂಕೋಲೆ ಎಂದು ಕರೆದರೆ ಅದು ಯಾವ ಕಾಲಕ್ಕೂ ಅಧ್ಯಯನದ ಮನಸುಗಳಿಗೆ ಉತ್ಪ್ರೇಕ್ಷೆಯ ಮಾತಾಗಿ ಕಾಣಿಸದು.

**ಸಣ್ಣಪುಟ್ಟ ಮತ–ಬೇಧಗಳನ್ನೆಲ್ಲ ಸುಟ್ಟುಹಾಕಿ, ಈ ಮಹಾಯಜ್ಞದಲ್ಲಿ ಪ್ರಖರವಾಗಿ ಮಿಂಚಿದ ತಾಲೂಕು,– ಅಂಕೋಲೆ ಎಂದು ಕರೆದರೆ ಅದು ಯಾವ ಕಾಲಕ್ಕೂ ಅಧ್ಯಯನದ ಮನಸುಗಳಿಗೆ ಉತ್ಪ್ರೇಕ್ಷೆಯ ಮಾತಾಗಿ ಕಾಣಿಸದು. "ಭಾರತದ ಸ್ವಾತಂತ್ರ್ಯ ಹೋರಾಟ"ವೆಂಬ ಮಹಾ ಸಂಪುಟಕ್ಕೆ ಒಂದು ಅಪ್ಪಟ ಚಿನ್ನದ ಅಧ್ಯಾಯವನ್ನೇ ಸೇರಿಸಿದ ತಾಲೂಕು ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಾಗಿದೆ.**

"ಭಾರತದ ಸ್ವಾತಂತ್ರ್ಯ ಹೋರಾಟ"ವೆಂಬ ಮಹಾ ಸಂಪುಟಕ್ಕೆ ಒಂದು ಅಪ್ಪಟ ಚಿನ್ನದ ಅಧ್ಯಾಯವನ್ನೇ ಸೇರಿಸಿದ ತಾಲೂಕು ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಾಗಿದೆ.

ಈ ತಾಲೂಕಿಗೆ ದೇಶದ "ಎರಡನೆಯ ಬಾರ್ಡೋಲಿ" ಎಂದು ಕರೆಯಲಾಗುತ್ತದೆ. 'ಕರ್ನಾಟಕದ ಬಾರ್ಡೋಲಿ' ಎಂದೂ ಕರೆಯುತ್ತಾರೆ. ಮೂಲತಃ ಈ ಬಾರ್ಡೋಲಿ ಎಂಬ ನೆಲ ಇರುವುದು ಈಗಿನ ಗುಜರಾತ್ ರಾಜ್ಯದಲ್ಲಿ. ಅಲ್ಲಿ ಸರದಾರ್ ವಲ್ಲಭಭಾಯಿ ಪಟೇಲ ಎಂಬ ಹೆಸರಿನ ಉಕ್ಕಿನ ಮನುಷ್ಯನೊಬ್ಬನಿದ್ದರು. ಅವರು ಅಪ್ರತಿಮ ದೇಶಪ್ರೇಮಿಯಾಗಿದ್ದರು. ಜವಾಹರಲಾಲ ನೆಹರೂ ಅವರ ಮೊದಲ ಸಂಪುಟದಲ್ಲಿ ಗೃಹಸಚಿವರಾಗಿದ್ದರು. ಈ ದೇಶದ ಮೊದಲ ಪಂಕ್ತಿಯ ಕೆಲವೇ ಕೆಲವು ಹಿರಿಯ ನಾಯಕರಲ್ಲಿ ಒಬ್ಬರೆನಿಸಿದ್ದರು. ಗುಜರಾತಿನ ಬಾರ್ಡೋಲಿಯಲ್ಲಿ ರೈತರು ಬೆಳೆನಾಶದಿಂದ ಕಂಗೆಟ್ಟಿದ್ದರು. ಅಂದಿನ ಬ್ರಿಟಿಷ್ ಸರಕಾರಕ್ಕೆ ತೆರಿಗೆ ನೀಡಬೇಡಿ ಎಂದು ಮೊಟ್ಟ ಮೊದಲು ಸರದಾರ್ ಪಟೇಲ್ ಕರೆಕೊಟ್ಟಿದ್ದರು. ರೈತರಾದಿಯಾಗಿ ಜನಸಾಮಾನ್ಯರು ಕಂಗೆಟ್ಟು ಹೋಗಿದ್ದ ಆ ಸಂದರ್ಭದಲ್ಲಿ ಇಡೀ ಗುಜರಾತ್ ಭಾಗದ – ವಿಶೇಷವಾಗಿ ಬಾರ್ಡೋಲಿ ಭಾಗದ ಜನತೆ ಈ ಆರ್ಥಿಕ ಸಂಕಷ್ಟದ ಕಾರಣಕ್ಕಾಗಿ ಬ್ರಿಟಿಷ್ ಕಾನೂನಿನ ವಿರುದ್ಧ ಬಂಡಾಯವೆದ್ದಿತು. ಕಂದಾಯವನ್ನು ಕೊಡದೆ ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ಆದ ಒಂದು ಹೊಸ ಅಧ್ಯಾಯವನ್ನು ಸೇರಿಸಿತ್ತು.

ಇದನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ಅಂಕೋಲೆಯ ಧೀರ ಹೋರಾಟಗಾರರು, –ಅದರಲ್ಲೂ ನಾಡವ ಸಮುದಾಯವೇ ಹೆಚ್ಚಿರುವ ಚೌಕದ ನಾಲ್ವತ್ತು ಹಳ್ಳಿಗಳ ಜನರು ತಾವೂ ಕೂಡ ಕರನಿರಾಕರಣೆಯ ಹೋರಾಟವನ್ನು ಮಾಡಿಯೇ ತೀರುತ್ತೇವೆ ಎಂದು –ಸೂರ್ವೆಯ ದೇವಸ್ಥಾನದಲ್ಲಿ ಕರೆಯಲಾಗಿದ್ದ ಸಭೆಯೊಂದರಲ್ಲಿ – ಒಬ್ಬರ ಬೆನ್ನಿಗೆ ಇನ್ನೊಬ್ಬರಂತೆ ಪ್ರತಿಜ್ಞೆ ಸ್ವೀಕರಿಸಿ, ನಾಡಿಗೇ ಮೇಲ್ಪಂಕ್ತಿಯಾದರು. ಆಗಲೇ ಹೇಳಿರುವಂತೆ ಈ ನಾಲ್ವತ್ತು ಕರಿಬಂದೀ ಹಳ್ಳಿಗಳಲ್ಲಿ ಮುಖ್ಯವಾಗಿ ನಾಡವರಿದ್ದರು. ಒಂದಷ್ಟು ಹಾಲಕ್ಕಿ ಒಕ್ಕಲು, ಕೆಲವು ಗೌಡ ಸಾರಸ್ವತ ಬ್ರಾಹ್ಮಣರು ಮತ್ತು ನಾಮಧಾರಿಗಳಿದ್ದರು.

ಗುಜರಾತಿನ ಬಾರ್ಡೋಲಿಯಲ್ಲಿ ನಡೆದ ಆ ಕರಬಂದೀ ಹೋರಾಟಕ್ಕೆ ಆರ್ಥಿಕ ಕಾರಣವಾದರೂ ಇತ್ತು. ಅಂಕೋಲೆಯಲ್ಲಿ ನಡೆದ ಹೋರಾಟಕ್ಕೆ ಅಂಥ ಯಾವ ಕಾರಣಗಳೂ ಇರಲಿಲ್ಲ. ಅಪ್ಪಟ ದೇಶಪ್ರೇಮವೇ ನಿಜದ ಕಾರಣವಾಗಿತ್ತು; ಮಹಾತ್ಮ ಗಾಂಧಿಯವರ ಕರೆಯೇ ನಿಜದ ಸ್ಫೂರ್ತಿಯಾಗಿತ್ತು.

1932ರಲ್ಲಿ ನಡೆದ ಈ ಕರನಿರಾಕರಣೆ ಚಳುವಳಿಯಿಂದಾಗಿ ಆ ಮನೆ ಈ ಮನೆ ಎನ್ನದೇ ಬಹುತೇಕ ಎಲ್ಲ ಮನೆಗಳು ನಲುಗಿ

**ಗಾಂಧೀಯುಗದ ಸುಮಾರು 30 ವರ್ಷಗಳ ಹೋರಾಟದ ಕಾಲಾವಧಿಯಲ್ಲಿ ನಡೆದ ಎಲ್ಲ ಚಳುವಳಿಗಳಲ್ಲೂ ಅಂಕೋಲೆ ಮಿಂಚಿದೆ. ಅದು ವಂದೇ ಮಾತರಂ ಚಳುವಳಿ ಇರಬಹುದು, ಹುಲುಬನ್ನಿ ಸತ್ಯಾಗ್ರಹ, ಜಂಗಲ್ ಸತ್ಯಾಗ್ರಹ, ಧ್ವಜ ಸತ್ಯಾಗ್ರಹ, ಅಸಹಕಾರ ಆಂದೋಲನ, ಉಪ್ಪಿನ ಸತ್ಯಾಗ್ರಹ, ಕರಬಂದೀ ಹೋರಾಟ, ಚಲೇಜಾವ್ ಚಳುವಳಿ ಇರಬಹುದು, –ಇವೆಲ್ಲ ಅಂಕೋಲೆಯ ಜನಜೀವನದಲ್ಲಿ ಚಿರಪರಿಚಿತ ಹೆಸರುಗಳು.**

ಹೋಗುವಂತೆ, ಬ್ರಿಟಿಷ್ ಸರ್ಕಾರದ ಬಂಧನಸತ್ರ ಅವ್ಯಾಹತವಾಗಿ ನಡೆದಿತ್ತು. ಪ್ರತಿ ಮನೆಯಿಂದ ಎರಡು, ಮೂರು, ನಾಲ್ಕು ಹೀಗೆ ಜೇಲುವಾಸಿಗಳ ಸಂಖ್ಯೆ ಏರುತ್ತಲೇ ಹೋಯಿತು. ಕೆಲವು ಮನೆಯ ಹೆಂಗಸರೂ ಕೂಡ ಜೈಲಿಗೆ ತಳ್ಳಲ್ಪಟ್ಟರು. ಪ್ರತಿವ್ಯಕ್ತಿಯ ರಕ್ತದ ಕಣಕಣದಲ್ಲಿ ಉಜ್ವಲ ರಾಷ್ಟ್ರಪ್ರೇಮ ತುಳುಕಾಡುತ್ತಿತ್ತು. ಹಿನ್ನೆಲೆ ಹೀಗಿದ್ದುದರಿಂದ ಸರಕಾರವು ಲಿಲಾವಿಗೆ ಹಾಕಿದ ತಮ್ಮ ಮನೆ–ಮಠಗಳನ್ನು ಕಳೆದುಕೊಂಡು ಕೆಲವರಂತೂ ಪರದೇಶಿಗಳಂತಾದರು. ದಿನ ಕಳೆದಂತೆ ಪೊಲೀಸರಿಗೆ ಕೂಡ ಸ್ವಾತಂತ್ರ್ಯ ಹೋರಾಟಗಾರರ ಕೆಚ್ಚೆದೆ ಮತ್ತು ಉಕ್ಕಿನ ಮನಸ್ಸು ದೊಡ್ಡ ಸವಾಲಾಗಿ ಪರಿಣಮಿಸಿತು. ಕ್ರಮೇಣ ಇದೇ ಬಗೆಯ ಇಡೀ ಹೋರಾಟ ಉತ್ತರ ಕನ್ನಡ ಜಿಲ್ಲೆಯಲ್ಲಿ – ವಿಶೇಷವಾಗಿ ಶಿರಸಿ–ಸಿದ್ದಾಪುರ ತಾಲೂಕುಗಳಲ್ಲಿ ಹರಡಿತು. ಅಲ್ಲಿ ಕೂಡ ತ್ಯಾಗದ ಪರಾಕಾಷ್ಠೆಯನ್ನು ಕಾಣಬಹುದಾಗಿತ್ತು.

ಮುಖ್ಯವಾಗಿ ಅಡಿಕೆ ಬೆಳೆಗಾರರು ಈ ಮಹಾಯಜ್ಞದಲ್ಲಿ ತೊಡಗಿದ್ದರು. ಹೇಗೆ ಬಾರ್ಡೋಲಿಯಲ್ಲಿ ಬೆಳೆನಷ್ಟದ ಆರ್ಥಿಕ ಕಾರಣ ಮುಖ್ಯವಾಗಿತ್ತೋ, ಹಾಗೇ ಶಿರಸಿ–ಸಿದ್ದಾಪುರಗಳಲ್ಲಿ ಅಡಿಕೆ ಬೆಳೆ ನಷ್ಟದ ಕಾರಣ ಮುಖ್ಯಪ್ರೇರಣೆಯಾಗಿತ್ತು. ಬಾರ್ಡೋಲಿಯಲ್ಲಾಗಲಿ, ಶಿರಸಿ–ಸಿದ್ದಾಪುರಗಳಲ್ಲಾಗಲಿ ಈ ಆರ್ಥಿಕ ಕಾರಣಗಳು ಕ್ರಮೇಣ ಗೌಣವಾಗಿ, ಈ ಕರ ನಿರಾಕರಣೆ ಹೋರಾಟವು ಅಪ್ಪಟ ದೇಶಭಕ್ತಿಯ ಭಾಗವಾಗಿಯೇ ಮೈತಳೆದು ಬ್ರಿಟಿಷ್ ಸರಕಾರದ ವಿರುದ್ಧದ ನೇರ ಸೆಣೆಸಾಟವಾಗಿತ್ತು. ಹೀಗೆ ಅಂಕೋಲ, ಸಿದ್ದಾಪುರ, ಶಿರಸಿ ತಾಲೂಕುಗಳು ನಾಡಿಗೇ ಮೇಲ್ಪಂಕ್ತಿಯಾಗಿ ನಿಂತವು.



ಇದಕ್ಕಿಂತ ಪೂರ್ವದ ಮತ್ತು ನಂತರದ ಸ್ವಾತಂತ್ರ್ಯ ಹೋರಾಟದ ಎಲ್ಲ ಹಂತಗಳಲ್ಲೂ ಅಂಕೋಲ ಮೊಟ್ಟಮೊದಲು ಕೈ ಜೋಡಿಸಿದ ತಾಲೂಕಾಗಿ ಮಿಂಚಿತು. ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳುವಳಿಯ ಕರೆಗೆ ಇಡೀ ದೇಶ ಓಗೊಟ್ಟಿತ್ತೇನೋ ನಿಜ ! ಆದರೆ ಅಂಕೋಲೆಯ ಸ್ವಾತಂತ್ರ್ಯ ಹೋರಾಟಗಾರರಂತೆ ಶಾಲೆ–ಕಾಲೇಜುಗಳ ಓದು ಮತ್ತು ನೌಕರಿಗಳನ್ನು ತೊರೆದು ಹೊರಬಂದವರು ಈ ಪ್ರಮಾಣದಲ್ಲಿ ಬೇರೆಕಡೆ ಕಾಣುವುದಿಲ್ಲ. ಸಾರ್ವಜನಿಕ ಮಧ್ಯವರ್ತಿ ಸ್ಥಳಗಳಲ್ಲಿ ವಿದೇಶೀ ವಸ್ತುಗಳನ್ನು ಸುಟ್ಟು, ಉದ್ಬೋದಕ ಭಾಷಣಗಳನ್ನು ಮಾಡಿದ ಘಟನೆ ಕೂಡ ಈ ಪ್ರಮಾಣದಲ್ಲಿ ಬೇರೆ ಕಡೆಗೆ ಸಿಗುವುದಿಲ್ಲ.

1930ರಲ್ಲಿ ಗಾಂಧೀಜಿಯವರ ದಾಂಡೀಯಾತ್ರೆಗೆ ಸಮನಾಗಿ, ದಕ್ಷಿಣ ಭಾರತದಲ್ಲೂ ಉಪ್ಪಿನ ಸತ್ಯಾಗ್ರಹಕ್ಕೆ ದೇಶದ ನಾಯಕರು ಕರೆಕೊಟ್ಟಾಗ, ಗಾಂಧೀಜಿಯವರ ಹೆಜ್ಜೆಯೇ ಭಾರತದ ಭವಿತವ್ಯದ ಹೆಜ್ಜೆ ಎಂದು ನಂಬಿದ ಅಂಕೋಲೆಯ ಸ್ವಾತಂತ್ರ್ಯ ಹೋರಾಟಗಾರರು, ಪ್ರಾಂತೀಯ ಕಾಂಗ್ರೆಸ್ಸಿನ ನಾಯಕರ ಕರೆಯಮೇರೆಗೆ ಉಪ್ಪುನೀರು ಹೇರಳವಾಗಿ ಸಿಗುವ ಅಂಕೋಲೆಯ ಪೂಜಗೇರಿ ಎಂಬಲ್ಲಿಗೆ ಮೈಲುದ್ದದ ಮೆರವಣಿಗೆಯಲ್ಲಿ ಹೊರಟು – ಬ್ರಿಟಿಷರ ಆಜ್ಞೆಯ ವಿರುದ್ಧ ಉಪ್ಪು ತಯಾರಿಸಿದರು ಮಾತ್ರವಲ್ಲ, ಅಂದಿನ ಮಾಮಲೇದಾರರ ಆಫೀಸಿನ ಸಮೀಪ ಇರುವ ಧ್ವಜಕಟ್ಟೆಯ ಮುಂದೆ ಬೃಹತ್ ಸಭೆ ಸೇರಿ ತಾವು ತಂದ ಉಪ್ಪುನೀರಿನಿಂದ ಉಪ್ಪನ್ನು ತಯಾರಿಸಿ ಸಾರ್ವಜನಿಕ ಲಿಲಾವಿಗೆ ಕರೆನೀಡಿದರು. ಅಂಕೋಲೆಯ ಧೀರ ಸ್ವಾತಂತ್ರ್ಯ ಹೋರಾಟಗಾರ ದೇವು ಹೊನ್ನಪ್ಪ ನಾಯ್ಕ– ಎಂಬಾತನು ಅದನ್ನು ಬ್ರಿಟಿಷರ ಆಜ್ಞೆಯ ವಿರುದ್ಧ – 30 ರೂಪಾಯಿಗೆ ಕೊಂಡುಕೊಂಡು, ಇದೇ ಕಾರಣಕ್ಕೆ ಅದೇ ಸ್ಥಳದಲ್ಲಿ ಮೊಟ್ಟಮೊದಲು ಬಂಧನಕ್ಕೆ ಒಳಗಾಗುತ್ತಾನೆ. ಅದರ ನಂತರ ಒಬ್ಬರ ಮೇಲೊಬ್ಬರಂತೆ ಲಿಲಾವು ಮಾಡಿ ಬಂಧನಕ್ಕೆ ಒಳಗಾಗುತ್ತಾರೆ. ಅಂಕೋಲೆಯ ಉಪ್ಪು,– ಅಂದಿನ ರಾಣಿ ಸರಕಾರದ ಗುಂಡಿಗೆಯನ್ನು ಅಲ್ಲಾಡಿಸಿಬಿಟ್ಟಿತ್ತು.

ಇಷ್ಟು ಮಾತ್ರವೇ ಅಲ್ಲ ಚಲೇಜಾವ್ ಚಳುವಳಿಯಲ್ಲಿ ಅಂಕೋಲೆ ಆಡಿದ ಪಾತ್ರ ಕೂಡ ಅದ್ವಿತೀಯ ಎನ್ನುವಂಥದ್ದು. 1942 ಆಗಸ್ಟ್ 9ನೆಯ ತಾರೀಖು ಗಾಂಧೀಜಿ 'ಭಾರತ ಬಿಟ್ಟು ತೊಲಗಿ' ಎಂದು ಘೋಷಿಸುತ್ತಾರೆ. ಅದು ರಾಣಿ ಸರಕಾರಕ್ಕೆ ನಡುಕವನ್ನು ಹುಟ್ಟಿಸುತ್ತದೆ. "ನಮ್ಮ ಬಳಿ ಶಸ್ತ್ರಾಸ್ತ್ರಗಳಿಲ್ಲದಿರಬಹುದು. ಅದು ನಮಗೆ ಬೇಕಾಗಿಯೂ ಇಲ್ಲ. ನಮ್ಮ ಬಳಿ ಉಕ್ಕಿನ ಮನಸ್ಸಿದೆ. ನಿಮ್ಮ ದುರಾಡಳಿತದಿಂದ ನಾವು ಬೇಸತ್ತಿದ್ದೇವೆ. 'ಕ್ವಿಟ್ ಇಂಡಿಯಾ' – ಚಲೇಜಾವ್!" ಈ ಕರೆ ಇಡೀ ದೇಶದಲ್ಲಿ ಮಿಂಚಿನ ಸಂಚಾರ ಮೂಡಿಸಿತ್ತು. ಅಂಕೋಲೆಯೂ ಒಕ್ಕೊರಲಿನ ಬೆಂಬಲ ಸೂಚಿಸಿತ್ತು. ಪುರುಷರೂ, ಮಹಿಳೆಯರೂ, ಹಿರಿವಯಸ್ಕರೂ ಎದ್ದು ನಿಂತರು. ಸರಕಾರಿ ಟಪಾಲುಗಳನ್ನು ಕಸಿಯಲಾಯಿತು. ತಾರು ಕಂಬಗಳನ್ನು ಕತ್ತರಿಸಲಾಯಿತು. ಒಟ್ಟಿನಲ್ಲಿ ಬ್ರಿಟಿಷ್ ಅಧಿಪತ್ಯದ ಗರ್ವಭಂಗಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲ ಮಾಡತೊಡಗಿದರು. ಹೋರಾಟಗಾರರು ಹಿಂಸೆಗೆ ಇಳಿಯದಂತೆ ಗಾಂಧೀ, ನೆಹರೂ, ಪಟೇಲ, ಆಜಾದ್ ಮುಂತಾದವರೆಲ್ಲ ಸಾಕಷ್ಟು ಎಚ್ಚರ ವಹಿಸಿದ್ದರು. ಅಂಕೋಲೆಯ ವೀರ ಸ್ವಾತಂತ್ರ್ಯ ಸೇನಾನಿಗಳ ರೊಚ್ಚು–ಕೆಚ್ಚುಗಳೇನೇ ಇದ್ದರೂ ಒಂದೇ ಒಂದು ಹನಿ ರಕ್ತ ನೆಲಕ್ಕೆ ಬೀಳದಂತೆ ಎಚ್ಚರವಹಿಸಿದ್ದರು. ಬ್ರಿಟಿಷ್ ಆಡಳಿತದ ಪೊಲೀಸ್ ದೌರ್ಜನ್ಯಗಳೆಲ್ಲವನ್ನೂ "ಮಹಾತ್ಮಾ ಗಾಂಧಿಯವರಿಗೇ ಜಯವಾಗಲಿ, ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬುದರ ಮೂಲಕ ಹೋರಾಟಗಾರರು ಮರೆಯುತ್ತಿದ್ದರು.



**ಚಲೇಜಾವ್ ಚಳುವಳಿಯಲ್ಲಿ ಅಂಕೋಲೆ ಆಡಿದ ಪಾತ್ರ ಕೂಡ ಅದ್ವಿತೀಯ ಎನ್ನುವಂಥದ್ದು. 1942 ಆಗಸ್ಟ್ 9ನೆಯ ತಾರೀಖು ಗಾಂಧೀಜಿ 'ಭಾರತ ಬಿಟ್ಟು ತೊಲಗಿ' ಎಂದು ಘೋಷಿಸುತ್ತಾರೆ. ಅದು ರಾಣಿ ಸರಕಾರಕ್ಕೆ ನಡುಕವನ್ನು ಹುಟ್ಟಿಸುತ್ತದೆ. "ನಮ್ಮ ಬಳಿ ಶಸ್ತ್ರಾಸ್ತ್ರಗಳಿಲ್ಲದಿರಬಹುದು. ಅದು ನಮಗೆ ಬೇಕಾಗಿಯೂ ಇಲ್ಲ. ನಮ್ಮ ಬಳಿ ಉಕ್ಕಿನ ಮನಸ್ಸಿದೆ. ನಿಮ್ಮ ದುರಾಡಳಿತದಿಂದ ನಾವು ಬೇಸತ್ತಿದ್ದೇವೆ. 'ಕ್ವಿಟ್ ಇಂಡಿಯಾ' – ಚಲೇಜಾವ್!" ಈ ಕರೆ ಇಡೀ ದೇಶದಲ್ಲಿ ಮಿಂಚಿನ ಸಂಚಾರ ಮೂಡಿಸಿತ್ತು. ಅಂಕೋಲೆಯೂ ಒಕ್ಕೊರಲಿನ ಬೆಂಬಲ ಸೂಚಿಸಿತ್ತು.**



ಗಾಂಧೀಯುಗದ ಸುಮಾರು 30 ವರ್ಷಗಳ ಹೋರಾಟದ ಕಾಲಾವಧಿಯಲ್ಲಿ ನಡೆದ ಎಲ್ಲ ಚಳುವಳಿಗಳಲ್ಲೂ ಅಂಕೋಲೆ ಮಿಂಚಿದೆ. ಅದು ವಂದೇ ಮಾತರಂ ಚಳುವಳಿ ಇರಬಹುದು, ಹುಲುಬನ್ನಿ ಸತ್ಯಾಗ್ರಹ, ಜಂಗಲ್ ಸತ್ಯಾಗ್ರಹ, ಧ್ವಜ ಸತ್ಯಾಗ್ರಹ, ಅಸಹಕಾರ ಆಂದೋಲನ, ಉಪ್ಪಿನ ಸತ್ಯಾಗ್ರಹ, ಕರಬಂದೀ ಹೋರಾಟ, ಚಲೇಜಾವ್ ಚಳುವಳಿ ಇರಬಹುದು, –ಇವೆಲ್ಲ ಅಂಕೋಲೆಯ ಜನಜೀವನದಲ್ಲಿ ಚಿರಪರಿಚಿತ ಹೆಸರುಗಳು. ಈ ಭಾಗದ ಧೀರರನ್ನೂ ಅವರ ಸಾಹಸದ ನೆಲಗಳನ್ನೂ ಕಣ್ಣಾರೆ ಕಾಣಲೆಂದೇ ಗಾಂಧೀಜಿ ಉತ್ತರ ಕನ್ನಡಕ್ಕೆ ಸಂಚಾರ ಕೈಕೊಂಡರು. ಅಂಕೋಲೆ ಮತ್ತು ಸಿದ್ಧಾಪುರಗಳನ್ನು ಆದ್ಯತೆಯೊಂದಿಗೆ ಸಂದರ್ಶಿಸಿದರು. ಅವರು ಮಾಡಿದ ಭಾಷಣದ ಸ್ಥಳವನ್ನು ಅಂಕೋಲೆ ಇಂದು 'ಗಾಂಧೀ ಮೈದಾನ'ವೆಂದೇ ಕರೆಯುತ್ತಿದೆ. ಅಲ್ಲಿಯೇ "ಸ್ವಾತಂತ್ರ್ಯ ಸಂಗ್ರಾಮ ಸ್ಮಾರಕ ಭವನ"ವೂ ತಲೆಯೆತ್ತಿದೆ. ವಿಧಾಯಕ ನೆಲೆಯಲ್ಲಿ ಆರಂಭವಾದ ಹೋರಾಟ ವಿಧಾಯಕ ನೆಲೆಯಲ್ಲೇ ವಿರಮಿಸಿತು.

ಈ ಎಲ್ಲ ಹೋರಾಟಗಳಲ್ಲಿ ವಿಶೇಷವಾಗಿ ಉಪ್ಪಿನ ಸತ್ಯಾಗ್ರಹ ಮತ್ತು ಕರಬಂದೀ ಚಳುವಳಿಗಳಲ್ಲಿ ಕರ್ನಾಟಕದ ಪ್ರಾಂತೀಯ ಕಾಂಗ್ರೆಸ್ಸಿನ ರಂಗನಾಥ ದಿವಾಕರ, ಕೌಜಲಗಿ ಹನುಮಂತರಾವ್, ನಿಟ್ಟೂರು ಶ್ರೀನಿವಾಸರಾವ್, ದ.ಪ.ಕರಮಕರ ಮುಂತಾದ ಅನೇಕ ನಾಯಕರು ಅಂಕೋಲೆಗೆ ಆಗಮಿಸಿ ಸೂಕ್ತ ಕಾಲಕ್ಕೆ ಮಾರ್ಗದರ್ಶನ ನೀಡಿದ್ದನ್ನು ಮರೆಯಲಾಗದು. ಅಂಕೋಲೆಯಲ್ಲಿ ಈ ಹೋರಾಟದ ಕಾರಣಕ್ಕಾಗಿಯೇ ತಮ್ಮ ಪಟೇಲಕಿ ಹುದ್ದೆಗೆ, ಮಾಸ್ತರ ಹುದ್ದೆಗೆ, ವಿದ್ಯಾಭ್ಯಾಸಕ್ಕೆ ರಾಜೀನಾಮೆ ಕೊಟ್ಟು ಮೇಲ್ಪಂಕ್ತಿಯಾದವರ ತ್ಯಾಗವೇನೂ ಸಣ್ಣದಲ್ಲ. ಭೂಗತರಾಗಿ ಹೋರಾಟಮಾಡಿ ಬ್ರಿಟಿಷ್ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದವರ ಪಡೆಯೇ ದೊಡ್ಡದಿದೆ. ಬಾಸ್ಗೋಡದ ಹಾಪಿ ರಾಮ ನಾಯಕರಂಥ ಸ್ಥಳೀಯ ನಾಯಕರ ದೊಡ್ಡ ಪಡೆಯೂ ಇದೆ. ಎಲ್ಲರ ಹೆಸರನ್ನು ಪಟ್ಟಿ ಮಾಡಿ ವಿವರಿಸಿದ್ದಲ್ಲಿ ಅದೇ ಒಂದು ಉದ್ಗ್ರಂಥವಾಗಲಿದೆ. ಗಂಡಂದಿರೆಲ್ಲ ಜೈಲು ಸೇರಿದಾಗ ತಮ್ಮ ಬೃಹತ್ ಕುಟುಂಬವನ್ನು ಎದೆಗಟ್ಟಿಮಾಡಿಕೊಂಡು ಸಾಕಿ–ಸಲಹಿದ ಹೆಂಗಸರ ತ್ಯಾಗಕ್ಕೆ ನೂರಾರು ಪುರಾವೆಗಳಿವೆ.



# ಊರ ಕೆರೆಗೆ ನೀರು ತುಂಬಿದ ಸಾಧನೆ

ಪ. ರಾಮಕೃಷ್ಣ ಶಾಸ್ತ್ರಿ

**ಕ**ಳೆದ ಬೇಸಿಗೆಯಲ್ಲಿ ನಮ್ಮ ರಾಜ್ಯದ ಬಹುತೇಕ ಜಿಲ್ಲೆಗಳು ಕುಡಿಯಲೂ ನೀರಿಲ್ಲದೆ ಪರಿತಪಿಸಿದವು. ಹಿಂದೆಂದೂ ಕಂಡಿರದ ಬಿಸಿಲಿನ ಬೇಗೆ ದಾವಾನೆಲದಂತೆ ಕಾಡಿತು. ಆಗ ಘನ ಕರ್ನಾಟಕ ಸರಕಾರದ ಸಚಿವರಾದ ವಿನಯ ಕುಲಕರ್ಣಿಯವರು ತಾವು ಉಸ್ತುವಾರಿ ನೋಡಿಕೊಳ್ಳುತ್ತಿರುವ ಧಾರವಾಡ ಜಿಲ್ಲೆಯ ಹಳೆಯ ಕೆರೆಗಳ ಹೂಳೆತ್ತಿಸಿ ಕಾಯಕಲ್ಪ ನೀಡಲು ಯೋಚಿಸಿದರು.

ಕೇವಲ ಸರಕಾರದಿಂದ ಆಗುವ ಕೆಲಸ ಇದಲ್ಲ. ಆದ ಕಾರಣ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಈ ಕೈಂಕರ್ಯವನ್ನು ಕೈಗೊಳ್ಳಲು ಅವರು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರಲ್ಲಿ ಮನವಿ ಮಾಡಿದರು. ಅದನ್ನು ಡಾ. ಹೆಗ್ಗಡೆ ಪುರಸ್ಕರಿಸಿ ಗ್ರಾಮಾಭಿವೃದ್ಧಿ ಯೋಜನೆಯ ನೆರವಿನಿಂದ ನೀರಿನ ಸಾಕಾರದ ಮಂತ್ರವನ್ನು ಜಪಿಸಿದರು. ಜಲ ಮರು ಪೂರಣ ಮತ್ತು ಮಳೆ ನೀರಿನ ಕೊಯ್ಲು ಎಂಬ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ ಪ್ರತೀ ಹನಿ ನೀರಿನ ಉಳಿತಾಯದ ಮಹತ್ತ್ವವನ್ನು ಜನ ಸಾಮಾನ್ಯರಿಗೆ ಮನದಟ್ಟು ಮಾಡಿದರು. ಇದು ಧಾರವಾಡದ ಜನರ ಪಾಲಿಗೆ ಅಕ್ಷಯ ಕೊಡುಗೆಯಾಯಿತು.

ಬರಗಾಲದ ಬೇಗೆಗೆ ಬಸವಳಿದ ಜಿಲ್ಲೆಗಳಲ್ಲಿ ಒಂದೆನಿಸಿತ್ತು ಧಾರವಾಡ. ಇಲ್ಲಿ ಸಾಕಷ್ಟು ಕೆರೆಗಳಿದ್ದರೂ ಹೂಳು ತುಂಬಿ ನಿರುಪಯೋಗಿಯಾಗಿವೆ. ಇದರಲ್ಲಿ ಹೂಳಿನಿಂದಾಗಿ ನೀರು ನಿಲ್ಲಲು ಜಾಗವಿಲ್ಲದ ಐದು ಕೆರೆಗಳ ಕಾಯಕಲ್ಪದ ಮೂಲಕ ಕೆರೆಯೊಡಲು ನೀರಿನಿಂದ ಸಂಪದ್ಭರಿತವಾಗುವಂತೆ ಮಾಡಿದ ಸಾಧನೆಗೆ ಜನ ಹರ್ಷೋದ್ಗಾರ ಮಾಡಿದರು. ಇದಕ್ಕಾಗಿ ಡಾ. ಹೆಗ್ಗಡೆ 20 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಿದರು. ಉಳಿದ ಮೊತ್ತವನ್ನು ಸಚಿವ ವಿನಯ ಕುಲಕರ್ಣಿಯವರು ಸರಕಾರದ ವತಿಯಿಂದ ಕೊಡಿಸಿದರು. ಧಾರವಾಡ ಜಿಲ್ಲೆಯಲ್ಲಿ ನೀರಿನ ಪವಾಡವೇ ನಡೆದುಹೋಯಿತು.



ಕೇವಲ ಸರಕಾರದಿಂದ ಆಗುವ ಕೆಲಸ ಇದಲ್ಲ. ಆದ ಕಾರಣ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಈ ಕೈಂಕರ್ಯವನ್ನು ಕೈಗೊಳ್ಳಲು ಅವರು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರಲ್ಲಿ ಮನವಿ ಮಾಡಿದರು. ಅದನ್ನು ಡಾ. ಹೆಗ್ಗಡೆ ಪುರಸ್ಕರಿಸಿ ಗ್ರಾಮಾಭಿವೃದ್ಧಿ ಯೋಜನೆಯ ನೆರವಿನಿಂದ ನೀರಿನ ಸಾಕಾರದ ಮಂತ್ರವನ್ನು ಜಪಿಸಿದರು. ಜಲ ಮರು ಪೂರಣ ಮತ್ತು ಮಳೆ ನೀರಿನ ಕೊಯ್ಲು ಎಂಬ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ ಪ್ರತೀ ಹನಿ ನೀರಿನ ಉಳಿತಾಯದ ಮಹತ್ತ್ವವನ್ನು ಜನ ಸಾಮಾನ್ಯರಿಗೆ ಮನದಟ್ಟು ಮಾಡಿದರು.

ಸಚಿವರಾದ ವಿನಯ ಕುಲಕರ್ಣಿಯವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಟಿಪ್ಪಣಿಯೊಂದನ್ನು ಸಲ್ಲಿಸಿದರು. ಅದರಲ್ಲಿ 'ಧಾರವಾಡ ವಲಯದ ಅರಣ್ಯ ಪ್ರದೇಶಗಳಲ್ಲಿರುವ ಕೆರೆಗಳಲ್ಲಿ ಸಾಕಷ್ಟು ಹೂಳು ತುಂಬಿಕೊಂಡಿದ್ದು ಮಳೆಯ ಅಭಾವದಿಂದ ಮೃಗಗಳಿಗೆ ನೀರಿನ ತೊಂದರೆಯಾಗಿರುತ್ತದೆ. ಅವು ನೀರನ್ನು ಅರಸುತ್ತ ಕಾಡಿನ ಸನಿಹದ ಗ್ರಾಮಗಳಿಗೆ ಪ್ರವೇಶಿಸಿ ಗ್ರಾಮಸ್ಥರಿಗೆ ತೊಂದರೆ ಕೊಡುತ್ತವೆ. ಈ ಕೆರೆಗಳ ಹೂಳೆತ್ತಿಸುವುದರಿಂದ ವನ್ಯಜೀವಿಗಳಿಗೆ ಸಾಕಷ್ಟು ನೀರು ಸಿಗುತ್ತದೆ. ಈ ಅವಶ್ಯ ಕೆಲಸಕ್ಕೆ ಬೇಕಾದ ಯಂತ್ರಗಳನ್ನು ಒದಗಿಸಿ ನೆರವು ನೀಡಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಮುಂದೆ ಬಂದಿದೆ. ಅವರಿಗೆ ಆದಷ್ಟು ಆ ಪ್ರದೇಶದಲ್ಲಿರುವ ಕೆರೆಗಳ ಹೂಳು ತೆಗೆಯಲು ಅನಂತರ ಮಣ್ಣನ್ನು ರೈತರಿಗೆ ಅವರ ಕೃಷಿಭೂಮಿಗೆ ಸಾಗಾಣಿಕೆ ಮಾಡಲು ಅನುವು ಮಾಡಿಕೊಡಬೇಕು' ಎಂದು ಸೂಚಿಸಿದರು.

ಹೀಗೆ ಹೂಳೆತ್ತಿದ ಹಳ್ಳಿಕೇರಿಯ ಕೆರೆ ಊರಂಚಿನಲ್ಲಿ ಒಂದು ಕೃಷಿ ಹೊಂಡದ ಆಕೃತಿಯಲ್ಲಿತ್ತು. ಇದನ್ನು ಹೂಳೆತ್ತಿದಾಗ ಸಿಕ್ಕಿದ 2850 ಟ್ರಾಕ್ಟರ್ ಲೋಡು ಮಣ್ಣಿನಿಂದ ಕೆರೆಯ ಏರಿ ನಿರ್ಮಾಣವಾಯಿತು. ಫಲವತ್ತಾದ ಗೋಡು ಮಣ್ಣು ರೈತರ ಹೊಲಗಳಿಗೆ ಗೊಬ್ಬರವಾಯಿತು. ಒಂದೆಕರೆ ಪ್ರದೇಶದಲ್ಲಿ ಎಂಟು ಅಡಿ ಆಳದ ಕೆರೆ ನಿರ್ಮಾಣವಾದಾಗ ಅದರ ನೀರು ತುಂಬುವ ಸಾಮರ್ಥ್ಯ 13. 44 ಕ್ಯೂಬಿಕ್ ಲೀಟರ್‌ಗಳಷ್ಟಿತ್ತು. ಕೆರೆಯ ಮೇಲಿರುವ ಬೆಟ್ಟದ ಕುರುಚಲು ಕಾಡಿನಲ್ಲಿ ಬಿದ್ದ ಮಳೆಯ ಹನಿಹನಿಯೂ ವ್ಯರ್ಥವಾಗದೆ ಕೆರೆಗೇ ಬಂದು ಸೇರಲು ಕಾಲುವೆಯೂ ಸಾಕಾರಗೊಂಡಿತು. ಕೆರೆ ತುಂಬಿದರೆ ಸನಿಹದ ಮೂವತ್ತೆಂಟು ಕೊಳವೆ ಬಾವಿಗಳಿಗೆ ಈ ನೀರು ಮರು ಪೂರಣಗೊಳ್ಳುವುದಕ್ಕೆ ವ್ಯವಸ್ಥೆ. ಜನರಿಗೆ, ಜಾನುವಾರಿಗೆ, ಕಾಡು ಪ್ರಾಣಿಗಳಿಗೆ ಕೆರೆಯ ನೀರು ಜೀವಜಲವಾಗಲು ಅನುಕೂಲವಾದ ಕಾಮಗಾರಿಗೆ ಆದ 6. 78 ಲಕ್ಷ ರೂಪಾಯಿ ವೆಚ್ಚದಲ್ಲಿ ಅರ್ಧ ಪಾಲನ್ನು ಡಾ. ವೀರೇಂದ್ರ ಹೆಗ್ಗಡೆ ನೀಡಿದ್ದಾರೆ. ಕೆರೆಯ ದಡದಲ್ಲಿ







ವೈವಿಧ್ಯಮಯವಾದ ಹಣ್ಣು ಮತ್ತು ಹೂಗಳ ಗಿಡಗಳನ್ನು ನೆಟ್ಟು ಅದರ ನಿರ್ವಹಣೆಯ ಹೊಣೆಯನ್ನು ಗ್ರಾಮಸ್ಥರಿಗೆ ವಹಿಸಲಾಗಿದೆ. ಇಲ್ಲೊಂದು ಕೆರೆ ನಿರ್ಮಾಣಕ್ಕೆ ಊರವರು ನೂರು ವರ್ಷಗಳಿಂದ ಕಾಣುತ್ತಿದ್ದ ಕನಸು ಈಗ ನನಸಾಗಿದೆಯಂತೆ.

ಹೆಂಗಳಮ್ಮನ ಕೆರೆ ಧಾರವಾಡದಿಂದ 22 ಕಿ. ಮೀ. ದೂರದ ಹೆಬ್ಬಳ್ಳಿ ಗ್ರಾಮದಲ್ಲಿದೆ. ನೂರಾರು ವರ್ಷಗಳ ಇತಿಹಾಸ ಹೊಂದಿದ ಅದು ನಾಲ್ಕು ದಶಕಗಳ ಹಿಂದಿನ ವರೆಗೂ ಗ್ರಾಮಸ್ಥರಿಗೆ ಜೀವಜಲವನ್ನು ಪೂರೈಸಿತ್ತು. ಆದರೆ ಹೂಳು ತುಂಬಿ ನೀರು ಬರಿದಾಯಿತು. ಕೆರೆಯಲ್ಲಿ ಬೆಳೆದ ಜಾಲಿಮರದ ಕಾಡು ಗ್ರಾಮಸ್ಥರಿಗೆ ಕಟ್ಟಿಗೆ ಪೂರೈಸಿತು. ಜಾನುವಾರುಗಳಿಗೆ ಮೇವು ಒದಗಿಸಿತು. ಆದರೆ ಹನಿ ನೀರನ್ನು ಕೂಡ ಕೊಡದೆ ಬಟ್ಟ ಬಯಲಾಯಿತು. ಐದು ಎಕರೆ ವಿಶಾಲವಾದ ಕೆರೆ ಈಗ ಪುನರುಜ್ಜೀವನಗೊಂಡಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಜಾಲಿಯ ಕಾಡನ್ನು ಕಡಿದು ಹೂಳು ತೆಗೆಸಿ 2, 73, 700 ಕ್ಯೂಬಿಕ್ ಲೀ. ನೀರಿನ ಸಂಗ್ರಹಣೆಯ ಸಾಮರ್ಥ್ಯ ಒಲಿದಿದೆ. 22 ದಿನಗಳ ಕಾಮಗಾರಿಗೆ ಸ್ಥಳೀಯ ಗ್ರಾಮ ಪಂಚಾಯತ್ ಹೆಗಲು ಕೊಟ್ಟಿದೆ. 5. 71 ಲಕ್ಷ ರೂಪಾಯಿ ವೆಚ್ಚದಲ್ಲಿ ಅರ್ಧ ಪಾಲನ್ನು ಡಾ. ಹೆಗ್ಗಡೆ ನೀಡಿದ್ದಾರೆ. ಕೆರೆ ತುಂಬಿದರೆ ಸಮೀಪದ 41 ಕೊಳವೆ ಬಾವಿಗಳೂ ಭರ್ತಿಯಾಗಲಿವೆ. ಕೆರೆಯ ದಡದಲ್ಲಿ ಹಣ್ಣು, ಹೂಗಳ ಗಿಡಗಳು ಶೋಭೆ



ನೀಡುತ್ತಿವೆ. ಇದರ ಕಾಮಗಾರಿಯ ವೀಕ್ಷಣೆಗೆ ಸ್ವತಃ ಹೆಗ್ಗಡೆಯವರೂ ಬಂದಿದ್ದರು.

ಮಂಗಳಮ್ಮನ ಕೆರೆ ಧಾರವಾಡ ಜಿಲ್ಲೆಯ ಮುಗದ ಗ್ರಾಮದಲ್ಲಿದೆ. 98 ಎಕರೆಗಳಷ್ಟು ವಿಶಾಲವಾಗಿರುವ ಇದರ ನೀರು ಗ್ರಾಮದ 1200 ಕುಟುಂಬಗಳ ಪೈಕಿ 900 ಕುಟುಂಬಗಳ ದಾಹ ಇಂಗಿಸಬೇಕಾಗಿದೆ. ಮುನ್ನೂರು ಕುಟುಂಬಗಳ ಕೃಷಿಗೆ, 150 ಕುಟುಂಬಗಳ ಮೀನುಗಾರಿಕೆಗೆ, ನೂರು ಕುಟುಂಬಗಳ ಕುಂಬಾರಿಕೆಗೆ ಇದರ ನೀರೇ ಆಧಾರ. ಸನಿಹದ ಗ್ರಾಮಗಳ ಜನರಿಗೂ ಕುಡಿಯಲು, ಕುರಿ ಸಾಕಣೆ, ಜಾನುವಾರು ಪೋಷಣೆಗೂ ಅದೇ ಏಕೈಕ ಆಧಾರ. ಸಣ್ಣ ನೀರಾವರಿ ಇಲಾಖೆಯ ಆಶ್ರಯದಲ್ಲಿದ್ದರೂ ನಿರ್ವಹಣೆಯ ಲೋಪದಿಂದ ನೀರು ಬರಿದಾಗಿತ್ತು. ಹತ್ತು ವರ್ಷಗಳ ಹಿಂದೆ 40 ಲಕ್ಷ ರೂಪಾಯಿ ವೆಚ್ಚದಲ್ಲಿ ಮಾಡಿದ ಕಾಮಗಾರಿಗಳೂ ಫಲ ನೀಡಿರಲಿಲ್ಲ.

ಆದರೆ ಈಗ ಮಂಗಳಮ್ಮನ ಕೆರೆಗೆ ಹೊಸ ಮದುವಣಗಿತ್ತಿಯ ಕಳೆ ಮೂಡಿದೆ. ಅದರ ಹೂಳೆತ್ತಿ 4750 ಟ್ರಾಕ್ಟರ್ ಲೋಡ್ ಗೋಡುಮಣ್ಣನ್ನು ರೈತರ ಹೊಲಗಳಿಗೆ ನೀಡಲಾಗಿದೆ. ಉಳಿದ ಮಣ್ಣಿನಿಂದ ಇಕ್ಕಟ್ಟಾದ ಊರಿನ ರಸ್ತೆಯನ್ನು ಅಗಲ ಮಾಡಿದ್ದಾರೆ. 31. 64 ಮಿಲಿಯನ್ ಕ್ಯೂಬಿಕ್ ಅಡಿಗಳಷ್ಟು ನೀರು ನಿಲ್ಲಲು ಕೆರೆ ಸಮರ್ಥವಾಗಿದೆ. ಕೆರೆಯ ಏರಿಯಲ್ಲಿ ಸಾಲು ಮರಗಳ ನಾಟಿಯಾಗಿದೆ. 8. 56 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 2. 86 ಲಕ್ಷ ರೂಪಾಯಿಗಳ ಪಾಲನ್ನು ಡಾ. ಹೆಗ್ಗಡೆ ನೀಡಿದ್ದಾರೆ. 40 ಲಕ್ಷ ರೂಪಾಯಿ ವೆಚ್ಚ ಮಾಡಿದಾಗಲೂ ಇಂತಹ ಸಮೃದ್ಧ ಕೆರೆ ನಿರ್ಮಾಣವಾಗಿರಲಿಲ್ಲ ಎನ್ನುತ್ತಾರೆ ಗ್ರಾಮಸ್ಥರು.

ಹಾಗೆಯೇ ಧಾರವಾಡ ಜಿಲ್ಲೆಯ ಕೊಟಬಾಗಿ ಗ್ರಾಮಕ್ಕೆ ಇದ್ದುದು ಒಂದೇ ಕೆರೆಯಾದರೂ ಸದಾ ನೀರಿನಿಂದ ತುಂಬಿರುತ್ತಿತ್ತು. ಕೆಲವು ವರ್ಷಗಳಿಂದ ಹೂಳು ತುಂಬಿ ಚೈತನ್ಯ ಕಳೆದುಕೊಂಡಿತು. ಇಲ್ಲಿಯೂ ಹೂಳು ತೆಗೆಯುವ ಕೆಲಸ ಯಶಸ್ವಿಯಾಗಿದೆ. ಹಿಟಾಚಿ ಯಂತ್ರಗಳಿಂದ ತೆಗೆದ ಫಲವತ್ತಾದ ಹೂಳು ರೈತರ ಹೊಲ ಸೇರಿದೆ. 19444





ಕ್ಯೂಬಿಕ್ ಲೀಟರ್ ನೀರು ತುಂಬುವ ಸಾಮರ್ಥ್ಯ ಲಭ್ಯವಾಗಿದೆ. ಕೆರೆಯ ಸುತ್ತಲೂ ಹಾಗೆಯೇ ಗ್ರಾಮದ ಶಾಲೆಯ ಆವರಣದಲ್ಲಿಯೂ ಹಣ್ಣು ಮತ್ತು ಹೂಗಳ ಗಿಡಗಳನ್ನು ನೆಡುವ ಕೆಲಸವೂ ಆಗಿದೆ.

ಧಾರವಾಡ ಜಿಲ್ಲೆಯ ತಿಮ್ಮಾಪುರದಲ್ಲಿ ಕೆರೆಯ ಹೂಳೆತ್ತಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯೊಂದಿಗೆ ಸ್ಥಳೀಯ ಗ್ರಾಮ ಪಂಚಾಯತ್ ಕೈಗೂಡಿಸಿದೆ. ಸಚಿವ ವಿನಯ ಕುಲಕರ್ಣಿಯವರೇ ಕಾಮಗಾರಿಗೆ ಚಾಲನೆ ನೀಡಿದ್ದರು. 970 ಟಿಪ್ಪರ್ ಲೋಡು ಹೂಳು ಮಣ್ಣು ರೈತರ ಹೊಲಗಳಿಗೆ ಗೊಬ್ಬರವಾಗಿದೆ. ಹೊಲಕ್ಕೆ ಹೋಗುವ ಎರಡು ಕಿ. ಮೀ. ಉದ್ದದ ರಸ್ತೆಯ ಹಳ್ಳ ದಿಣ್ಣೆಗಳನ್ನು ಮುಚ್ಚಲು ಉಳಿದ ಮಣ್ಣು ಬಳಕೆಯಾಗಿದೆ. ಕೆರೆಯಲ್ಲಿ ನೀರು ತುಂಬುವ ಸಾಮರ್ಥ್ಯ 33, 75, 0000 ಕ್ಯೂಬಿಕ್ ಲೀಟರುಗಳಷ್ಟಿದೆ. ಇದಕ್ಕೆ ತಗಲಿದ 4. 14ಲಕ್ಷ ರೂಪಾಯಿಗಳಲ್ಲಿ ಡಾ. ವೀರೇಂದ್ರ ಹೆಗ್ಗಡೆ ಎರಡು ಲಕ್ಷ ರೂ. ಭರಿಸಿದ್ದಾರೆ.

ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಜಯಶಂಕರ ಶರ್ಮಾ ಈ ಯೋಜನೆಗಳ ಪೂರ್ಣ ಉಸ್ತುವಾರಿ ವಹಿಸಿಕೊಂಡು ಎಲ್ಲಿಯೂ ಲೋಪವಾಗದಂತೆ ನೋಡಿಕೊಂಡಿದ್ದಾರೆ. ಡಾ. ಹೆಗ್ಗಡೆ ಆಗಾಗ ಭೇಟಿ ನೀಡಿ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅಗತ್ಯವಾದ ಮಾರ್ಗದರ್ಶನ ನೀಡಿದ್ದಾರೆ. 'ಪರಿಸರ ಎಂಬುದು ನಮ್ಮ ಹಿರಿಯರಿಂದ ಬಂದ ಬಳುವಳಿ ಅಲ್ಲ. ಮುಂದಿನ ಪೀಳಿಗೆಯಿಂದ ನಾವು ಪಡೆದ ಸಾಲ. ಇದನ್ನು ಜೋಪಾನವಾಗಿಡುವುದು ನಮ್ಮ ಕರ್ತವ್ಯ' ಎಂಬುದು ಡಾ. ವೀರೇಂದ್ರ ಹೆಗ್ಗಡೆಯವರು ಹೇಳುವ ಕಿವಿಮಾತು.

ಜನ ಹರ್ಷಪಟ್ಟಿದ್ದಾರೆ. ಕೆರೆ ತುಂಬಿದೆ. ಜನರ ದಾಹ ಅಡಗಿದೆ. ದಶಕಗಳಿಂದ ಕಾಡುತ್ತಿದ್ದ ನೀರಿನ ಬವಣೆ ಕೊನೆಯಾಗಿದೆ.





# ಬರದಲ್ಲೂ ಲಾಭದ ಘಮಲು : ದಾವಲಸಾಬ್ ಕೈ ಹಿಡಿದ ಸುಗಂಧರಾಜ

**ತುಕಾರಾಂ ರಾವ್ ಬಿ. ವಿ.**
ಸಹಾಯಕ ನಿರ್ದೇಶಕರು, ಕೊಪ್ಪಳ

**ಸಂ**ಜೆಯ ಹೊತ್ತಿನಲ್ಲಿ ಸುವಾಸನೆಯ ಸುಗಂಧ ಬೀರುತ್ತ, ಮುಖ್ಯವಾಗಿ ಹೂಮಾಲೆಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಹೂವು ಸುಗಂಧರಾಜ. ಈ ಹೂವಿಗೆ ಎಲ್ಲೆಡೆ ವ್ಯಾಪಕ ಬೇಡಿಕೆ ಇದೆ. ಸುಗಂಧರಾಜ ಹೂವಿನ ಬೆಳೆ ಸಾಮಾನ್ಯವಾಗಿ ಚಿತ್ರದುರ್ಗ, ದಾವಣಗೆರೆ, ತುಮಕೂರು ಹೀಗೆ ದಕ್ಷಿಣಕರ್ನಾಟಕದ ಜಿಲ್ಲೆಗಳಲ್ಲಿ ಬೆಳೆಯುವುದು ಹೆಚ್ಚು. ಆದರೆ, ರೈತ ದಾವಲ್‌ಸಾಬ್, ಕೊಪ್ಪಳ ಜಿಲ್ಲೆಯಂತಹ ಬಿಸಿಲ ನಾಡಿನಲ್ಲಿಯೂ ಈ ಹೂವನ್ನು ಬೆಳೆದು, ಯಶಸ್ವಿಯಾಗಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ.

ಕೊಪ್ಪಳ ಜಿಲ್ಲೆ ಮಾತ್ರವಲ್ಲ, ಇಡೀ ರಾಜ್ಯ ಈ ವರ್ಷ ಬರದ ಬೇಗುದಿಗೆ ಸಿಲುಕಿದೆ. ಒಂದೆಡೆ ಈರುಳ್ಳಿ ಬೆಳೆದ ರೈತರು ದರ ಕುಸಿತದ ಬಿರುಗಾಳಿಗೆ ಸಿಕ್ಕಿ ನಷ್ಟ ಅನುಭವಿಸುತ್ತಿದ್ದಾರೆ. ಉಳಿದ ಕೃಷಿ ಬೆಳೆಗಳು ಮಳೆಯ ಕೊರತೆಯಿಂದ ಕೈಗೆ ಬಂದಿಲ್ಲ. ಇವೆಲ್ಲ ಸಂಕಷ್ಟಗಳ ನಡುವೆಯೂ ಸ್ವಲ್ಪ ಜಮೀನಿನಲ್ಲಿಯೇ ಸುಗಂಧರಾಜ ಪುಷ್ಪ ಕೃಷಿಯನ್ನು ಕೈಗೊಂಡು ನಿತ್ಯ ಲಾಭಗಳಿಸುತ್ತ ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ ಕೊಪ್ಪಳ ತಾಲೂಕಿನ ಬೇಳೂರು ಗ್ರಾಮದ ರೈತ ದಾವಲಸಾಬ್.

ತೋಟಗಾರಿಕೆ ಇಲಾಖೆಯ ವತಿಯಿಂದ ನೆರವು ಹಾಗೂ ತಂತ್ರಜ್ಞಾನ ಪಡೆದು, ಪುಷ್ಪಕೃಷಿಯನ್ನು ಯಶಸ್ವಿಯಾಗಿ ಕೈಗೊಂಡು ಉತ್ತಮ ಲಾಭ ಪಡೆಯುತ್ತಿರುವ ರೈತನ ಯಶೋಗಾಥೆಯ ವರದಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಕೊಪ್ಪಳ ತಾಲೂಕು ಬೇಳೂರು ಗ್ರಾಮಕ್ಕೆ ವಿಶೇಷ ಮಾಧ್ಯಮ ಅಧ್ಯಯನ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಜೆಯ ಹೊತ್ತಿನಲ್ಲಿ ಸುವಾಸನೆಯ ಸುಗಂಧ ಬೀರುತ್ತ, ಮುಖ್ಯವಾಗಿ ಹೂಮಾಲೆಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಹೂವು ಸುಗಂಧರಾಜ. ಈ ಹೂವಿಗೆ ಎಲ್ಲೆಡೆ ವ್ಯಾಪಕ ಬೇಡಿಕೆ ಇದೆ. ಸುಗಂಧರಾಜ ಹೂವಿನ ಬೆಳೆ ಸಾಮಾನ್ಯವಾಗಿ ಚಿತ್ರದುರ್ಗ, ದಾವಣಗೆರೆ, ತುಮಕೂರು ಹೀಗೆ ದಕ್ಷಿಣಕರ್ನಾಟಕದ ಜಿಲ್ಲೆಗಳಲ್ಲಿ ಬೆಳೆಯುವುದು ಹೆಚ್ಚು. ಆದರೆ, ರೈತ ದಾವಲ್‌ಸಾಬ್, ಕೊಪ್ಪಳ ಜಿಲ್ಲೆಯಂತಹ ಬಿಸಿಲ ನಾಡಿನಲ್ಲಿಯೂ ಈ ಹೂವನ್ನು ಬೆಳೆದು, ಯಶಸ್ವಿಯಾಗಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ.

ಕಳೆದ ವರ್ಷ ಕೇವಲ ಅರ್ಧ ಎಕರೆಯಲ್ಲಿ ಶೃಂಗಾರ ತಳಿಯ ಸುಗಂಧರಾಜ ಬೆಳೆಯ ಗೆಡ್ಡೆಯನ್ನು ಭೂಮಿಗೆ ಬಿತ್ತಿದ ದಾವಲಸಾಬ, ಸತತ ಎಂಟು ತಿಂಗಳ ಕಾಲ ತಾಳ್ಮೆಯಿಂದ ಕಾಯ್ದು, ಇದೀಗ ನಿತ್ಯ ಉತ್ತಮ ಲಾಭ ಗಳಿಸುತ್ತಿದ್ದಾರೆ.



**ಸುಗಂಧರಾಜ ಪುಷ್ಪ ಕೃಷಿ ಅತ್ಯಂತ ಕಡಿಮೆ ವೆಚ್ಚದಾಯಕವಾಗಿದ್ದು, ಅರ್ಧ ಎಕರೆಗೆ ಕೇವಲ 20 ರಿಂದ 30 ಸಾವಿರ ರೂ. ವೆಚ್ಚವಾಗಿದೆ. ಈ ಗಿಡಕ್ಕೆ ಕೀಟಬಾಧೆ, ರೋಗಬಾಧೆ ಕಾಡುವುದು ಬಹಳಷ್ಟು ಕಡಿಮೆ ಇರುವುದರಿಂದ, ಕೀಟನಾಶಕ ಬಳಕೆ, ಹೆಚ್ಚಿನ ಗೊಬ್ಬರ ಹಾಕುವ ಪ್ರಮೇಯವೂ ಇಲ್ಲ.**



ಇದೀಗ ನಿತ್ಯ ಕನಿಷ್ಠ 15 ರಿಂದ 20 ಕೆ.ಜಿ. ಹೂ ಪಡೆಯುತ್ತಿದ್ದು, ಕೊಪ್ಪಳದ ಮಾರುಕಟ್ಟೆಗೆ ಮಾರಾಟ ಮಾಡುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ಹೂವಿಗೆ 50 ರಿಂದ 60 ರೂ. ದರ ಸಿಗುತ್ತಿದ್ದು, ನಿತ್ಯ ಕನಿಷ್ಠ ಎಂಟು ನೂರುಗಳಿಂದ ಒಂದು ಸಾವಿರ ರೂ. ಆದಾಯ ಪಡೆಯುತ್ತಿದ್ದಾರೆ. ಶ್ರಾವಣ ಮಾಸದಲ್ಲಿ, ಹಬ್ಬ ಹರಿದಿನಗಳಲ್ಲಿ, ಅಮಾವಾಸ್ಯೆ, ಹುಣ್ಣಿಮೆಯ ಹಿಂದಿನ ದಿನದಲ್ಲಿ ಪ್ರತಿ ಕೆ.ಜಿ. ಗೆ ಗರಿಷ್ಠ 150 ರೂ. ವರೆಗೂ ಲಭ್ಯವಾಗುತ್ತದೆ. ಖರ್ಚು ವೆಚ್ಚ ಹೊರತುಪಡಿಸಿ ಅರ್ಧ ಎಕರೆಯಲ್ಲಿ, ವರ್ಷಕ್ಕೆ ಕನಿಷ್ಠ 2 ರಿಂದ 2.5 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಸುಗಂಧರಾಜ ಹೂವಿನ ವಿಶೇಷತೆ ಎಂದರೆ, ಹೂವನ್ನು ಬಿಡಿಸಿದ ನಂತರವೂ, ಕನಿಷ್ಠ 03 ದಿನಗಳ ಕಾಲ ಬಾಡದೆ ಸುಗಂಧವನ್ನು ಸೂಸುತ್ತ ನಳನಳಿಸುತ್ತಿರುತ್ತದೆ.

'ಪದವಿ ವ್ಯಾಸಂಗ ಪೂರ್ಣಗೊಂಡ ನಂತರ, ಸರ್ಕಾರಿ ಅಥವಾ ಖಾಸಗಿ ನೌಕರಿ ಮಾಡಬೇಕೋ, ಅಥವಾ ಸ್ವಯಂ ಉದ್ಯೋಗ ಮಾಡಬೇಕೊ ಎಂಬ ಜಿಜ್ಞಾಸೆಯಲ್ಲಿದ್ದಾಗ ತೋಟಗಾರಿಕೆ ಇಲಾಖೆಯವರಿಂದ ಸಲಹೆ ಪಡೆದು, ಪುಷ್ಪಕೃಷಿಯಲ್ಲಿ ವಿಶೇಷವಾಗಿ ಸುಗಂಧರಾಜ ಬೆಳೆ ಬೆಳೆದು, ನಿತ್ಯ ಆದಾಯವನ್ನು ಗಳಿಸುತ್ತಾ ನೆಮ್ಮದಿಯ ಬದುಕು ಕಂಡುಕೊಂಡಿದ್ದೇನೆ. ರೈತರು ಎಂತಹ ಪರಿಸ್ಥಿತಿಯಲ್ಲೂ ಆತ್ಮ ಸ್ಥೈರ್ಯ ಕಳೆದುಕೊಳ್ಳದೇ ಇಲಾಖೆ ಯೋಜನೆಗಳ ಸದ್ಬಳಕೆ ಮಾಡಿಕೊಂಡು ಸ್ವಾವಲಂಬನೆ ಬದುಕು ರೂಪಿಸಿಕೊಳ್ಳಬೇಕು' ಎನ್ನುತ್ತಾರೆ ರೈತ ದಾವಲಸಾಬ್ ಅವರು.

ಸುಗಂಧರಾಜ ಪುಷ್ಪ ಕೃಷಿ ಅತ್ಯಂತ ಕಡಿಮೆ ವೆಚ್ಚದಾಯಕವಾಗಿದ್ದು, ಅರ್ಧ ಎಕರೆಗೆ ಕೇವಲ 20 ರಿಂದ 30 ಸಾವಿರ ರೂ. ವೆಚ್ಚವಾಗಿದೆ. ಈ ಗಿಡಕ್ಕೆ ಕೀಟಬಾಧೆ, ರೋಗಬಾಧೆ ಕಾಡುವುದು ಬಹಳಷ್ಟು ಕಡಿಮೆ ಇರುವುದರಿಂದ, ಕೀಟನಾಶಕ ಬಳಕೆ, ಹೆಚ್ಚಿನ ಗೊಬ್ಬರ ಹಾಕುವ ಪ್ರಮೇಯವೂ ಇಲ್ಲ. ಸುಗಂಧರಾಜ ಗಡ್ಡೆಯನ್ನು ಒಮ್ಮೆ ಹೊಲಕ್ಕೆ ಹಾಕಿ, ಉತ್ತಮ ನಿರ್ವಹಣೆ ಮಾಡಿದರೆ, ಕನಿಷ್ಠ 03 ರಿಂದ 05 ವರ್ಷಗಳವರೆಗೆ ಯಾವುದೂ ಹೆಚ್ಚಿನ ಖರ್ಚಿಲ್ಲದೆ, ನಿರಂತರ ಹೂವಿನ ಬೆಳೆ ಪಡೆಯಬಹುದು ಎನ್ನುತ್ತಾರೆ ಕೊಪ್ಪಳದ ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರದ ವಿಷಯ ತಜ್ಞ ವಾಮನಮೂರ್ತಿ ಅವರು.

ತೋಟಗಾರಿಕೆ ಬೆಳೆ ವಿಸ್ತರಣೆ ಹಾಗು ರೈತರಿಗೆ ಉತ್ತೇಜನ ನೀಡುವ ಸಲುವಾಗಿ ಇಲಾಖೆಯಿಂದ ಹಲವು ಯೋಜನೆಗಳು ಇಲಾಖೆಯಲ್ಲಿ ಲಭ್ಯವಿದೆ. ತೊಟಗಾರಿಕೆ ಬೆಳೆಗೆ ಹನಿ ನೀರಾವರಿ ವ್ಯವಸ್ಥೆ ಅಳವಡಿಕೆ ಅತ್ಯಂತ ಉತ್ತಮ ವ್ಯವಸ್ಥೆಯಾಗಿದ್ದು, ಇದರಿಂದ ಮಿತ ನೀರಿನಲ್ಲಿ ಅಧಿಕ ಇಳುವರಿ ಹಾಗೂ ಲಾಭ ಪಡೆಯಲು ಸಾಧ್ಯವಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಡಿ ಶೇ. 90 ರಷ್ಟು ಸಬ್ಸಿಡಿ ಇದೆ. ರೈತರು ಇದರ ಸದುಪಯೋಗ ಪಡೆದು, ಉತ್ತಮ ಬದುಕು ಕಟ್ಟಿಕೊಳ್ಳಬಹುದು ಎಂಬುದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ ಅವರ ಸಲಹೆ. ಬೇಳೂರು ಗ್ರಾಮದ ಇನ್ನೋರ್ವ ರೈತ ಸಣ್ಣ ಮಲ್ಲಪ್ಪ ಅವರು ಈ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದು ಹೀಗೆ. 'ಈ ವರ್ಷ ಕಷ್ಟಪಟ್ಟು ಈರುಳ್ಳಿ ಬೆಳೆ ಬೆಳೆದೆ, ಆದರೆ ಬೆಲೆ ಕುಸಿತದಿಂದ ತೀವ್ರ ನಷ್ಟವಾಗಿದೆ. ರೈತ ದಾವಲಸಾಬ್ ಸುಗಂಧರಾಜ ಪುಷ್ಪಕೃಷಿ ಮಾಡುತ್ತಿರುವುದನ್ನು ಗಮನಿಸಿದ್ದು, ಉತ್ತಮ ಆದಾಯ ಬರುತ್ತಿದೆ. ನಾನೂ ಸಹ ಪುಷ್ಪಕೃಷಿ ಮಾಡಲು ನಿರ್ಧರಿಸಿದ್ದೇನೆ'. ಸಣ್ಣ ರೈತರು ಸುಗಂಧರಾಜ, ಗುಲಾಬಿ, ಕನಕಾಂಬರ ನಂತಹ ಪುಷ್ಪ ಕೃಷಿ ಮಾಡಿದಲ್ಲಿ ಉತ್ತಮ ಲಾಭ ಪಡೆಯಲು ಸಾಧ್ಯವಿದೆ.

ಹೆಚ್ಚಿನ ಮಾಹಿತಿಗೆ ಕೊಪ್ಪಳದ ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರದ ವಿಷಯ ತಜ್ಞ ವಾಮನಮೂರ್ತಿ– 9482672039 ಕ್ಕೆ ಸಂಪರ್ಕಿಸಬಹುದು.



# ಸೂರ್ಯ ಪಥಚಲನೆಯ ಪರ್ವದಿನ : ಸಂಕ್ರಾಂತಿ

**ಜನವರಿ ತಿಂಗಳು ರೈತಾಪಿ ವರ್ಗದವರ ವಿರಾಮದ ಕಾಲ. ಭತ್ತ ಒಕ್ಕಲು ಮಾಡುವುದು, ರಾಶಿ ಹಾಕಿ ಪೂಜಿಸಿ ಬಂದ ಬಡಬಗ್ಗರಿಗೆ ಯಥಾಶಕ್ತಿ ದಾನ ಮಾಡುವ ಪದ್ಧತಿ ಹಳ್ಳಿಗಳಲ್ಲಿದೆ. ಬಿಡುವಿನ ಈ ಸಮಯದಲ್ಲಿ ಹೆಚ್ಚಾಗಿ ಜಾತ್ರೆಗಳ ಕಾಲ ಒದಗಿ ಬರುತ್ತದೆ. ಶುಭಕರವಾದ ಈ ಹಬ್ಬವು ಮನಸ್ಸಿನ ಕೆಟ್ಟತನವನ್ನು, ದ್ವೇಷಾಸೂಯೆಯನ್ನು ನಿವಾರಿಸುತ್ತದೆಂಬ ನಂಬಿಕೆ ಜನಪದರದು. ತಮಿಳುನಾಡಿನಲ್ಲಿ ಪೊಂಗಲ್ ಎಂದು ವಿಶಿಷ್ಟವಾಗಿ ಸೂರ್ಯ ಆರಾಧನೆ ನಡೆಸಲಾಗುತ್ತದೆ. ಆಂಧ್ರದಲ್ಲಿ ಈ ದಿನ ರಾವಣನ ಸಂಹಾರದ ದಿನ. ಕೇರಳದಲ್ಲಿ ಮಕರಜ್ಯೋತಿಯ ವಿಶೇಷ.**

**ಗುರುರಾಜ ಪೋಶೆಟ್ಟಿಹಳ್ಳಿ**

ಪ್ರಪಂಚಕ್ಕೆ ಬೆಳಕು – ಶಾಖ ನೀಡುವ ಸೂರ್ಯ ಜನಪದರ ನಿಜದೈವ. ಸೂರ್ಯನ ಚಲನೆಗೆ ಸಂಬಂಧಿಸಿದ ಹಬ್ಬವೇ ಸಂಕ್ರಮಣ. ಸಂಸ್ಕೃತದಲ್ಲಿ ಕ್ರಮಣ ಅಂದರೆ ಪಾದ, ಚಲನೆ. ವ್ಯವಸ್ಥಿತವಾಗಿ ನಡೆಯುವ ಚಲನೆಯೇ ಸಂಕ್ರಾಂತಿ. ಎಲ್ಲಾ ಗ್ರಹಗಳು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಚಲಿಸಿದರೂ ಸೂರ್ಯಕ್ರಮಣ ಮಾತ್ರ ವಿಶೇಷವಾದುದು. ರವಿಯ ರಾಶಿಕ್ರಮಣವು ಪುಣ್ಯತಮವಾಗಿದೆ. ಪ್ರತಿ ತಿಂಗಳು ಎರಡು ರಾಶಿಗೆ ಚಲಿಸುವುದು ಗಮನಾರ್ಹವೆನಿಸಿದೆ. ಸೂರ್ಯ ಮಿಥುನ ರಾಶಿಯಿಂದ ಕರ್ಕಾಟಕ ರಾಶಿಗೆ ಸಾಗಿದರೆ ಕರ್ಕಾಟಕ ಸಂಕ್ರಮಣವೆನಿಸುತ್ತದೆ. ಇದು ದಕ್ಷಿಣಾನಯವನ್ನು ಸೂಚಿಸುತ್ತದೆ. ಈ ಕಾಲವನ್ನು ಪಿತೃಯಾನವೆಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಪಿತೃಕಾರ್ಯ ಶ್ರೇಷ್ಠವಾದವು. ಅಂತೆಯೇ ಸೂರ್ಯನು ಧನುರ್ ರಾಶಿಯನ್ನು ಬಿಟ್ಟು ಮಕರ ರಾಶಿಗೆ ಪ್ರವೇಶಿಸಿದರೆ ಈ ಸಂದರ್ಭವನ್ನು ಮಕರ ಸಂಕ್ರಾಂತಿ ಎಂದೇ ಕರೆಯಲಾಗಿದೆ. ಈ ಸಂಧಿಕಾಲದಲ್ಲಿ ಗ್ರಹದೋಷ ಇರುವುದರಿಂದ ಶುಭ ಕಾರ್ಯಗಳಿಗೆ ಪ್ರಶಸ್ತವಲ್ಲ. ಈ ಸಂದರ್ಭದಲ್ಲಿ ಜಪ, ಧ್ಯಾನಗಳು, ಸೂರ್ಯ ಮಂತ್ರವನ್ನು ಪಠಿಸುವುದರಿಂದ ಪುಣ್ಯಾಂಶವು ಲಭಿಸುತ್ತದೆ.

**ಆರೋಗ್ಯ ವರ್ಧಕ :** ಸಂಕ್ರಾಂತಿಯ ಎಳ್ಳು ಬಹು ಪುಷ್ಟಿದಾಯಕ ಹಾಗೂ ಆರೋಗ್ಯವರ್ಧಕ. ಚಳಿಗಾಲದಲ್ಲಿ ದೇಹದ ತೈಲಾಂಶವು ಕಡಿಮೆಯಾಗುವುದರಿಂದ ಶೀತ ಹಾಗೂ ವಾಯು ಸಂಬಂಧಿ ರೋಗಗಳು ಜಾಸ್ತಿಯಾಗುವ ಸಾಧ್ಯತೆಯಿದೆ. ಹಿಂದಿನಿಂದ ರೂಢಿಸಿಕೊಂಡು ಬಂದ ಈ ಸತ್ವಪೂರ್ಣ ಆಹಾರ ದೇಹಧಾರ್ಢ್ಯಕ್ಕೂ ಕಾರಣವಾಗುತ್ತದೆ. ತೈಲಾಂಶ ಎಳ್ಳು, ಕಡಲೇಬೀಜ, ಕೊಬ್ಬರಿಗಳಲ್ಲಿ ಇರುವುದರಿಂದ ಮಲಬದ್ಧತೆ ನಿವಾರಿಸುತ್ತದೆ. ಸಾಮಾನ್ಯವಾಗಿ ಪುಷ್ಯಮಾಸದಲ್ಲಿ (ಜನವರಿ 14 ಅಥವಾ 15) ಬರುವ ಮಕರಸಂಕ್ರಾಂತಿಯನ್ನು ಉತ್ತರಾಯಣ ಪುಣ್ಯಕಾಲ ವೆಂದು ಕರೆಯುತ್ತಾರೆ. ಕೇವಲ ಬದುಕುವುದಕ್ಕೆ ಮಾತ್ರವಲ್ಲ ಸಾಯುವುದಕ್ಕೂ ಪುಣ್ಯಕಾಲ. ಈ ಪುಣ್ಯ ಮುಹೂರ್ತದಲ್ಲಿ ಗಂಗಾದಿ ತೀರ್ಥದಲ್ಲಿ ಲಕ್ಷಾಂತರ ದೈವಭಕ್ತರು ಸ್ನಾನ ಮಾಡುತ್ತಾರೆ. ಈವರೆಗೆ ದಕ್ಷಿಣದತ್ತ ವಾಲಿ ಚಲಿಸುತ್ತಿದ್ದ ಸೂರ್ಯ ಇಂದಿನಿಂದ ಉತ್ತರ ದಿಕ್ಕಿಗೆ ತಿರುಗಿ ಚಲಿಸುತ್ತಾನೆ. (ಆಯನ=ಚಲಿಸುವುದು) ಹೀಗೆ ಸೂರ್ಯಪಥ ಬದಲಾವಣೆಯಿಂದ ನಮ್ಮ ದೇಶದಲ್ಲಿ ಕೊರೆಯುವ ಚಳಿ ಕಡಿಮೆಯಾಗಿ ಹಗಲು ಹೆಚ್ಚು ಸಂಭವಿಸುತ್ತದೆ.

**ಎಳ್ಳು ಹಂಚುವುದು (ಬೀರುವುದು):** ಇದೊಂದು ಸಂಸ್ಕೃತಿ ನಿಷ್ಠ ಆಚರಣೆ. ಇದರಲ್ಲಿ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸೌಹಾರ್ದತೆಯನ್ನು ಹೆಚ್ಚಿಸುವ ಗುಣವಿದೆ.

ಈಗೀಗ ದೇಸಿ ತಳಿಯ ರಾಸುಗಳು ಕಣ್ಮರೆಯಾಗುತ್ತಿವೆ. ಹಳ್ಳಿಗಳಿಗೆ ಹೋದರೆ ಬರೀ ಸೀಮೆ ಹಸುಗಳೇ ಕಣ್ಣಿಗೆ ರಾಚುತ್ತವೆ.  ಎತ್ತು, ಎಮ್ಮೆ, ಹೋರಿಗಳೇ ಇಲ್ಲ. ಅಂದಮೇಲೆ ಸಿಂಗಾರ ಎಲ್ಲಿಂದ ಬಂತು? ಬಂಗಾರ ಎಲ್ಲಿಂದ ಬಂತು? ಮಳೆ ಇಲ್ಲದೆ ಕೆರೆ ಬಾವಿಗಳು ಬತ್ತಿವೆ. ನೆಡುತೋಪುಗಳಿಲ್ಲ. ಈ ಎಲ್ಲಾ ಇಲ್ಲಗಳ ನಡುವೆ ದೇಸಿ ತಳಿಗಳು ಬದುಕುಳಿಯುವುದಾದರೂ ಹೇಗೆ? ಬರೀ ಎಳ್ಳಿಗಷ್ಟೇ ಸೀಮಿತವಾಗುತ್ತಿದ್ದೇವೆ?





ಜನವರಿ ತಿಂಗಳು ರೈತಾಪಿ ವರ್ಗದವರ ವಿರಾಮದ ಕಾಲ. ಭತ್ತ ಒಕ್ಕಲು ಮಾಡುವುದು, ರಾಶಿ ಹಾಕಿ ಪೂಜಿಸಿ ಬಂದ ಬಡಬಗ್ಗರಿಗೆ ಯಥಾಶಕ್ತಿ ದಾನ ಮಾಡುವ ಪದ್ಧತಿ ಹಳ್ಳಿಗಳಲ್ಲಿದೆ. ಬಿಡುವಿನ ಈ ಸಮಯದಲ್ಲಿ ಹೆಚ್ಚಾಗಿ ಜಾತ್ರೆಗಳ ಕಾಲ ಒದಗಿ ಬರುತ್ತದೆ. ಶುಭಕರವಾದ ಈ ಹಬ್ಬವು ಮನಸ್ಸಿನ ಕೆಟ್ಟತನವನ್ನು, ದ್ವೇಷಾಸೂಯೆಯನ್ನು ನಿವಾರಿಸುತ್ತದೆಂಬ ನಂಬಿಕೆ ಜನಪದರರದು. ತಮಿಳುನಾಡಿನಲ್ಲಿ ಪೊಂಗಲ್ ಎಂದು ವಿಶಿಷ್ಟವಾಗಿ ಸೂರ್ಯ ಆರಾಧನೆ ನಡೆಸಲಾಗುತ್ತದೆ. ಆಂಧ್ರದಲ್ಲಿ ಈ ದಿನ ರಾವಣನ ಸಂಹಾರದ ದಿನ. ಕೇರಳದಲ್ಲಿ ಮಕರಜ್ಯೋತಿಯ ವಿಶೇಷ.

ಭೋಗಿ, ಕನು ಹಬ್ಬ ಎಂದು ಈ ಹಬ್ಬವನ್ನು ಆಚರಿಸುವುದುಂಟು. ಇದು ಸುಗ್ಗಿಯನ್ನು ಸಾರುವ ಹಬ್ಬ, ದ್ರಾವಿಡ ಸಂಪ್ರದಾಯಸ್ಥರಿಗೆ ಇದೊಂದು ಸಂಭ್ರಮದ ದಿನ.

ಸಂಸಾರದ ಬೇಗೆಯಲ್ಲಿ ಬೆಂದ ಮನಸ್ಸಿಗೆ ಮುದವನ್ನು ನೀಡುವ ದಿನಗಳೇ ಹಬ್ಬಗಳು. ಬದುಕಿಗೆ ಹೊಸ ಚೈತನ್ಯವನ್ನು ತುಂಬುವ ಇಂತಹ ಹಬ್ಬಗಳು ಇಲ್ಲದೇ ಹೋಗಿದ್ದರೆ, ಸಂಸಾರದ ಏಕತಾನತೆಯಲ್ಲಿ ಜಿಗುಪ್ಸೆಗೊಂಡು ಅದೆಷ್ಟು ಜನರು ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದರೋ ಏನೋ. ಕಾವ್ಯಕ್ಕೆ ನವನವೋನ್ಮೇಷಶಾಲಿನಿ ಎನ್ನುತ್ತಾರೆ. ಈ ಮಾತು ಅಕ್ಷರಶಃ ಹಬ್ಬಗಳಿಗೂ ಅನ್ವಯಿಸುತ್ತದೆಯೆಂದರೆ ಅತಿಶಯೋಕ್ತಿಯೇನಲ್ಲ.

ಸಂಕ್ರಾಂತಿ ಹಬ್ಬವು ನಿಸರ್ಗದ ಹಬ್ಬವಾಗಿದೆ. ತಮಸೋಮಾ ಜ್ಯೋತಿರ್ಗಮಯ ಕತ್ತಲೆಯಿಂದ ಬೆಳಕಿನ ಕಡೆಗೆ ಪ್ರಯಾಣ ಮಾಡುವ ವೈದಿಕ ಋಷಿಗಳು ಪ್ರಾರ್ಥನೆಯು ಈ ದಿವಸದ ಸಂಕಲ್ಪದ ಪ್ರಯತ್ನದಿಂದ ಪರಂಪರೆಯಲ್ಲಿ ಸಾಕಾರವಾಗುವ ಶಕ್ಯತೆಯಿದೆ.

ಸಂಕ್ರಾಂತಿ ಅಂದರೆ ಸಮ್ಯಕ್+ಕ್ರಾಂತಿ. ಕ್ರಾಂತಿಯಲ್ಲಿ ಪರಿಸ್ಥಿತಿಯ ಪರಿವರ್ತನೆಯ ಆಕಾಂಕ್ಷೆ ಇರುತ್ತದೆ. ಇದು ವಿಚಾರ ಕ್ರಾಂತಿಯಿಂದ ಸಾಧ್ಯ. ಮನುಷ್ಯನು ಈ ದಿನ ಸಂಯುಕ್ತವಾದ ಸಂಕಲ್ಪ ಮಾಡಬೇಕು. ಯಾವುದೇ ಮಹಾನ್ ಕಾರ್ಯಕ್ಕೆ ಸಂಘಟನೆಯ ಅವಶ್ಯವಿದೆ. ಸಂಘದಲ್ಲಿ ವಿಶಿಷ್ಟ ರೀತಿಯ ಶಕ್ತಿ ನಿರ್ಮಾಣವಾಗುತ್ತದೆ.

(ವಿವಿಧ ಮೂಲಗಳಿಂದ)

# ಜನಪದರ ಆಚರಣೆಗಳಲ್ಲಿ
# 'ರಥ'



ಚಿತ್ರ ಲೇಖನ :
**ಅರ್ಚನಾ ಹೆಗಡೆ**

**ಭಾ**ರತೀಯ ದೇವಾಲಯಗಳ ಕಲ್ಪನೆಯ ಪ್ರಕಾರ ದೇವಾಲಯಗಳಲ್ಲಿ ಸ್ಥಿರ ಮೂರ್ತಿಗಳಿರುತ್ತವೆ, ಚರಮೂರ್ತಿಗಳನ್ನು ಚಲಿಸಬಹುದಾದ ರಥಗಳಲ್ಲಿ ಕೂರಿಸಿ ಮೆರೆಸುವ ಸಂದರ್ಭ ಕಾಣಬರುತ್ತದೆ. ಹಲವು ದೈವಗಳನ್ನು ಪೂಜಿಸುವ ಭಾರತೀಯ ಸಂಸ್ಕೃತಿಯಲ್ಲಿ ದೇವರನ್ನು ಆರಾಧಿಸುವ ಹತ್ತು ಹಲವು ಸಲಕರಣೆಗಳಲ್ಲಿ 'ರಥ'ಗಳಿಗೆ ಒಂದು ಪ್ರಮುಖ ಸ್ಥಾನವಿದೆ.

**ರಥಗಳ ಇತಿಹಾಸ:**

ಕ್ರಿ.ಪೂ.3ನೇ ಶತಮಾನದಲ್ಲಿ ಮೆಸಪಟೊಮಿಯಾ ಸಂಸ್ಕೃತಿಯಲ್ಲಿ ಎರಡು ಗಾಲಿಯ ರಥಗಳಿದ್ದುವೆಂದು ಗುರುತಿಸಲಾಗಿದೆ. ಕ್ರಮೇಣ ನಾಲ್ಕು ಚಕ್ರಗಳ ರಥಗಳು ಬಳಕೆಗೆ ಬಂದವು. ಆ ಕಾಲದಲ್ಲಿ ಯುದ್ಧಕ್ಕೆ ಆಯುಧ, ಸಾಮಗ್ರಿಗಳನ್ನು ಸಾಗಿಸಲೂ ಸಹ ರಥಗಳ ಬಳಕೆ ಇತ್ತೆಂದು ಇತಿಹಾಸ ಹೇಳುತ್ತದೆ. ಭಾರತದಲ್ಲಿ ಉತ್ತರಭಾರತದಲ್ಲಿ 2ನೇ ಶತಮಾನದಲ್ಲಿ ಹಗುರ ಚಕ್ರಗಳುಳ್ಳ ರಥಗಳ ಬಳಕೆ ಇದ್ದವೆಂದು ತಿಳಿದುಬರುತ್ತದೆ. ರಥಗಳಿಗೆ ಸಂಬಂಧಿಸಿದಂತೆ ಹರಪ್ಪಾ–ಮೆಹಂಜೋದಾರೊಗಳ ಸಂಶೋಧನೆಗಳಲ್ಲಿ ಅನೇಕ ಕುರುಹುಗಳು ದೊರೆತಿವೆ. ಹಂಸ, ಪಕ್ಷಿಗಳ ರೂಪದ ರಥಗಳು, ಮಣ್ಣಿನ ಚಕ್ರಗಳು, ಆಟದ ಬಂಡಿಗಳು ಆ ಕಾಲದ ಕುರುಹುಗಳಲ್ಲಿ ದೊರಕಿವೆ.

**ರಥದ ಚಕ್ರಕ್ಕೆ ಬಳಸುವ ವೃಕ್ಷಗಳ ಬಗ್ಗೆ:**

ಅಡವಿಯಲ್ಲಿರುವ ಎಲ್ಲ ಜಾತಿಯ ವೃಕ್ಷಗಳನ್ನೂ ರಥದ ಚಕ್ರಕ್ಕೆ ಬಳಸುವುದಿಲ್ಲ. ಧಾರ್ಮಿಕವಾಗಿ ಮತ್ತು ಬಾಳಿಕೆಯ ದೃಷ್ಟಿಯಿಂದಲೂ ಕೆಲವೇ ಆಯ್ದ ಜಾತಿಯ ವೃಕ್ಷಗಳನ್ನು ಮಾತ್ರ ಚಕ್ರದ ತಯಾರಿಕೆಗೆ ಬಳಸಲಾಗುತ್ತದೆ. ಹೆಚ್ಚಾಗಿ ಬಳಸುವ ವೃಕ್ಷಗಳೆಂದರೆ ನಾಲ,ಜಂಬುಕ,ಸಾರ, ಸರಲ,ಬುದ್‌ಬುದ,ಖದಿರ, ಮತ್ತು ಶಮಿ ಮೊದಲಾದ ಗಟ್ಟಿಜಾತಿಯ ಮರಗಳನ್ನು ಬಳಸುವ ರೂಢಿ ಇದೆ. ಪಕ್ಷಿಗಳಿಗೆ ಆಶ್ರಯ ನೀಡುವ ಪೊಟರೆಯುಳ್ಳ ಮರ, ಬಳ್ಳಿ ಸುತ್ತಿದ ಮರ, ಬೆಂಕಿ ಬಿದ್ದಿರುವ ಅಥವಾ ಹುಳು ಹಿಡಿದ ಮರಗಳು ಚಕ್ರ ತಯಾರಿಕೆಗೆ ಬಳಸಬಾರದು, ಅಂತಹ ಮರಗಳು ಅಯೋಗ್ಯವಾದವುಗಳೆಂದು ಹೇಳಲಾಗಿದೆ. ಇಂತಹ ಮರಗಳನ್ನು ಚಕ್ರಗಳಿಗೆ, ಯಾವುದೇ ಶಿಲ್ಪ ರಚನೆಗೂ ಬಳಸುವುದಿಲ್ಲ.

**ರಥದ ರಚನೆ:**

ರಥದ ರಚನೆ, ರಥದ ಮೇಲಿನ ಕೆತ್ತನೆಗಳಲ್ಲಿ ಅನೇಕ ಬಗೆಯ ಚಿತ್ರಗಳನ್ನು ರಚಿಸುವ ಪದ್ಧತಿಯಿದೆ. ಸಿಂಹ,ಆನೆ,ಮೊಸಳೆ ಮುಂತಾದ ಚಿತ್ರಗಳು, ರಾಕ್ಷಸರು, ಯಕ್ಷರು,ನಾಗರು ಮೊದಲಾದ ಕೆತ್ತನೆಗಳು ಇರಬೇಕು. ಅಲಂಕಾರಕ್ಕಾಗಿ ಈ ಎಲ್ಲ ವಿಗ್ರಹಗಳನ್ನು ರಥದ ಅಡಿಭಾಗವೊಂದನ್ನು ಬಿಟ್ಟು ಉಳಿದೆಲ್ಲ ಕಡೆಗಳಲ್ಲಿ ಕೆತ್ತಿಸಬೇಕು. ರಥಕ್ಕೆ ಒಂದರಿಂದ ಒಂಬತ್ತರವರೆಗೆ ಅಂತಸ್ತುಗಳಿರುತ್ತವೆ. ಹೀಗೆ ಎಲ್ಲ ಅಂತಸ್ತುಗಳಲ್ಲಿ ಮುಂದುವರೆದ ಈ ರಚನೆ ವಿಸ್ತಾರದಲ್ಲಿ ಕ್ರಮೇಣ ಕಡಿಮೆಯಾಗುತ್ತ ಬಂದು. ಅಂತಿಮವಾಗಿ ಶಿಖರವನ್ನು ಮುಟ್ಟುತ್ತದೆ. ದೇವರ ಉತ್ಸವಗಳಿಗೆ ಬಳಸುವ ರಥಗಳು 'ಆಗಮಶಾಸ್ತ್ರ'ದ ಪ್ರಕಾರವೇ ನಿರ್ಮಿತವಾಗಿರಬೇಕೆಂಬ ನಿಯಮವಿದೆ. ರಥದ ಕೆಳಭಾಗದ ಪಟ್ಟಿಕೆಗಳ ಸುತ್ತಲೂ ಬ್ರಹ್ಮ,ವಿಷ್ಣು, ಮಹೇಶ್ವರ,ಷಣ್ಮುಖ,ಗಣಪತಿ,ದುರ್ಗಾ ಮೊದಲಾದ ದೇವ–ದೇವತೆಗಳನ್ನು ಅವರವರ ವಾಹನಗಳ ಸಮೇತ, ವಸ್ತ್ರಾಭಾರಣ ಅಲಂಕಾರದೊಡನೆ ಅಳವಡಿಸಬೇಕೆಂಬ ನಿಯಮವಿದೆ. ಇವುಗಳಲ್ಲದೇ, ತೋರಣಗಳು, ಎಲೆ, ಹೂ–ಬಳ್ಳಿಗಳು ಅಲಂಕಾರಕ್ಕೆ ರಚನೆಯಾಗಿರಬೇಕು. ತೇರಿನ ಮೇಲ್ಭಾಗದಲ್ಲಿ ಗಗನ ದೇವತೆಗಳು, ಸುಂದರ ಸ್ತ್ರೀಯರ ಕೆತ್ತನೆ, ಕೊಳಲು,ಮೃದಂಗ ಮುಂತಾದ ಸಂಗೀತ ವಾದನ ಚಿತ್ರಗಳು, ದೇವತೆಗಳನ್ನು ಸುತ್ತುವರಿದ ಭಕ್ತಕೋಟಿ, ದ್ವಾರಪಾಲಕರು, ಯಕ್ಷ–ಕಿನ್ನರರು, ಗರುಡ ಇತ್ಯಾದಿ ಚಿತ್ರಗಳ ರಚನೆ ರಥದಲ್ಲಿರಬೇಕು. ವೈವಿಧ್ಯ ರಥಗಳಲ್ಲಿ ಪುಷ್ಪಕರಥ, ಗಂಧರ್ವರಥ, ವಿಮಾನರಥ, ಸೋಮ್ಯರಥ, ಕಾಂತರಥ, ವಿದ್ಯಾಧರ ರಥ..ಹೀಗೆ ಅನೇಕ ಬಗೆಯನ್ನು ವಿವರಿಸಲಾಗಿದೆ.

**ಧಾರ್ಮಿಕ ಕ್ಷೇತ್ರಗಳಲ್ಲೂ ರಥೋತ್ಸವಗಳು ಪ್ರತೀ ವರ್ಷ ಜರುಗುತ್ತವೆ. ಎಲ್ಲ ಪ್ರಮುಖ ದೇವಾಲಯಗಳಲ್ಲೂ ರಥಗಳಿರುವುದನ್ನು ಕಾಣುತ್ತೇವೆ. ತೇರನ್ನು ಎಳೆಯುವ ರಸ್ತೆಯನ್ನು 'ರಥಬೀದಿ' ಎನ್ನುತ್ತಾರೆ.**



**ಜಾತ್ರೆ–ಉತ್ಸವಗಳಲ್ಲಿ ತೇರು ಕಟ್ಟುವ ಬಗೆ:**

ಜಾತ್ರೆ, ಧಾರ್ಮಿಕ ಉತ್ಸವಗಳಲ್ಲಿ ತೇರನ್ನು ಸಿದ್ಧಪಡಿಸುವ ಪದ್ಧತಿಯು ಆಯಾ ಪ್ರದೇಶಗಳಿಗೆ ಅನುಗುಣವಾಗಿರುತ್ತದೆ. ರಥ ಎಳೆಯಲು ಕತ್ತಾಳೆ ನಾರಿನ ಹಗ್ಗ, ಸೆಣಬುನಾರಿನ ಹಗ್ಗವನ್ನು ಬಳಸುವ ರೂಢಿಯಿದೆ. ತೇರಿನ ಮೇಲ್ಭಾಗದಲ್ಲಿ ಬಿದಿರಿನ ಗೋಳಾಕಾರದ ಶಿಖರವನ್ನು ಮಾಡಿ, ಅದರ ಮೇಲೆ ವರ್ಣದ ಬಟ್ಟೆಯನ್ನು ಅಳವಡಿಸುತ್ತಾರೆ. ಅದಕ್ಕೆ ಬಣ್ಣದ ಬಾವುಟಗಳನ್ನು ಸುತ್ತಲೂ ಅಲಂಕರಿಸುವ ಪದ್ಧತಿ ಇದೆ. ಅಂತಿಮವಾಗಿ ಮುಖ್ಯ ಕಳಸವನ್ನು ರಥದ ಹೊಕ್ಕಳದ ಗೂಟಕ್ಕೆ ಭದ್ರವಾಗಿ ಜೋಡಿಸಲಾಗುತ್ತದೆ.ರಥದ ತುತ್ತ ತುದಿಗಿರುವ ಕಳಸಗಳು ಒಂದರಿಂದ ಐದರ ತನಕ ಇರಬಹುದು. ಇವು ಹಿತ್ತಾಳೆ ಲೋಹದ್ದಾಗಿರುತ್ತವೆ. ರಥದ ಒಳಗಡೆ, ದೇವರನ್ನು ಕೂರಿಸುವ ಪೀಠವನ್ನು ಮೊದಲ ಅಂತಸ್ತಿನಲ್ಲಿ ನಡುಭಾಗದಲ್ಲಿ ನಿರ್ಮಿಸುತ್ತಾರೆ. ತೇರಿನ ವಸ್ತ್ರಾಲಂಕಾರದ ವೈಶಿಷ್ಟ್ಯಗಳು ಆಯಾ ಪ್ರದೇಶಗಳಿಗೆ ತಕ್ಕಂತಿರುತ್ತವೆ.



ಪ್ರತಿಯೊಂದು ಧಾರ್ಮಿಕ ಕ್ಷೇತ್ರಗಳಲ್ಲೂ ರಥೋತ್ಸವಗಳು ಪ್ರತೀ ವರ್ಷ ಜರುಗುತ್ತವೆ. ಎಲ್ಲ ಪ್ರಮುಖ ದೇವಾಲಯಗಳಲ್ಲೂ ರಥಗಳಿರುವುದನ್ನು ಕಾಣುತ್ತೇವೆ. ತೇರನ್ನು ಎಳೆಯುವ ರಸ್ತೆಯನ್ನು 'ರಥಬೀದಿ' ಎನ್ನುತ್ತಾರೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ರಥಗಳ ಪಾತ್ರ ಪ್ರಮುಖವು, ವೈಶಿಷ್ಟ್ಯಪೂರ್ಣವೂ ಆಗಿದೆ.







ಕರಾವಳಿ ಉತ್ಸವ –2016 :

# ಸಾಂಸ್ಕೃತಿಕ ಹಬ್ಬದ ಮೆರಗು

ಚಿತ್ರ ಲೇಖನ :
ನಾಗರಾಜ್ ಹರಪನಹಳ್ಳಿ

**ಕಾ**ರವಾರದಲ್ಲಿ ಈಚೆಗೆ ನಡೆದ ಕರಾವಳಿ ಉತ್ಸವ ಜಿಲ್ಲೆಯ ಜನತೆಗೆ ವಿಭಿನ್ನ ಮನೋರಂಜನೆಯನ್ನು ನೀಡುವಲ್ಲಿ ಯಶಸ್ವಿಯಾಯಿತು. ಎಲ್ಲಾ ವರ್ಗದ ಪ್ರವಾಸಿಗರನ್ನು ಸೆಳೆಯುವ ಈ ಉತ್ಸವ ಜಿಲ್ಲೆಯ ಜನರ ಜೊತೆ ಹೊರ ಜಿಲ್ಲೆಯ ಜನರನ್ನು ಸೆಳೆಯುವುದು ವಿಶೇಷ. ಪ್ರವಾಸೋದ್ಯಮ ಪ್ರೋತ್ಸಾಹ ಮತ್ತು ಮನೋರಂಜನೆಯನ್ನು ಗುರಿಯಾಗಿಸಿಕೊಂಡು ಆಚರಿಸುತ್ತಾ ಬರಲಾಗಿರುವ ಕರಾವಳಿ ಉತ್ಸವಕ್ಕೆ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭೆಗಳನ್ನು ಕರೆತಂದು ವೇದಿಕೆ ಕಲ್ಪಿಸುತ್ತಾ ಎಲ್ಲ ಮನೋಧರ್ಮದ ಸಂಗೀತ– ಸಾಂಸ್ಕೃತಿಕ ಪ್ರಿಯರ ಮನ ತಣಿಸಲಾಗುತ್ತದೆ. ಕಲೆ, ಫಲಪುಷ್ಪ ಪ್ರದರ್ಶನ, ನಾಡಿನ ಖ್ಯಾತ ಕಲಾವಿದರ ಕಲಾಕೃತಿಗಳ ಪ್ರದರ್ಶನದ ಜೊತೆಗೆ ಪ್ಯಾರಾ ಸೇಲಿಂಗ್ ಮತ್ತು ಪ್ಯಾರಾ ಗ್ಲೈಡಿಂಗ್ ಹಾರಾಟವನ್ನು ಸಹ ಈ ಸಲ ಕಲ್ಪಿಸಲಾಗಿತ್ತು. ಜೊತೆಗೆ ಶ್ವಾನ ಪ್ರದರ್ಶನ ಹಾಗೂ ಮ್ಯಾರಥಾನ್ ಓಟವನ್ನು ಕಾರವಾರ ರವೀಂದ್ರನಾಥ ಟಾಗೋರ್ ಬೀಚ್‌ನಲ್ಲಿ ಏರ್ಪಡಿಸಿದ್ದು, ಅದರಲ್ಲಿ ವಯಸ್ಸಿನ ಬೇಧ ಮರೆತು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದು, ಮ್ಯಾರಥಾನ್ ಓಟವನ್ನು ನಟಿ ಐಂದ್ರಿತಾ ರೇ , ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಓ.ಪಿ.ಜೈಶಾ ಉದ್ಘಾಟಿಸಿದ್ದು ವಿಶೇಷ ಆಕರ್ಷಣೆಯಾಗಿತ್ತು.

ಕರಾವಳಿ ಉತ್ಸವ–2016 ಕಾರವಾರದ ಕಡಲತೀರದ ಮಯೂರವರ್ಮ ವೇದಿಕೆಯಲ್ಲಿ ಅದ್ದೂರಿಯಿಂದ ನಡೆಯಿತು. ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯಗಳ ಖಾತೆಯ ಸಚಿವ ಆರ್.ವಿ.ದೇಶಪಾಂಡೆ ಕರಾವಳಿ ಉತ್ಸವವನ್ನು ಡಿಸೆಂಬರ್ 10 ರಂದು ದೀಪ ಬೆಳಗಿ ಉದ್ಘಾಟಿಸಿದರು.

ಪ್ರವಾಸೋದ್ಯಮ ಅಭಿವೃದ್ಧಿಗೆ ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ಕರಾವಳಿ ಉತ್ಸವದಿಂದಾಗಿ ಹಲವು ಸಾಂಸ್ಕೃತಿಕ ಪ್ರತಿಭೆಗಳನ್ನು ಜನತೆಯ ಬಳಿ ಕರೆತರಲಾಗುತ್ತಿದೆ. ಆ ಮೂಲಕ ಕಲೆ ಮತ್ತು ಸಂಸ್ಕೃತಿಗೆ ಒತ್ತು ನೀಡಲಾಗುತ್ತಿದೆ. ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಈ ಉತ್ಸವವನ್ನು ಸಂಘಟಿಸುತ್ತಾ ಬರಲಾಗಿದೆ.

ಉತ್ತರ ಕನ್ನಡವೂ ಸೇರಿದಂತೆ ರಾಜ್ಯ ಕರಾವಳಿಯ ಜಿಲ್ಲೆಗಳ 43 ಬೀಚ್ ಹಾಗೂ ನಾಲ್ಕು ಐಲ್ಯಾಂಡ್‌ಗಳನ್ನು ಪ್ರವಾಸಿತಾಣಗಳನ್ನಾಗಿ ಅಭಿವೃದ್ಧಿಪಡಿಸಲು ರೂಪರೇಶೆಗಳಿವೆ. ಮಧ್ಯಮ ವರ್ಗ ಮತ್ತು ಕೆಳವರ್ಗಕ್ಕೂ ಸಹ ಪ್ರವಾಸೋದ್ಯಮವನ್ನು ತಲುಪಿಸಬೇಕಿದೆ. 'ಎಲ್ಲರಿಗೂ ಪ್ರವಾಸೋದ್ಯಮ' ಎಂಬ ಧೋರಣೆ ಸರ್ಕಾರದ್ದು. ಪ್ರವಾಸೋದ್ಯಮದಿಂದಲೇ ಉದ್ಯೋಗ ಸೃಷ್ಟಿ ಸಾಧ್ಯ ಎಂದು ಈ ಸಂದರ್ಭದಲ್ಲಿ ಸಚಿವ ದೇಶಪಾಂಡೆ ನುಡಿದರು. ಕಾರವಾರ ಶಾಸಕ ಸತೀಶ್ ಸೈಲ್ ಮತ್ತು ಕುಮಟಾ ಶಾಸಕಿ ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆ ಶಾರದಾ ಶೆಟ್ಟಿ ಉತ್ಸವದಲ್ಲಿ ಭಾಗವಹಿಸಿದ್ದರು.

ಮೂರು ದಿನಗಳ ಕಾಲ ನಡೆದ ಕರಾವಳಿ ಉತ್ಸವದಲ್ಲಿ ಬೆಳಗಿನಿಂದಲೇ ಕಾರ್ಯಕ್ರಮಗಳು ಜನರನ್ನು ತನ್ನತ್ತ ಸೆಳೆದುಕೊಂಡವು. ಫಲಪುಷ್ಪ ಪ್ರದರ್ಶನಕ್ಕೆ ಸೀಬರ್ಡ್ ನೌಕಾನೆಲೆಯ ಕರ್ನಾಟಕ ಕಮಾಂಡರ್ ಕೆ.ಜೆ.ಕುಮಾರ್ ಸಚಿವರ ಜೊತೆ ಸೇರಿ ಚಾಲನೆ ನೀಡಿದ್ದರು. ನಂತರ ಜಿಲ್ಲಾ ರಂಗಮಂದಿರದಲ್ಲಿ ಸ್ಥಳೀಯ ಕಲಾವಿದರು ಭರತನಾಟ್ಯ, ಹಿಂದೂಸ್ತಾನಿ ಗಾಯನ, ಸುಗಮ ಸಂಗೀತ ಹಾಗೂ ಜಾನಪದ ನೃತ್ಯಗಳ ಮೂಲಕ ಜನರನ್ನು ರಂಜಿಸಿದರು. ಮಯೂರವರ್ಮ ವೇದಿಕೆಯಲ್ಲಿ ರಾತ್ರಿ ಬಾಲಿವುಡ್ ಗಾಯಕ ಶಾನ್ ಸತತ ಎರಡೂವರೆ ತಾಸು ಹಿಂದಿ ಹಾಗೂ ಒಂದೆರಡು ಕನ್ನಡ ಹಾಡುಗಳನ್ನು ಹಾಡಿ ರಂಜಿಸಿದರು.

ಮಯೂರ ವರ್ಮ ವೇದಿಕೆಯಲ್ಲಿ ಧಾರವಾಡದ ಸುಜಾತ ಗುರವ ಕಮ್ಮಾರ ಹಿಂದೂಸ್ತಾನಿ ಹಾಡಿ ರಂಜಿಸಿದರು. ಪುಣೆಯ ಸುರೇಶ್ ಡಿ.ಪಟ್ಕಿ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಪ್ರಸ್ತುತಪಡಿಸಿದರು. ಬೆಂಗಳೂರಿನ ಶಿವಲೀಲಾ ಟ್ರಸ್ಟ್‌ನ ಎಂ.ಎಸ್.ಶಿವಲೀಲಾ ತಂಡ ಭರತನಾಟ್ಯ ಹಾಗೂ ನೃತ್ಯ ರೂಪಕ ಪ್ರದರ್ಶಿಸಿತು. ಉಡುಪಿ ಭಾರ್ಗವಿ ಆರ್ಟ್ಸ್‌ನವರು ನೃತ್ಯ ವೈಭೋಗ ಪ್ರದರ್ಶಿಸಿದರು.

**ಮ್ಯಾರಥಾನ್ ಓಟ :** ಎರಡನೇ ದಿನ ಬೆಳಿಗ್ಗೆ ಉತ್ಸವದಲ್ಲಿ ಮೊದಲ ಬಾರಿಗೆ ಸಂಘಟಿಸಿದ್ದ ಮ್ಯಾರಥಾನ್ ಓಟವನ್ನು ನಟಿ ಐಂದ್ರಿತಾ ರೇ , ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಓ.ಪಿ.ಜೈಶಾ ಉದ್ಘಾಟಿಸಿದರು. ವಯಸ್ಸಿನ ಬೇಧ ಮರೆತು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಮ್ಯಾರಥಾನ್ ಯಶಸ್ವಿಯಾಯಿತು. ಪ್ಯಾರಾ ಸೇಲಿಂಗ್ ಮತ್ತು ಪ್ಯಾರಾ ಗ್ಲೈಡಿಂಗ್ ಸಹ ಕಡಲತೀರಕ್ಕೆ ಬಂದ ಪ್ರವಾಸಿಗರನ್ನು ಆಕರ್ಷಿಸಿದವು. ಮೂರು ದಿನವೂ ಬೆಳಿಗ್ಗೆ ಮತ್ತು ಸಂಜೆ ನಡೆದ ಪ್ಯಾರಾ ಗ್ಲೈಡಿಂಗ್‌ನಲ್ಲಿ ಹಲವು ಸಾಹಸಿಗರು ಭಾಗವಹಿಸಿದರು. ಪ್ಯಾರಾ ಸೇಲಿಂಗ್‌ನ್ನು ನೂರಾರು ಜನ ಅನುಭವಿಸಿದರು. ಜಲಸಾಹಸ ಮತ್ತು ಜಲ ಪ್ರಯಣಕ್ಕೆ ಈ ಸಲ ವಿಶೇಷ ಆದ್ಯತೆ ಸಿಕ್ಕಿತ್ತು.

ಸಂಜೆ ಆಗುತ್ತಿದ್ದಂತೆ ಮಯೂರ ವರ್ಮ ವೇದಿಕೆಯಲ್ಲಿ ಸುಗಮ ಸಂಗೀತ, ಹಿಂದೂಸ್ತಾನಿ ಗಾಯನ, ಸಾಂಸ್ಕೃತಿಕ ನೃತ್ಯ ತಂಡಗಳ ಪ್ರತಿಭೆಗೆ ವೇದಿಕೆ ತೆರೆದುಕೊಳ್ಳುತ್ತಿತ್ತು. ಚಿಟ್ಪಾಣಿ ರಾಮಚಂದ್ರ ಹೆಗಡೆ ಈ ಸಲ ಯಕ್ಷಗಾನವನ್ನು ಸಹ ಅಭಿನಯಿಸಿ ಹಲವರ ಮನಗೆದ್ದರು. ರಾತ್ರಿ ಹತ್ತು ದಾಟುತ್ತಿದ್ದಂತೆ ಸಾಧು ಕೋಕಿಲ ಹಾಗೂ ಅವರ ತಂಡದ ಸಂಗೀತ ರಾತ್ರಿ ಪ್ರಾರಂಭವಾಯಿತು.

**ಕಡಲ ದಂಡೆಗೆ ಬಂದ ಸ್ಯಾಂಡಲ್ ವುಡ್ :**

ಕರಾವಳಿ ಉತ್ಸವ 2016 ಎರಡನೇ ದಿನ ಮಯೂರ ವರ್ಮವೇದಿಕೆಯಲ್ಲಿ ಕನ್ನಡದ ಸ್ಯಾಂಡಲ್‌ವುಡ್ ನಟ–ನಟಿಯರು ಮತ್ತು ಕನ್ನಡದ ಖ್ಯಾತಗಾಯಕರು ಹಾಡಿ ಕುಣಿದು ಪ್ರೇಕ್ಷಕರನ್ನು, ಯುವಕ ಯುವತಿಯರನ್ನು ರಂಜಿಸಿದರು. ನಟ, ನಿರ್ದೇಶಕ,




ಸಂಗೀತ ಸಂಯೋಜಕ ಸಾಧು ಕೋಕಿಲ ಮಧುರ ಹಾಡುಗಳನ್ನು, ಕನ್ನಡ ಭಾವಗೀತೆಗಳನ್ನು ಹಾಡಿ ತಾವೊಬ್ಬ ಅಪ್ಪಟ ಕಲಾವಿದ, ಹಾಡುಗಾರ ಎಂಬುದನ್ನು ಸಾಬೀತುಪಡಿಸಿದರು.

ಜಿ.ಎಸ್.ಶಿವರುದ್ರಪ್ಪ ಅವರ ನಿನಗೆ ನೆಲ, ನಿನಗೆ ಆಕಾಶ.....ನಿನಗೆ ಕನಸು, ಹಾಗೂ 'ಕಾಣದ ಕಡಲಿಗೆ ಹಂಬಲಿಸಿದೆ ಮನ, ಕಾಣದ ಕಡಲಿನ ಮೊರೆತದ ಜೋಗುಳ ಒಳಗಿವಿಗಿಂದು ಕೇಳುತಿದೆ. ನನ್ನ ಕಲ್ಪನೆಯೂ ಕಡಲನು ಚಿತ್ರಿಸಿ, ಚಿಂತಿಸಿ ಸುಯ್ಯುತಿದೆ.. ಸಾವಿರ ಹೊಳೆಗಳು ತುಂಬಿ ಹರಿದರೂ ಒಂದೇ ಸಮನಾಗಿ ಇಹುದಂತೆ....ಹಾಡು ಕಾವ್ಯ ಪ್ರಿಯರನ್ನು ರಂಜಿಸಿತು.

ಗಾಯಕಿಯರಾದ ಚೈತ್ರಾ –ಉಷಾ ಕೋಕಿಲಾ ಸಹ ಹಾಡಿ ರಂಜಿಸಿದರು.

ಸಾಂಸ್ಕೃತಿಕ ಉತ್ಸವಗಳು ಮನೆ– ಮನಗಳನ್ನು ಬೆಸೆಯುತ್ತವೆ. ಸ್ವಾಸ್ಥ್ಯಪೂರ್ಣ ಸಮಾಜಕ್ಕೆ ಸಾಂಸ್ಕೃತಿಕ ಉತ್ಸವಗಳು ಸಹಕಾರಿ . ಮೂರು ದಿನಗಳ ಕಾಲ ನಡೆದ ಕರಾವಳಿ ಉತ್ಸವ ಜನಮನ ಗೆಲ್ಲುವಲ್ಲಿ ಯಶಸ್ವಿಯಾಯಿತು.



### ಡಚ್ ಚಿತ್ರಗಾರ ರಾಬರ್ಟ್ ಗೀಸಿಂಕ್ ಇನ್ನು ಬರಿ ನೆನಪು...!

# ಹಂಪಿಯನ್ನು ಕುಂಚದಲ್ಲಿ ಮರುಸೃಷ್ಟಿಸಿದ ಅಪರೂಪದ ಕಲಾವಿದ



ರಾಮಲಿಂಗಪ್ಪ.ಬಿ.ಕೆ
ಹಿರಿಯ ಸಹಾಯಕ ನಿರ್ದೇಶಕರು, ಬಳ್ಳಾರಿ

ಐತಿಹಾಸಿಕ ಹಂಪಿ ಚಿತ್ರಣವನ್ನು ತನ್ನ ಕುಂಚಗಳ ಮೂಲಕ ಸೊಗಸಾಗಿ ಬಿಡಿಸಿ ಪ್ರವಾಸಿಗರ ಮನಗೆದ್ದಿದ್ದ ಖ್ಯಾತ ಚಿತ್ರಕಾರ ಡಚ್ ಮೂಲದ ಹಂಪಿಯ ನಿವಾಸಿ ರಾಬರ್ಟ್ ಗೀಸಿಂಕ್ ಇನ್ನು ನೆನಪು ಮಾತ್ರ.

ಸುಮಾರು 45 ವರ್ಷಗಳ ಹಿಂದೆ ಹಂಪಿಗೆ ಪ್ರವಾಸಿಗರಾಗಿ ಬಂದಿದ್ದ ಡಚ್ ಮೂಲದ ಗೀಸಿಂಕ್ ಅವರು ಭಾರತೀಯ ಜೀವನಶೈಲಿ, ವೈವಿಧ್ಯಮಯ ಸಂಸ್ಕೃತಿಗೆ ಮಾರುಹೋಗಿದ್ದರು ಮತ್ತು ಹಂಪಿಯ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಹಂಪಿಯವರೇ ಆಗಿ ಅಪರೂಪದ ಚಿತ್ರಕಲೆಯ ಮೂಲಕ ದೇಶ–ವಿದೇಶದಾದ್ಯಂತ ಖ್ಯಾತಿಯಾಗಿದ್ದರು.


ಕೆಲ ದಿನಗಳಿಂದ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ರಾಬರ್ಟ್ ಅವರನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ನ.25ರಂದು ಅವರು ನಿಧನರಾದರು. ಅವರು ಬಯಸಿದಂತೆ  ಐತಿಹಾಸಿಕ ಹಂಪಿ ಮಣ್ಣಿನಲ್ಲಿಯೇ ಅವರ ಅಂತ್ಯಸಂಸ್ಕಾರ ನಡೆಯಿತು.

ಡಚ್‌ನವರಾದರು ಅಪ್ಪಟ್ಟ ಕರ್ನಾಟಕದವರಂತೆ ಬದುಕಿದ ರಾಬರ್ಟ್ ಸ್ಥಳೀಯ ಲಂಬಾಣಿ ಮಹಿಳೆ ಜೈನೀ ಬಾಯಿ ಅವರನ್ನು ವಿವಾಹವಾಗಿ ಮಕ್ಕಳಾದ ಪೂಜ, ಸಿಂಧೂ, ಕಿಮ್ಮ, ಅದಿಲ್ ಅವರೊಂದಿಗೆ ಹಂಪಿಯ ಎಂ.ಪಿ.ಪ್ರಕಾಶ ನಗರದಲ್ಲಿ ಜೀವನ ನಡೆಸುತ್ತಿದ್ದರು.

ಹಂಪಿಯ ಸುತ್ತಮುತ್ತಲಿನ ಪರಿಸರವನ್ನು ತಮ್ಮ ಕುಂಚದಲ್ಲಿ ಪುನರ್ ಸೃಷ್ಟಿಸಿದ್ದರು. ಹಂಪಿ ಪ್ರವಾಸಕ್ಕೆ ಬಂದ ಬಹುಪಾಲು ವಿದೇಶಿ ಪ್ರವಾಸಿಗರು ರಾಬರ್ಟ್ ಅವರ ಪೇಂಟಿಂಗ್‌ಗಳನ್ನು ಅತ್ಯಂತ ಪ್ರೀತಿಯಿಂದ ಕೊಂಡೊಯ್ಯುತ್ತಿದ್ದರು. ಗೀಸಿಂಕ್ ಅವರಿಗೆ ಸಂಗೀತದ ಗೀಳು ಇತ್ತು. ಸ್ವತಃ ಹಲವು ವಾದ್ಯಗಳನ್ನು ನುಡಿಸುತ್ತಿದ್ದರು. ಗೆಳೆಯರೊಡಗೂಡಿ ಕೆಲವು ಆಲ್ಬಂಗಳನ್ನು ತಂದಿದ್ದರು.

ರಾಬರ್ಟ್ ಕಣ್ಣಲ್ಲಿ ಹಂಪಿ: ರಾಬರ್ಟ್ ಕಣ್ಣಲ್ಲಿ ಹಂಪಿ ಚಿತ್ರಿತವಾಗಿದೆ. ಅದನ್ನೇ ಅವರು ಚಿತ್ರವಾಗಿ ರೂಪಿಸುತ್ತಿದ್ದರು. ಅವರು ಬದಕು ಕೂಡ ಕುಂಚದಿಂದಲೇ ನಡೆಯುತ್ತಿತ್ತು. ಕಲ್ಲು, ಮುಳ್ಳುಗಳೆನ್ನದೇ ಹಂಪಿಯನ್ನು ಸುತ್ತಾಡಿದ್ದಾರೆ. ರಮಣೀಯ ಪರಿಸರ, ಭೂದೃಶ್ಯಗಳು ಅವರ ಮೇಲೆ ಪ್ರಭಾವ ಬೀರಿತ್ತು. ಆರಂಭದಲ್ಲಿ ಹಂಪಿಯ ಹೆಬ್ಬಂಡೆಗಳ ಮೇಲೆ ಕುಳಿತು ಒಬ್ಬರೇ ಶಾಂತಚಿತ್ತರಾಗಿ ಚಿತ್ರಗಳನ್ನು ರಚಿಸುತ್ತಿದ್ದರು.

ಅವರ ಶ್ರದ್ಧೆಗೆ ಮಾರುಹೋದ ಸೀತಾ ಮುಂದೆ ಮದುವೆಯಾಗಿ ಹಂಪಿಯಲ್ಲಿಯೇ ನೆಲೆಸಿದರು. ರಾಬರ್ಟ್



ದೂರದವರೆಗೂ ಕಾಣುವ ದೃಶ್ಯವನ್ನು ತನ್ನ ಕ್ಯಾನ್ವಾಸ್‌ನಲ್ಲಿ ಸೆರೆಹಿಡಿದಿರುವುದನ್ನು ನೋಡಿದರೆ ಎಂತಹವರಿಗೂ ಆಶ್ಚರ್ಯವಾಗದೇ ಇರದು. ರಾಬರ್ಟ್ ಕಲಾ ಕೃತಿಗಳಲ್ಲಿ ನೈಜತೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ ಎಂಬುವುದಕ್ಕೆ ಅವರ ಪ್ರಕೃತಿ ಚಿತ್ರಗಳೇ ಸಾಕ್ಷಿ.

ಕಲ್ಪನೆ ವಿಸ್ತರಿಸಿಕೊಳ್ಳಲು ಹಂಪಿಯ ಬಂಡೆಗಳಲ್ಲಿ ವಾಸ ಮಾಡತೊಡಗಿದರು. ಅದಕ್ಕೆ ಸೀತಾ ಕೂಡ ಸಾಥ್ ನೀಡಿದರು. ಸುಮಾರು 17 ವರ್ಷಗಳ ಕಾಲ ಬಂಡೆಗಳ ಮಧ್ಯೆಯೇ ಇವರು ಬದುಕಿದ್ದಾರೆ. ರಾಬರ್ಟ್ ಅವರು ಪ್ರಕೃತಿ ಸೊಬಗಿನ ಸ್ಥಳವಾದ ವಿರೂಪಾಪುರ ನಡುಗಡ್ಡೆಯಲ್ಲಿದ್ದುಕೊಂಡೇ ಬಹಳಷ್ಟು ಕಲಾಕೃತಿಗಳನ್ನು ರಚನೆ ಮಾಡಿದ್ದರು.


ಇಲ್ಲಿನ ಪ್ರಸಿದ್ಧ ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ದೃಶ್ಯಗಳನ್ನು ರಾಬರ್ಟ್ ಕ್ಯಾನ್‌ವಾಸ್‌ನಲ್ಲಿ ನೋಡಬೇಕು. ಕ್ಯಾಮರಾ ಕಣ್ಣಿಗಿಂತ ಭಿನ್ನವಾಗಿ ಕಾಣುತ್ತದೆ. ಹಂಪಿ ಪರಿಸರದಲ್ಲಿರುವ ಸುಂದರ ದೃಶ್ಯಗಳನ್ನು ಅಚ್ಚೊತ್ತುವ ರೀತಿಯಲ್ಲಿ ತನ್ನ ಕ್ಯಾನ್ವಾಸ್‌ದಲ್ಲಿ ರಚಿಸಿದ್ದರು. ಅದು ಎಷ್ಟರಮಟ್ಟಿಗೆ ಎಂದರೆ ಛಾಯಾಚಿತ್ರಕ್ಕಿಂತಲೂ ಭಿನ್ನ! ರಾಬರ್ಟ್ ಸುಮಾರು ಎರಡೂವರೆ ಕಿಲೋ ಮೀಟರ್ ದೂರದವರೆಗೂ ಕಾಣುವ ದೃಶ್ಯವನ್ನು ತನ್ನ ಕ್ಯಾನ್ವಾಸ್‌ನಲ್ಲಿ ಸೆರೆಹಿಡಿದಿರುವುದನ್ನು ನೋಡಿದರೆ ಎಂತಹವರಿಗೂ ಆಶ್ಚರ್ಯವಾಗದೇ ಇರದು. ರಾಬರ್ಟ್ ಕಲಾ ಕೃತಿಗಳಲ್ಲಿ ನೈಜತೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ ಎಂಬುವುದಕ್ಕೆ ಅವರ ಪ್ರಕೃತಿ ಚಿತ್ರಗಳೇ ಸಾಕ್ಷಿ.

ರಾಬರ್ಟ್ ಅವರು ಒಂದು ಕಲಾ ಕೃತಿಯನ್ನು ರಚಿಸಲು ತಿಂಗಳುಗಟ್ಟಲೇ ಸಮಯ ತೆಗೆದುಕೊಳ್ಳುತ್ತಿದ್ದರು. ಅವರಲ್ಲಿ ಇರುವ ತಾಳ್ಮೆ ಅದರಿಂದ ಹುಟ್ಟುವ ಕಲಾ ಕೃತಿಯಲ್ಲಿರುವ ಗಟ್ಟಿತನವೆಷ್ಟು ಅನ್ನುವುದು ಇದರಿಂದಲೇ ತಿಳಿದುಕೊಳ್ಳಬಹುದು.

ರಾಬರ್ಟ್ ಅವರ ಕಲಾ ಕೃತಿಗಳು ಸ್ಪೇನ್, ಮೋರಾಕ್ಕೋ, ದೆಹಲಿ, ಬರೋಡಾ, ಲಂಡನ್, ಪ್ಯಾರೀಸ್, ಅಮಸ್ಟರ್‌ಡ್ಯಾಂ ಸೇರಿದಂತೆ ದೇಶ–ವಿದೇಶಗಳ ಅನೇಕ ಕಡೆ ಪ್ರದರ್ಶನಗೊಂಡಿವೆ.

ಇಲ್ಲಿಗೆ ಬಂದಿದ್ದು ಹೇಗೆ?: ಇದಕ್ಕೆ ಕಾರಣ ಭಾರತ ಪ್ರವಾಸ. ಹಿಮಾಲಯ ಹರಿದ್ವಾರದ ಪ್ರೇಕ್ಷಣೀಯ ಸ್ಥಳಗಳ ಸೌಂದರ್ಯವನ್ನು ಕಣ್ತುಂಬಿಕೊಂಡು ನಂತರ ತಮಿಳುನಾಡು, ಕೇರಳ, ಗುಜರಾತ್, ಕಲ್ಕತ್ತಾ ರಾಜ್ಯಗಳಿಗೆ ತನ್ನ ಪ್ರವಾಸವನ್ನು ವಿಸ್ತರಿಸಿದ ಕಲಾವಿದ ರಾಬರ್ಟ್ ಅನೇಕ ಸ್ಥಳಗಳನ್ನು ನೋಡಿದರು; ಆದರೆ ಆ ಸ್ಥಳಗಳು ಅವರಿಗೆ ಅಷ್ಟಾಗಿ





ಇಷ್ಟವಾಗಲಿಲ್ಲವಂತೆ. ಕನ್ಯಾಕುಮಾರಿ ವೀಕ್ಷಣೆಯ ಸಂದರ್ಭದಲ್ಲಿ ಸನ್ಯಾಸಿಯೊಬ್ಬರ ಪರಿಚಯವಾಗಿ ಭಾರತದ ಕುತೂಹಲದ ಸನ್ನಿವೇಶಗಳ ತವರು ಎಲ್ಲಿದೆ? ಎಂಬ ಪ್ರಶ್ನೆಗೆ ಅವರು ಪಕ್ಕದ ಕರ್ನಾಟಕದ ಕಡೆ ಬೆರಳು ಮಾಡಿದರಂತೆ.

ರಾತ್ರೋರಾತ್ರಿ ಕರುನಾಡ ಬಸ್ಸನ್ನೇರಿ ಇಳಿದಿದ್ದು ಮಾತ್ರ ನಾಡಿನ ಸುಪ್ರಸಿದ್ಧ ಪ್ರವಾಸಿ ತಾಣ ಹಂಪಿಯಲ್ಲಿ. ಇಲ್ಲಿರುವ ಪರಿಸರ.. ವಿಜಯನಗರದಲ್ಲರಳಿದ ಭಿನ್ನಕಟ್ಟಡಗಳು ರಮ್ಯ ನೋಟ ಅವರನ್ನು ವಿಸ್ಮಯಗೊಳಿಸಿತು. ಮುಂದೆ ತನ್ನ ತವರೂರ ಕಡೆ ಮುಖಮಾಡಲಿಲ್ಲ ಅವರು.

ರಾಬರ್ಟ್ ಗೀಸಿಂಕ್ ಮೂಲ ಹಾಲೆಂಡ್‌ನ ಆಮ್‌ಸ್ಟರ್‌ಡ್ಯಾಂ. ಇಲ್ಲಿ ಅವರು ಹುಟ್ಟಿದ್ದು. ಇವರ ತಂದೆ ಒಬ್ಬ ಕಮರ್ಷಿಯಲ್ ಪೇಂಟರ್. ಈ ಕಾರಣಕ್ಕೆ ಮನೆಯ ತುಂಬ ಬರೀ ಕಾಗದ, ಪೆನ್ಸಿಲ್, ಬಣ್ಣದ ಡಬ್ಬಿಗಳು. ಚಿಕ್ಕ ವಯಸ್ಸಿನ ರಾಬರ್ಟ್‌ನ ಮೇಲೆ ಈ ಪರಿಸರವು ತುಂಬಾ ಪ್ರಭಾವ ಬೀರಿತು. ಮನೆಯ ಅಂಗಳದಲ್ಲಿ ತನಗೆ ತೋಚಿದ ರೀತಿಯಲ್ಲಿ ಬಣ್ಣಗಳಿಂದ ರೇಖೆಗಳನ್ನು ಮೂಡಿಸುವುದರ ಮೂಲಕ ಚಿತ್ರಕಲೆಯ ಗೀಳನ್ನು ಹಚ್ಚಿಕೊಂಡಿದ್ದರು.

ತಂದೆ ತಾಯಿ ಇದ್ದರೂ ಬೆಳೆದದ್ದೆಲ್ಲಾ ಚಿಕ್ಕಮ್ಮನ ಮನೆಯಲ್ಲಿ. ಚಿಕ್ಕವಯಸ್ಸಿನಲ್ಲಿಯೇ ಬೆರಗು ಮೂಡಿಸುವಂತೆ ಕಲಾ ಕೃತಿಗಳನ್ನು ರಚಿಸಿದರು. ಹದಿನೇಳನೆ ವಯಸ್ಸಿಗೆ ಆಮ್‌ಸ್ಟರ್ ಡ್ಯಾಂ ನಗರದಲ್ಲಿದ್ದ ರಾಯಲ್ ಅಕಾಡೆಮಿಗೆ ಸೇರಿದರು. ಮೂರೇ ತಿಂಗಳಿಗೆ ಅದನ್ನು ಬಿಟ್ಟು ಹೊರಬಂದರು. ಆಮೇಲೆ ಚಿತ್ರಕಲೆಯೇ ಹವ್ಯಾಸವಾಯಿತು. ಜೊತೆಗೆ ಸ್ಯಾಕ್ಸೋಫೋನ್ ನುಡಿಸುವ ಗೀಳು ಹಚ್ಚಿಕೊಂಡರು.

ಇವರಿಗೆ ಪ್ರವಾಸವೆಂದರೆ ಬಲುಪ್ರೀತಿಯಾಗಿತ್ತು. ಚಿತ್ರಕಲೆಗಾಗಿ ಯೂರೋಪಿನ ಅಷ್ಟೂ ದೇಶಗಳಿಗೆ ಭೇಟಿ ಕೊಟ್ಟರು. ಪ್ಯಾರೀಸ್‌ನ ನೈಟ್ ಕ್ಲಬ್‌ಗಳಲ್ಲಿ ಸ್ಯಾಕ್ಸೋಫೋನ್ ನುಡಿಸಿದರು. ರಸ್ತೆಯ ಬದಿಯಲ್ಲಿ ಕುಳಿತು ರೇಖಾ ಚಿತ್ರಗಳನ್ನು ರಚಿಸಿ ಮಾರಾಟ ಮಾಡಿ ಹಣ ಗಳಿಸಿದರು. ಡಚ್ ಸರ್ಕಾರದವರು ಈ ಕಲಾವಿದನ ಸುಮಾರು 12

**ರಾತ್ರೋರಾತ್ರಿ ಕರುನಾಡ ಬಸ್ಸನ್ನೇರಿ ಇಳಿದಿದ್ದು ಮಾತ್ರ ನಾಡಿನ ಸುಪ್ರಸಿದ್ಧ ಪ್ರವಾಸಿ ತಾಣ ಹಂಪಿಯಲ್ಲಿ. ಇಲ್ಲಿರುವ ಪರಿಸರ.. ವಿಜಯನಗರದಲ್ಲರಳಿದ ಭಿನ್ನಕಟ್ಟಡಗಳು ರಮ್ಯ ನೋಟ ಅವರನ್ನು ವಿಸ್ಮಯಗೊಳಿಸಿತು. ಮುಂದೆ ತನ್ನ ತವರೂರ ಕಡೆ ಮುಖಮಾಡಲಿಲ್ಲ ಅವರು.**

ಕಲಾಕೃತಿಗಳನ್ನು ಖರೀದಿಸಿದ್ದರಿಂದ ಕೈತುಂಬ ಹಣ ಬಂತು. ತಕ್ಷಣ ಭಾರತ ಪ್ರವಾಸದ ಕನಸು ನನಸು ಮಾಡಿಕೊಂಡ ರಾಬರ್ಟ್ 1978 ರಲ್ಲಿ ಭಾರತಕ್ಕೆ ಬಂದು ನಿಂತರು ಎಂದು ಸ್ಮರಿಸುತ್ತಾರೆ ಹಂಪಿಯ ಎಂಪಿ ಪ್ರಕಾಶ ನಗರದ ನಿವಾಸಿಗಳು.

ಹಂಪಿಗೆ ಬಂದ ನಂತರ ಸೀತೆಯನ್ನು ಮದುವೆಯಾದರು. ಆಕೆಯ ಮರಣದ ನಂತರ ಜೈನಿಬಾಯಿ ಎಂಬುವವರನ್ನು ಮದುವೆಯಾದರು. ದಂಪತಿಗೆ ನಾಲ್ವರು ಮಕ್ಕಳಿದ್ದು ಎಲ್ಲರೂ ಹೊಸಪೇಟೆಯ ಶಾಲೆಯೊಂದರಲ್ಲಿ ಅಭ್ಯಸಿಸುತ್ತಿದ್ದಾರೆ.

ವಯಸ್ಸು 73 ಆಗಿದ್ದರೂ ಕುಂಚದ ನಂಟು ಬಿಟ್ಟಿರದ ರಾಬರ್ಟ್ ಅವರು ಕೊನೆಯವರೆಗೆ ಐತಿಹಾಸಿಕ ಹಂಪಿಯ ಪ್ರಕೃತಿಸೌಂದರ್ಯವನ್ನು ಕುಂಚದಲ್ಲಿ ಮರುಸೃಷ್ಟಿಸುತ್ತಲೇ ಕೊನೆಯುಸಿರೆಳೆದರು. ಕಲೆಗೆ ಯಾವ ಗಡಿಯೂ ಇಲ್ಲ ಎಂಬುದನ್ನು ರಾಬರ್ಟ್ ತೋರಿಸಿದರೆ ಮತ್ತೊಂದೆಡೆ ಹಂಪಿಯ ವೈವಿಧ್ಯಮಯ ತಾಣಗಳು ತಮ್ಮನ್ನು ಕುಂಚದ ಶ್ರೀಮಂತಿಕೆಯಲ್ಲಿ ಅಭಿವ್ಯಕ್ತಗೊಳಿಸುತ್ತಿದ್ದವನ್ನು ಕಳೆದುಕೊಂಡು ಬಡವಾಗಿವೆ.





# ಮುರುಳೀ ಗಾನ ಲೋಲ

## ಬಾಲಮುರುಳಿ ಕೃಷ್ಣ

ಕೆ.ಎಸ್.ಸೋಮೇಶ್ವರ

**ಕ**ರ್ನಾಟಕ ಸಂಗೀತ ಲೋಕದ ದಿಗ್ಗಜ, ತಮ್ಮದೇ ಆದ ವಿಶಿಷ್ಟ ಕಂಠ ಸಿರಿಯನ್ನು ಸಂಗೀತ ರಸಿಕರೆಲ್ಲರಿಗೆ ಉಣ ಬಡಿಸಿದ ಮಹಾನ್ ಗಾಯಕ ಡಾ. ಎಂ.ಬಾಲ ಮುರುಳಿಕೃಷ್ಣ.

ಮಂಗಳಂಪಲ್ಲಿ ಬಾಲ ಮುರುಳಿಕೃಷ್ಣರವರದು ವಿಭಿನ್ನ ಶೈಲಿಯ ಕರ್ನಾಟಕ ಸಂಗೀತವಾಗಿತ್ತು. ಇದು ಅಂದಿನ ಮಡಿವಂತಿಕೆಯಿಂದ ಬೇರೆಯೇ ಹಾದಿಯದಾಗಿತ್ತು. ಆದರೆ, ಇದರಿಂದ ಸಂಗೀತ ಶಾಸ್ತ್ರದ ಪಾರಮ್ಯತೆಗೆ ಎಂದೂ ಕುಂದು ಬರಲಿಲ್ಲ. ಬದಲಿಗೆ ಸಂಗೀತವೆನ್ನುವುದು ಬರಿಯ ವಿದ್ವಾಂಸರಿಗೆ ಮಾತ್ರವಲ್ಲ ಪ್ರತಿಯೊಬ್ಬರಿಗೂ ಮುಟ್ಟ ಬೇಕೆನ್ನುವ ವಾದವನ್ನು ಇವರು ಸಾಧ್ಯ ಮಾಡಿ ತೋರಿಸಿದವರಾಗಿದ್ದರು. ಬಾಲ್ಯದಿಂದಲೇ ಇವರು ಸಂಗೀತಕ್ಕೆ ಅರ್ಪಿತವೆನ್ನುವಂತಿದ್ದರು. ಇದಕ್ಕೆ ಮನೆಯ ವಾತಾವರಣ ಮತ್ತವರ ಆಸಕ್ತಿಯೂ ಪೂರಕವಾಗಿತ್ತು.

ಬಾಲ ಮುರುಳಿಯವರು 6.7.1930 ರಲ್ಲಿ ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಇಂದಿನ ಆಂಧ್ರ ಪ್ರದೇಶದಲ್ಲಿ ಜನಿಸಿದವರು. ಇವರ ತಂದೆ ಹಲವು ವಾದ್ಯಗಳನ್ನು ನುಡಿಸುವಲ್ಲಿ ನಿಷ್ಣಾತರಾಗಿದ್ದರೆ ತಾಯಿ ಉತ್ತಮ ವೀಣಾ ವಾದಕಿಯಾಗಿದ್ದರು. ಇವರ ಪ್ರಥಮ ಸಂಗೀತ ಕಛೇರಿ ಅವರ ಎಳೆಯ ವಯಸ್ಸಿನಲ್ಲೇ ವಿಜಯವಾಡದಲ್ಲಿನ ತ್ಯಾಗರಾಜ ಆರಾಧನ ಮಹೋತ್ಸವದಲ್ಲಿ ನಡೆದು ಅಂದೇ ಸಂಗೀತ ರಸಿಕರ ಮನ ಗೆದ್ದರು. ಸಂಗೀತವೆನ್ನುವುದು ಇವರಿಗೆ ರಕ್ತದಲ್ಲೇ ಇದ್ದಿತು ಎಂದರೆ ಅತಿಶಯೋಕ್ತಿಯಲ್ಲ. ಇವರ ಸಂಗೀತ ಸಾಧನೆಯನ್ನು ಗುರುತಿಸಿ ಇವರನ್ನು ಅಲಂಕರಿಸಿದ ಪದವಿ, ಪ್ರಶಸ್ತಿಗಳು ಅಪಾರ. ಇವರ ಸಂಗೀತ ಸಾಹಿತ್ಯದ ರಚನೆ ಪಾರಂಪರಿಕ ಚೌಕಟ್ಟನ್ನು ಮೀರಿದಂತೆನಿಸಿದರೂ ಕರ್ನಾಟಕ ಸಂಗೀತ ಶಾಸ್ತ್ರದ ಹಿರಿಮೆಗೆ ಕುಂದಾಗದೇ ಹೊಸ ಹೊಸ ರಾಗಗಳ ರಚನೆಯೇ ಅಲ್ಲದೇ ಅದಕ್ಕೆ ಇವರ ತುಂಬು ಕಂಠದ ಹಾಡಿನ ಶೈಲಿಯ ವಿಶಿಷ್ಟ ಗಾಂಭೀರ್ಯ ಮತ್ತು ಮಾಧುರ್ಯವಿರುತ್ತಿತ್ತು. ಇವರು ಬರಿಯ ಗಾಯಕರಾಗಿರಲಿಲ್ಲ. ಬದಲಿಗೆ, ಹೊಸ ಹೊಸ ರಾಗಗಳ ಸಂಶೋಧಕ, ಸಹಸ್ರಾರು ಗೀತೆಗಳ ರಚನಕಾರ ಅಲ್ಲದೇ

ವಯೋಲ (ಪಿಟೀಲು ಮಾದರಿ), ಮೃದಂಗ ಮತ್ತು ಖಂಜಿರ ವಾದ್ಯಗಳ ನುಡಿಸುವಿಕೆಯಲ್ಲೂ ಪರಿಣಿತರಾಗಿದ್ದರು. ಅನೇಕ ಬಾರಿ ಇವರು ವಯೋಲ ವಾದ್ಯ ಬಳಸಿ ಕಛೇರಿಗಳನ್ನು ನಡೆಸಿ ರಸಿಕರ ಮನ ತುಂಬಿದ್ದಾರೆ.

ಇವರ ಸಾಧನೆ ಇವರನ್ನು ಹುಡುಕಿಕೊಂಡು ಬಂದ ಪ್ರಶಸ್ತಿಗಳು ಹಲವಾರು. ಅವುಗಳಲ್ಲಿ ಕೆಲವೆಂದರೆ ಪದ್ಮಶ್ರೀ – 1971 ರಲ್ಲಿ, –ಸಂಗೀತ ಕಲಾನಿಧಿ – 1978 , ಪದ್ಮ ವಿಭೂಷಣ –1991. ವಿಸ್ಡಮ್ ಮ್ಯಾನ್ ಆಫ್ ದ ಇಯರ್ – 1992, ನಾದ ಬ್ರಹ್ಮ – ನೃತ್ಯಾಲಯ ಈಸ್ತೆಟಿಕ್ ಸಂಘದ ಪ್ರಶಸ್ತಿ, –1996 .. ಇನ್ನೂ ಹಲವಾರು

ಇವರು ರಚಿಸಿದ ರಾಗಗಳು ಕೆಲವೆಂದರೆ ಮಹತಿ, ತ್ರಿಶಕ್ತಿ, ಸುಮುಖಂ, ಸರ್ವಶ್ರೀ, ಓಂಕಾರಿ, ಲವಂಗಿ, ರೋಹಿಣಿ, ವಲ್ಲಭಿ ಮುಂತಾದವುಗಳು ತ್ಯಾಗರಾಜರ ನಗುಮೋಮು ಘನಲೇನಿ ಮೊದಲಾಗಿ ಓಂಕಾರ ಪ್ರಣವ, ಸೀತಾ ಕಲ್ಯಾಣ ವೈಭೋಗಮೆ, ಜಗದಾನಂದ ಕಾರಕ, ಗಾಯತ್ರಿ ವನಮಾಲಿ ಇಂತಹ ಅನೇಕ ಕೃತಿಗಳನ್ನು ಹಾಡುವುದರಲ್ಲಿ ಇವರು ತಮ್ಮದೇ ಆದ ವಿಶಿಷ್ಟತೆಯನ್ನು ಹೊಂದಿದ್ದರು.

ಬಾಲ ಮುರುಳಿಯವರಿಗೆ ಹಿಂದುಸ್ತಾನಿ ಸಂಗೀತವೂ ಅತ್ಯಂತ ಹತ್ತಿರವಾಗಿತ್ತು. ಅದರಲ್ಲೂ ಜುಗಲ್ ಬಂದಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಇವರಿಗೆ ಪ್ರಿಯವಾಗಿತ್ತು. ಪಂಡಿತ್ ಭೀಮಸೇನ ಜೋಶಿ, ಕಿಶೋರಿ ಅಮೋಣ್ಕರ್, ವಿಖ್ಯಾತ ಕೊಳಲು ವಾದಕ ಪಂಡಿತ್ ಹರಿಪ್ರಸಾದ್ ಚೌರಾಸಿಯ ಇವರುಗಳೊಂದಿಗೆ ಅನೇಕ ಜುಗಲ್ ಬಂದಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಮಿಲೇ ಸುರ್ ತುಮ್ಹಾರ ಎಂಬ ಭಾವೈಕ್ಯ ಗೀತ ಗುಚ್ಛದಲ್ಲಿ ಇವರ ಪಾಲೂ ಇದ್ದಿತು. ಹೈದರಾಬಾದ್ – ವಿಜಯವಾಡ ಆಕಾಶವಾಣಿ ಕೇಂದ್ರದಲ್ಲಿ ಇವರು ನಡೆಸಿಕೊಡುತ್ತಿದ್ದ ಭಕ್ತಿ ರಂಜಿನಿ ಎಂಬ ಸಂಗೀತ ಪ್ರಧಾನ ಕಾರ್ಯಕ್ರಮ ಈಗಲೂ ಮುಂದುವರೆಯುತ್ತಿದ್ದು ಅದರ ವಿಶೇಷತೆಯ ತೂಕವನ್ನು ಹೇಳುತ್ತದೆ.

ಚಲನ ಚಿತ್ರಗಳಿಗೆ ಬಂದರೆ ಅದರಲ್ಲೂ ಇವರ ವಿಶೇಷ ಛಾಪು ಕಾಣಿಸುತ್ತದೆ. ತೆಲುಗಿನ ಭಕ್ತ ಪ್ರಹ್ಲಾದದಲ್ಲಿನ ಇವರ ನಾರದನ ಪಾತ್ರ ಅವಿಸ್ಮರಣೀಯವೆನ್ನುತ್ತಾರೆ. ತಮಿಳಿನ ಒಂದು ಪ್ರಮುಖ ಚಲನ ಚಿತ್ರ ತಿರುವಿಳೈಯಾಡಲ್‌ನಲ್ಲಿನ ಇವರ 'ಒರು ನಾಳ್ ಪೋದುಮಾ' ಗೀತೆಯ ರಚನೆ ಮತ್ತು ಗಾಯನ ಇಡೀ ಚಿತ್ರಕ್ಕೆ ಮೆರುಗು ನೀಡಿತ್ತು. ಇದಲ್ಲದೇ, ಅನೇಕ ತೆಲುಗು ಮತ್ತು ಮಲೆಯಾಳಂ ಚಿತ್ರಗಳಲ್ಲೂ ಇವರ ಕಂಠ ಸಿರಿಯಿದ್ದು ಹಲವು ಪ್ರಶಸ್ತಿಗೂ ಭಾಜನವಾಗಿವೆ.

ಕನ್ನಡ ಗೀತೆಗಳಿಗೆ ಬಂದರೆ ಬಾಲ ಮುರುಳಿಯವರ ಛಾಪು ಅವರು ಹಾಡುತ್ತಿದ್ದ ದಾಸರ ಪದಗಳಲ್ಲಿರುತ್ತಿತ್ತು. ಪುರಂದರದಾಸರು, ಕನಕ ದಾಸರು ಮತ್ತು ಇನ್ನೂ ಅನೇಕ ದಾಸ ವರೇಣ್ಯರ ಸಾಹಿತ್ಯದಲ್ಲಿಯೇ ಅಂದಿನ ಸಮಾಜದ ಓರೆ ಕೋರೆಗಳನ್ನು ಹೇಳುವ ಮತ್ತು ತಿದ್ದುವ ಪರಿ ಸುಂದರ, ಸರಳ ಪದಗಳಲ್ಲಿ ಇರುತ್ತಿತ್ತು. ಇದನ್ನು ಬರಿಯ ಸುಶ್ರಾವ್ಯ ಗೀತೆಗಳಾಗಿ ಮಾತ್ರ ಹಾಡದೇ ಅದರಲ್ಲಿನ ಪದ ವಿಶೇಷಗಳಿಗೆ ಒತ್ತು ಕೊಟ್ಟು ಹಾಡಿನ ಅರ್ಥ ಮನ ಮುಟ್ಟುವಂತೆ ಜನರಿಗೆ ತಲುಪಿಸುವ ಮನೋಧರ್ಮ ಬಾಲ ಮುರುಳಿಯವರ ಸಂಗೀತದ ಮನೋಧರ್ಮವಾಗಿತ್ತು. 'ಸತ್ಯವಂತರಿಗಿದು ಕಾಲವಲ್ಲ, ದುಷ್ಟ ಜನರಿಗಿದು ಸುಭಿಕ್ಷ ಕಾಲ...' ಎಂಬ ದಾಸರ ರಚನೆಯನ್ನು ಇವರ ಕಂಠದಲ್ಲಿ ಕೇಳುವುದೇ ಒಂದು ರೀತಿಯ ತೃಪ್ತಿ ನೀಡುತ್ತದೆ. ಇವರು ದಾಸರ ರಚನೆಗಳನ್ನು ಹಾಡುತ್ತಿದ್ದ ವಿಶಿಷ್ಟ ಶೈಲಿಗೆ ಇದೊಂದು ಉದಾಹರಣೆ ಮಾತ್ರ. ಇವರು ಆ ರಚನೆಗಳ ಮೌಲ್ಯವನ್ನು ಇನ್ನಷ್ಟು ಎತ್ತರಕ್ಕೆ ಏರಿಸಿದ್ದಾರೆ.

ಕನ್ನಡ ಚಲನ ಚಿತ್ರಗಳಿಗೆ ಬಂದರೆ ಇವರ ನಂಟು ಸುಮಾರು ಅರವತ್ತು ವರ್ಷಗಳದು. ಅದರಲ್ಲೂ ಇವರ ಛಾಪು ಅಗಾಧ. ಸ್ವರ್ಣ ಗೌರಿ ಚಿತ್ರದ ಎಸ್.ಕೆ. ಕರೀಮ್ ಖಾನ್ ರಚನೆಯಾದ 'ನಟವರ ಗಂಗಾಧರ...' ಬಾಲ ಮುರುಳಿಯವರ ಕಂಠದಲ್ಲಿ ಬಂದು ಅದು ಹಳತೇ ಆಗುವುದಿಲ್ಲ. ಕನ್ನಡಕ್ಕೆ ಇದು ಇವರ ಮೊದಲ ಕಾಣಿಕೆಯೆನ್ನಬಹುದು. ನಂತರ ಅಶ್ವಥ್‌ರವರು ನಟಿಸಿದ ಶ್ರೀ ಪುರಂದರದಾಸರು ಚಿತ್ರದಲ್ಲೂ ಇವರ ದಾಸರ ಪದಗಳ ಹಾಡುವಿಕೆ ಚಿರ ಸ್ಮರಣೀಯ. ಹಂಸ ಗೀತೆ ಚಿತ್ರದ 'ಹಿಮಾದ್ರಿ ಸುತೆ.....' ಅದೇ ರೀತಿ ಇಡೀ ಚಿತ್ರದಲ್ಲಿ ಇವರು ಹಾಡಿದ ಜಯದೇವನ ಅಷ್ಟ ಪದಿಗಳು. ಬಹುಶಃ ಅಷ್ಟ ಪದಿಗಳ ಗಾಯನ ಯಾವುದೇ ಸಂಗೀತ ಕಛೇರಿಯಲ್ಲಿ ಅಪರೂಪವೆನ್ನಬಹುದು. ಅಂತಹುದನ್ನು ಈ ಚಿತ್ರದಲ್ಲಿ ಪರಿಚಯಿಸಿದವರು ಜಿ.ವಿ.ಅಯ್ಯರ್ ರವರಾದರೆ ಅದನ್ನು ಸಂಗೀತ ಪ್ರಿಯರಿಗೆ ಉಣ ಬಡಿಸಿದವರು ಬಾಲ ಮುರುಳಿಯವರು. ಇವರದೇ ರಚನೆ, ಸಂಗೀತ, ಗಾಯನ ಮಧ್ವಾಚಾರ್ಯ ಚಿತ್ರಕ್ಕೆ ಮುಕುಟ ಪ್ರಾಯವಾದದ್ದೇ ಅಲ್ಲದೇ ಅದು ಪ್ರಶಸ್ತಿಗೂ ಭಾಜನವಾಯಿತು. ಇವುಗಳೆಲ್ಲದರ ಜೊತೆಗೆ ಮರೆಯಲಾರದ ಹಾಡೆಂದು ಗುರುತಿಸಲ್ಪಟ್ಟಿರುವ ಮುತ್ತಿನ ಹಾರ ಚಲನ ಚಿತ್ರದ 'ದೇವರು ಹೊಸೆದ ಪ್ರೇಮದ ಹಾರ .......' . ಈ ಗೀತೆಯನ್ನು ಬಾಲ ಮುರುಳಿಯವರಿಂದಲೇ ಹಾಡಿಸುವ ಛಲ ಮತ್ತು ಅದಕ್ಕೆ ಅವರನ್ನು ಒಪ್ಪಿಸಲು ಪಟ್ಟ ಪರಿಶ್ರಮ ಚಿತ್ರದ ತಯಾರಿಕಾ ತಂಡದವರಿಗೆ ಮರೆಯಲಾಗದ ಘಟನೆ. ಇದು ಇಡೀ ಚಿತ್ರಕ್ಕೇ ಒಂದು ಪ್ರತ್ಯೇಕ ಮೆರುಗನ್ನು ನೀಡಿದೆ.

ಹೀಗೆ, ಬಾಲಮುರುಳಿ ಕೃಷ್ಣ ರವರ ಸಂಗೀತ ಸಾಧನೆಯ ಬಗ್ಗೆ ಬರೆದಷ್ಟೂ ಕಡಿಮೆಯೇ. ಇವರ ಸಂಗೀತದಲ್ಲಿನ ಹೊಸತನ ರಚನೆ, ಗಾಯನ ಮತ್ತು ರಾಗ ತಾಳಗಳಲ್ಲಿ ಎದ್ದು ಕಾಣುತ್ತಿತ್ತು. ಅದೇ ರೀತಿ ಅವರ ಕಂಠ ಸಿರಿ. ಸಾವಿರಾರು ರಚನೆಗಳು ಇವರ ಅನುಪಮ ಧ್ವನಿಯಲ್ಲಿ ಮೂಡಿ ಬಂದಿದೆ. ಯಾವುದೇ ಸಂಗೀತ ಕಛೇರಿಯಿರಲಿ ಮುಕ್ತಾಯದ ಹಂತದಲ್ಲಿ ತಿಲ್ಲಾನ ಹಾಡುವುದು ಒಂದು ಸಂಪ್ರದಾಯ. ಅಂತಹ ನೂರಾರು ತಿಲ್ಲಾನಗಳು ಬಾಲ ಮುರುಳಿಯವರ 'ಮುರುಳೀ ಗಾನ ಲೋಲ' ಎಂಬ ಅಂಕಿತ ನಾಮದಲ್ಲಿ ಸಂಗೀತ ಕ್ಷೇತ್ರದಲ್ಲಿ ಚಿರಪರಿಚಿತ. ಇಂತಹ ಅಮರ ಗಾಯಕರ ಧ್ವನಿ ಯಾವಾಗಲೂ ಅಮರ. ಅದಕ್ಕೆ ಸರಿ ಸಾಟಿ ಸಿಗುವುದಿಲ್ಲ. ಅವರಿಂದು ನಮ್ಮೊಂದಿಗಿಲ್ಲ. ಆದರೆ ಅವರ ಧ್ವನಿ ನಮ್ಮೊಂದಿಗೆ ಎಂದೆಂದಿಗೂ ಚಿರಂತನ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050